ಸಾಹಿತ್ಯ ದಾಸೋಹ – 224

ಸಂಚಿಕೆ 48 – ಮೇ 2024

14.04.2024ರ ದಾಸೋಹದ ಬರಹಗಳ ಸಂಕಲನ









ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

14.04.2024ರಂದು ನಡೆದ 224ನೆಯ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತ ಪಡಿಸಲಾದ ಬರಹಗಳು, ಏಪ್ರಿಲ್ ತಿಂಗಳಲ್ಲಿ 'ಕವಿ ಮನ' ಅಂಕಣದಲ್ಲಿ ಮೂಡಿಬಂದ ಕವನಗಳನ್ನೊಳಗೊಂಡ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ.

27.04.2024ರಂದು ನಡೆದ 4ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ 'ಯಶವಂತ ಚಿತ್ತಾಲರ ಸಾಹಿತ್ಯ ಏಕೆ ಮುಖ್ಯ' ಎಂಬ ವಿಷಯದ ಕುರಿತು ಡಾ. ಮೇಘನಾ ಕೆ. ಅವರು ಉಪನ್ಯಾಸ ನೀಡಿದರು. ಡಾ. ಮೇಘನಾ ಅವರಿಗೆ ವಂದನೆಗಳು.

ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಎಂ.ಜಿ. ವೆಂಕಟೇಶ ಮೂರ್ತಿ ಯವರಿಗೂ, ದಾಸೋಹದಲ್ಲಿ ಸ್ವರಚಿತ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲಾ ದಾಸೋಹಿಗಳಿಗೂ, ವೀಕ್ಷಕರಿಗೂ, ನಮ್ಮ ಎಲ್ಲ ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ ಹಾಗೂ ಈ ಸಂಚಿಕೆ ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು

11.05.2024

ದಾಸೋಹದ ಪುಟಗಳಲ್ಲಿ

01	ಸಾಹಿತ್ಯ ದಾಸೋಹ 224 – ಕಾರ್ಯಕ್ರಮ ವರದಿ	ರಾಧಿಕಾ ವಿ. ಗುಜ್ಜರ್	4
02	'ತಿಂಗಳ ಬೆಳಕು' – ಕಾರ್ಯಕ್ರಮ ವರದಿ	ಹು.ವಾ. ಶ್ರೀಪ್ರಕಾಶ್	6
03	'ಕವಿ ಮನ' – ನಾಲ್ಕು ಕವನಗಳು	ವಿವಿಧ ಕವಿಗಳು	9
04	ಅಂಶೀ ಛಂದಸ್ಸು	ಗಣಪತಿ ಹೆಗಡೆ	12
05	ಸೋಮಾರಿತನವೇ ಶತ್ರು	ಹು.ವಾ. ಶ್ರೀಪ್ರಕಾಶ್	15
06	ಎಚ್ಚರ ಮತದಾರ ಎಚ್ಚರ (ಕವನ)	ಪೂರ್ಣಿಮಾ ಭಗವಾನ್	18
07	ವೆಂಕಿ ಅಂತಾಳ !!!	ರೇಣುಕಾ ದೇಸಾಯಿ	19
08	ತುಟ್ಟಿಯ ತುಣುಗಳು	ವಿಠ್ಠಲ ಇಜೇರಿ	24
09	ಮತ್ತೆ ಬಂತು ಯುಗಾದಿ (ಕವನ)	ಅನ್ನಪೂರ್ಣ ಸುಬ್ಬರಾವ್	26
10	ಆವರಣ (ಕವನ)	ಶೀಲಾ ಅರಕಲಗೂಡು	26
11	ಶುನಕಗಳ ಜಾಲದಲ್ಲಿ	ಎಲ್. ಗಿರಿಜಾ ರಾಜ್	27
12	ತಾಯ್ತನದ ಸವಿ (ಕವನ)	ಮಾಲತಿ ಶ್ರೀನಿವಾಸನ್	30
13	ರೇ.. ರಾಜ್ಯ (ಕವನ)	ಮಾಲತಿ ಶ್ರೀನಿವಾಸನ್	30
14	ಹಿರೋಷಿ	ನಾಗರತ್ನ ಚಂದ್ರಶೇಖರ್	31
15	ದೇವಾಲಯ ಪ್ರವಾಸೋದ್ಯಮ–ದೇಶದ ಆರ್ಥಿಕತೆಗೆ ಒಂದು ದಿಕ್ಸೂಚಿ	ಜಿ.ವಿ. ಅರುಣ	34
16	ಹದಿನೆಂಟನೇ ಲೋಕ	ಜಿ.ವಿ. ನಿರ್ಮಲ	37
17	ಆಹಾರ ಸಮಸ್ಯೆ	ಮಹಾಬಲ	40
18	ಭಗತ್ ಸಿಂಗ್ ಬರೆದ ಮುನ್ನುಡಿ	ಬೆಂ.ಶ್ರೀ. ರವೀಂದ್ರ	43
19	ಬಹುಮುಖ ಪ್ರತಿಭೆಯ ಉದಯ್ ಜಾದೂಗಾರ್	ಎಂ.ಜಿ.ವೆಂಕಟೇಶ ಮೂರ್ತಿ	47
20	ಸಾಹಿತ್ಯ ದಾಸೋಹ 224 – ಅಧ್ಯಕ್ಷರ ಅನಿಸಿಕೆಗಳು	ಎಂ.ಜಿ.ವೆಂಕಟೇಶ ಮೂರ್ತಿ	49

ಮುಖಚಿತ್ರ: ಭಾರತದಲ್ಲಿ ಮತದಾನದ ಹಬ್ಬ (ಹಳೆ, ಹೊಸ ಸಂಸತ್ ಭವನ – ಚಿತ್ರ ಕೃಪೆ: ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 224

ಕಾರ್ಯಕ್ರಮ ವರದಿ – ರಾಧಿಕಾ ವಿ. ಗುಜ್ಜರ್

14.04.2024ರಂದು ಭಾನುವಾರ ಇಳಿ ಮಧ್ಯಾಹ್ನ 3.36ಕ್ಕೆ ಸರಿಯಾಗಿ ಅಂತರಜಾಲ ವೇದಿಕೆಯಲ್ಲಿ ಏಪ್ರಿಲ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಆರಂಭವಾಯಿತು.

ಶ್ರೀ ಕೆ. ಎನ್. ಮಹಾಬಲ ಅವರು ಈವರೆಗೆ 74 ದಾಸೋಹಗಳ ಸಾರಥ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಇಂದಿನ 75ನೆಯ ಸಾಹಿತ್ಯ ದಾಸೋಹದ ಸಭಾ ಸಾರಥ್ಯ ನಿರ್ವಹಣೆಗಾಗಿ ಅವರಿಗೆ ಸಂಚಾಲಕ ಸಮಿತಿಯು ಅಭಿನಂದನೆಗಳನ್ನು ತಿಳಿಸಿತು.

ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ಸಾಹಿತ್ಯ ದಾಸೋಹದ ಅಧ್ಯಕ್ಷರಾದ ಶ್ರೀ ಎಂ.ಜಿ. ವೆಂಕಟೇಶ ಮೂರ್ತಿ ಅವರನ್ನು ಸ್ವಾಗತಿಸಿ, ಪರಿಚಯಿಸಿದರು.

ನಂತರ ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ,

- ಈ ಹಿಂದೆ ಭೌತಿಕ ಸಭೆಗಳಾಗಿ ನಡೆದು ಬಂದ ಸಾಹಿತ್ಯ ದಾಸೋಹವು, ಕರೋನಾದ ಕ್ಲಿಷ್ಟ ದಿನಗಳಲ್ಲಿ ತಾಂತ್ರಿಕತೆಯ ನೆರವಿನಿಂದ ಅಂತರ್ಜಾಲದ ಗೂಗಲ್ ಮೀಟ್ ಮುಖೇನ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯ ಸಭೆಯಾಗಿ ಬೆಳೆದ ದಾರಿಯನ್ನು ಸ್ಮರಿಸಿ, ಪ್ರತೀ ಮಾಹೆಯ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಿ ಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಲೇಖನಗಳ ಸಂಖ್ಯೆಯನ್ನೂ ವೃದ್ಧಿಸಬೇಕೆಂದು ಕರೆ ನೀಡಿದರು.
- ಇಂದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 133ನೆಯ ಜನ್ಮದಿನದ ಅಂಗವಾಗಿ ಸಂವಿಧಾನ ಶಿಲ್ಪಿಗೆ ಸಭೆಯ ನಮನ ಸಲ್ಲಿಸಿದರು.
- 140 ಕೋಟಿ ಜನಸಂಖ್ಯೆಯ ಭಾರತ ದೇಶದಲ್ಲಿ ಸದ್ಯದಲ್ಲಿಯೇ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ, ತಪ್ಪದೇ ಮತದಾನ ಮಾಡಲು ಕರೆ ನೀಡಿದರು.



- 'ಸಣ್ಣ ಕಥೆಗಳ ಶ್ರಾವಣ' ಅಭಿಯಾನವನ್ನು ಕುರಿತ ಬೆಳವಣಿಗೆಯನ್ನು ವಿವರಿಸಿ, ಶ್ರೀ ಗುರುರಾಜ ಶಾಸ್ತ್ರಿ ಯವರು ಇದರ ಸಂಪಾದಕತ್ವದ ಹೊಣೆ ಹೊತ್ತಿದ್ದು, ಅಭಿಯಾನದಲ್ಲಿ ಭಾಗವಹಿಸಿ ಇದುವರೆಗೂ ತಮ್ಮ ಕಥೆಗಳನ್ನು ಕಳಿಸದೇ ಇರುವವರು ಕಡ್ಡಾಯವಾಗಿ ತಲಾ ಎರಡು ಕಥೆಗಳನ್ನು ಕಳಿಸಬೇಕೆಂದು ವಿಜ್ಞಾಪಿಸಿದರು.

- ಈಗೀಗ ವಿವಿಧ ಬಗೆಯ ಸಾಹಿತ್ಯಕ ಪ್ರಶಸ್ತಿಗಳಿಗೆ ಭಾಜನರಾಗುವ ವೇದಿಕೆಯ ಸದಸ್ಯರ ಸಂಖ್ಯೆ ಹೆಚ್ಚುತ್ತಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿ, ಇತ್ತೀಚೆಗೆ ಪ್ರಶಸ್ತಿಗಳನ್ನು ಗಳಿಸಿದ ಶ್ರೀಮತಿ ಟಿ.ಎಸ್. ಶ್ರವಣಕುಮಾರಿ, ಶ್ರೀ ಜಿ.ವಿ. ಅರುಣ ಹಾಗೂ ವಿಜೇತರೆಲ್ಲರನ್ನೂ ಅಭಿನಂದಿಸಿದರು.
- ಮುಂಬರುವ ಮೇ 26ರ ಭಾನುವಾರ ನಡೆಯಲಿರುವ 'ಎಚ್ಚೆಸ್ಕೆ ಬೆಳಕು' 9ನೆಯ ಆವೃತ್ತಿ ಕಾರ್ಯಕ್ರಮದಲ್ಲಿ ಶ್ರೀಮತಿ ಕೆರೋಡಿ ಲೋಲಾಕ್ಷಿ ಹಾಗೂ ಶ್ರೀ ಹೆಚ್. ಶ್ರೀಧರ ರಾವ್ ಅವರಿಂದ ಉಪನ್ಯಾಸಗಳು, ಶ್ರೀ ಧೀರೇಂದ್ರ ಅವರ ನಿರ್ದೇಶನದ ಎರಡು ನಾಟಕಗಳು ಹಾಗೂ ಚುಟುಕು ಕವಿಗೋಷ್ಠಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಬಗ್ಗೆ ಘೋಷಿಸಿದರು.

ಬಳಿಕ ಶ್ರೀ ಶೃಂಗೇಶ್ವರ ಶರ್ಮ ಅವರು ಕಳೆದ ತಿಂಗಳು ನಡೆದ 'ಸಾಹಿತ್ಯ ದಾಸೋಹ–223' ಸಂಚಿಕೆಯನ್ನು ಬಿಡುಗಡೆ ಮಾಡಿ, ಈ ಬಾರಿ ಎಲ್ಲ ಬರಹಗಾರರೂ ಸರಿಯಾದ ಸಮಯಕ್ಕೆ ತಮ್ಮ ಲೇಖನಗಳನ್ನು ಕಳಿಸಿರುವ ಬಗ್ಗೆ ಹಾಗೂ ಲೇಖನಗಳಲ್ಲಿ ತಿದ್ದುಪಡಿಗಳು ತೀರಾ ಕಡಿಮೆಯಾಗಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸರಿಯಾಗಿ 4.00 ಗಂಟೆಗೆ ಸಾಹಿತ್ಯ ದಾಸೋಹದ ಪ್ರಸ್ತುತಿಗಳು ಆರಂಭವಾಗಿ, ಮೊದಲೇ ನೋಂದಾಯಿಸಿಕೊಂಡ 15 ಬರಹಗಾರರ ಪೈಕಿ 15 ದಾಸೋಹಿಗಳು ತಮ್ಮ ಲೇಖನಗಳನ್ನು ಪ್ರಸ್ತುತಪಡಿಸಿದರು. ಕೊನೆಗೆ ಅಧ್ಯಕ್ಷರಾದ ಶ್ರೀ ಎಂ.ಜಿ.ವೆಂಕಟೇಶಮೂರ್ತಿಯವರು ತಮ್ಮ ಪ್ರಸ್ತುತಿಯನ್ನು ನೀಡಿದರಲ್ಲದೆ, ಇತರ ಎಲ್ಲ ಪ್ರಸ್ತುತಿಗಳ ಬಗ್ಗೆಯೂ ತಮ್ಮ ಅಧ್ಯಕ್ಷೀಯ ಅನಿಸಿಕೆಗಳನ್ನು ದಾಖಲಿಸಿದರು. ಅಧ್ಯಕ್ಷರು ಪ್ರತಿಯೋರ್ವ ಪ್ರಸ್ತುತಿಕರ್ತರ ಸಾಹಿತ್ಯಪಥದ ವಿಶೇಷತೆಗಳು, ಅವರ ಸಾಧನೆಗಳು, ಎಲ್ಲವನ್ನು ಚುಟುಕಾಗಿ ವಿವರಿಸುತ್ತಾ ಅವರ ಅಂದಿನ ಪ್ರಸ್ತುತಿಯನ್ನು ವಿಶ್ಲೇಷಿಸಿದ್ದು ಅತ್ಯಂತ ವಿಶೇಷವಾದ ಗಮನ ಸೆಳೆಯಿತು.

ಕಾರ್ಯಕ್ರಮದ ಸೂತ್ರಧಾರರಾಗಿದ್ದ ಶ್ರೀ ಕೆ.ಎನ್.ಮಹಾಬಲ ಅವರ ವಂದನಾರ್ಪಣೆಯೊಂದಿಗೆ ಸರಿಯಾಗಿ ಸಂಜೆ 6.00 ಗಂಟೆಗೆ 224ನೇ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ. ಎನ್. ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ ಗುಜ್ಜರ್
ವಿಡಿಯೋ ಮುದ್ರಣ : ಶ್ರೀಮತಿ ರೇಣುಕಾ ದೇಸಾಯಿ
ಸಾಹಿತ್ಯ ದಾಸೋಹದ ಮಾಸಿಕ ಈ–ಸಂಚಿಕೆ ಪಿ ಡಿ ಎಫ್ : ಶ್ರೀ ಶೃಂಗೇಶ್ವರ ಶರ್ಮ

ಸಾಹಿತ್ಯ ದಾಸೋಹ 223ರ ಇಡೀ ಕಾರ್ಯಕ್ರಮವನ್ನು ನಮ್ಮ ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***


ತಿಂಗಳ ಬೆಳಕು - 4

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

"ಯಶವಂತ ಚಿತ್ತಾಲರ ಸಾಹಿತ್ಯ ಏಕೆ ಮುಖ್ಯ"

ಉಪನ್ಯಾಸಕರು: ಡಾ. ಮೇಘನಾ ಕೆ.

ದಿನಾಂಕ 27ನೆಯ ಏಪ್ರಿಲ್ 2024ರಂದು ಶನಿವಾರ ಸಂಜೆ 6 ರಿಂದ 7 ಗಂಟೆವರೆಗೆ ಅಂತರಜಾಲ ಮುಖೇನ ನಡೆದ 'ತಿಂಗಳ ಬೆಳಕು' ನಾಲ್ಕನೇ ಕಾರ್ಯಕ್ರಮದಲ್ಲಿ ಡಾ. ಮೇಘನಾ ಕೆ. ಅವರು 'ಯಶವಂತ ಚಿತ್ತಾಲರ ಸಾಹಿತ್ಯ ಏಕೆ ಮುಖ್ಯ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.



ಶ್ರೀ ರವಿ ಕುಸುಬಿಯವರ ಪ್ರಾಸ್ತಾವಿಕ ಮಾತುಗಳೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾ ದೇಸಾಯಿಯವರು ಎಲ್ಲರನ್ನೂ ಸ್ವಾಗತಿಸಿ ಉಪನ್ಯಾಸಕರನ್ನು ಪರಿಚಯಿಸಿದರು.

ಚಿತ್ತಾಲರ ಭಾವಪ್ರಪಂಚವೇ ಇಂದು ನಮ್ಮೆಲ್ಲರನ್ನೂ ಒಟ್ಟುಗೂಡಿಸಿದೆ ಎಂದ ಡಾ. ಮೇಘನಾರವರು. ಈ ಅವಕಾಶ ಒದಗಿಸಿದ ಸಸಕಸ ವೇದಿಕೆಗೆ ಧನ್ಯವಾದ ತಿಳಿಸಿ ಉಪನ್ಯಾಸ ಆರಂಭಿಸಿದರು. ಅವರ ಉಪನ್ಯಾಸದ ಮುಖ್ಯಾಂಶಗಳು ಹೀಗಿವೆ:

ಯಶವಂತ ಚಿತ್ತಾಲರು ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಹನೇಹಳ್ಳಿಯಲ್ಲಿ ಆಗಸ್ಟ್ 3, 1926ರಂದು ಜನಿಸಿದರು. ಹನೇಹಳ್ಳಿ, ಕುಮುಟಾ, ಧಾರವಾಡ, ಮುಂಬೈಗಳಲ್ಲಿ ಶಿಕ್ಷಣ ಪಡೆದ ಇವರು, ಅಮೇರಿಕಾದ ನ್ಯೂಜೆರ್ಸಿಯಲ್ಲಿ ಉನ್ನತ ವ್ಯಾಸಂಗ ಮಾಡಿದರು.

ಯಶವಂತ ಚಿತ್ತಾಲರು ನವ್ಯ ಕಾಲಘಟ್ಟಕ್ಕೆ ಸೇರುವ ಒಬ್ಬ ಅಪರೂಪದ ಸಾಹಿತಿಯಾಗಿದ್ದು, ಅವರನ್ನು ಹೊಸಗನ್ನಡ ನವ್ಯ ಸಾಹಿತ್ಯದ ಹಿನ್ನೆಲೆಯಲ್ಲಿ ಗುರುತಿಸಬಹುದು.

ನಾವು ಮನುಷ್ಯರಾಗಿ ಹುಟ್ಟಿದವರಲ್ಲ, ಮನುಷ್ಯರಾಗಲು ಹುಟ್ಟಿದವರು ಎಂಬ ಪ್ರಜ್ಞೆ ಇದ್ದವರಿಗೆ ಸಾಹಿತ್ಯ ಬಹಳಷ್ಟು ನೀಡಬಲ್ಲದು ಎಂಬುದು ಚಿತ್ತಾಲರ ಅಭಿಪ್ರಾಯ. ಪ್ರಕೃತಿಯ ಭಾಗವಾಗಿ ನಾವಿದ್ದೇವೆ. ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧ ಬಹಳ ಮುಖ್ಯ. ಆಲೋಚನಾ ಶಕ್ತಿ, ಬುದ್ಧಿಶಕ್ತಿಯಿಂದ ಸಾಹಿತ್ಯ ರೂಪು ಪಡೆಯುತ್ತದೆ. ಸಾಹಿತ್ಯ ರೂಪಿಸುವಾಗ ಮನುಷ್ಯನು ಅದರ ಕ್ರಿಯಾಶೀಲತೆಯ ಭಾಗವಾಗಿ ಕಂಡುಬರುತ್ತಾನೆ. ಸಾಹಿತ್ಯದೊಳಗೆ ಮನುಷ್ಯನೇ ಕೇಂದ್ರ ವಸ್ತು. ಸಮಾಜ ಮತ್ತು ಮನುಷ್ಯನ ಏಳುಬೀಳಿನ ಕಥೆಗಳಲ್ಲಿ ಉಂಟಾಗುವ ಸಂವೇದನೆ ಬಹಳ ಮುಖ್ಯ.

ಡಾ. ಮೇಘನಾ ಕೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಉಪ್ಪಾರಹಳ್ಳಿ ಗ್ರಾಮದಲ್ಲಿ 09.12.1994 ರಂದು ಜನನ. ತಂದೆ ಕೃಷ್ಣಪ್ಪ, ತಾಯಿ ಶಿವಲಿಂಗಮ್ಮ. ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ, ಹಿರಿಯೂರು ತಾಲೂಕಿನ ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ. ಪದವಿ ಶಿಕ್ಷಣ ಪಡೆದ ಇವರು, ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಎ, ಪಿಎಚ್.ಡಿ, ಹಾಗೂ ಜರ್ನಲಿಸಂನಲ್ಲಿ ಪಿ.ಜಿ ಡಿಪ್ಲೊಮಾ ಪಡೆದು, ತಮ್ಮ ಸಂಶೋಧನಾ ವಿಷಯವಾದ "ಯಶವಂತ ಚಿತ್ತಾಲರ ಕಥನಗಳಲ್ಲಿ ಮಾನವೀಯ ಸಂಬಂಧಗಳು" ಎಂಬ ಪ್ರಬಂಧಕ್ಕೆ 2022ರಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ 'ಡಾಕ್ಟರ್ ಆಫ್ ಫಿಲಾಸಫಿ' ಗೌರವಕ್ಕೆ ಭಾಜನರಾಗಿರುತ್ತಾರೆ.

ಕನ್ನಡದ ಪ್ರಮುಖ ಮಾಸ ಪತ್ರಿಕೆಗಳಾದ ಅನಿಕೇತನ, ಅಭಿಜಾತ ಹಾಗೂ International Journal of Academic Reserch Peer reviwed Journal ಮುಂತಾದ ISSN ನಂಬರಿನ ನಿಯತಕಾಲಿಕೆಗಳಲ್ಲಿ ಹಾಗೂ ISBN ಪುಸ್ತಕದಲ್ಲಿ ಇವರ ಸುಮಾರು 20ಕ್ಕೂ ಹೆಚ್ಚು ಲೇಖನಗಳು ಪ್ರಕಟಗೊಂಡಿವೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಹಲವು ಪ್ರಬಂಧಗಳನ್ನು ಮಂಡಿಸಿದ್ದಾರೆ. ಅಲ್ಲದೆ, ಯೂಟ್ಯುಬ್‌ನ 'ಸುಕೃತಿ' ಚಾನಲ್ ಬಳಗಕ್ಕೆ ಯಶವಂತ ಚಿತ್ತಾಲರ 'ಮೂರು ದಾರಿಗಳು' ಕಾದಂಬರಿ ಮತ್ತು ಎಸ್.ಎಸ್.ಶ್ರೀಧರಮೂರ್ತಿ ಅವರ 'ಅಂದದ ಹೆಣ್ಣಿನ ನಾಚಿಕೆ' ಕೃತಿಯನ್ನು ಪರಿಚಯಿಸಿದ್ದಾರೆ. 'ಅಂಬೇಡ್ಕರ್ ಓದು ಸರಣಿ' ಅಂತರಜಾಲ ಕಾರ್ಯಕ್ರಮದಲ್ಲಿ 528, 574, ಹಾಗೂ 576ರ ಸರಣಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹಾವೇರಿಯಲ್ಲಿ ನಡೆದ 86ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಸ್ವರಚಿತ ಕವಿತೆಯನ್ನು ವಾಚಿಸಿರುತ್ತಾರೆ.

'ಸ್ವಾತಂತ್ರ್ಯವೆಂಬ ಹಕ್ಕಿ' – ಇವರ ಪ್ರಕಟಿತ ಕವನ ಸಂಕಲನ. ಇವರ ಎರಡು ಪುಸ್ತಕಗಳು ಸದ್ಯದಲ್ಲಿಯೇ ಪ್ರಕಟಗೊಳ್ಳುವ ಹಂತದಲ್ಲಿವೆ. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯೆಯೂ ಆಗಿರುವ ಡಾ. ಮೇಘನಾ ಅವರಿಗೆ ಕವಿತೆಗಳ ರಚನೆ, ವಾಚನ, ಸ್ತ್ರೀವಾದಿ ಅಧ್ಯಯನ, ವಿಮರ್ಶೆ, ಸಂಶೋಧನೆ, ಜಾನಪದ, ಬುಡಕಟ್ಟು ಅಧ್ಯಯನ, ತೌಲನಿಕ ಸಾಹಿತ್ಯ, ಭಾಷಾ ವಿಜ್ಞಾನ. ಸಿನಿಮಾ ವಿಮರ್ಶೆ, ಸಾಹಿತ್ಯದ ಜೊತೆ ಅನುಭಾವ, ಇತಿಹಾಸ, ಮನಃಶಾಸ್ತ್ರ ಹೀಗೆ ಇತರೆ ಅನ್ಯಶಿಸ್ತುಗಳ ಅಧ್ಯಯನದ ಬಗೆಗೆ ಆಸಕ್ತಿ.

ಪ್ರಸ್ತುತ ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಚಿಕ್ಕಬಳ್ಳಾಪುರದಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. **

ಜಗತ್ತಿನಲ್ಲಿ ಪ್ರತಿನಿತ್ಯ ಹೊಸತು ಸೃಷ್ಟಿಯಾಗುತ್ತದೆ. ಸಾಹಿತ್ಯದಲ್ಲೂ ಹೀಗೆ ಹೊಸತನ್ನು ತಂದ ಚಿತ್ತಾಲರು, ಒಟ್ಟು 67 ಕಥೆಗಳನ್ನು, 5 ಕಾದಂಬರಿಗಳನ್ನು ಮತ್ತು ಅನೇಕ ಲೇಖನ, ಪ್ರಬಂಧಗಳನ್ನು ಬರೆದಿದ್ದಾರೆ ಇವರ ಮೂರು ದಾರಿಗಳು, ಶಿಕಾರಿ, ಪುರುಷೋತ್ತಮ, ದಿಗಂಬರ, ಛೇದ ಕಾದಂಬರಿಗಳು ಬಹಳ ಯಶಸ್ಸು ಕಂಡಿವೆ. ಅವರು ಕವಿತೆಗಳನ್ನೂ ಬರೆದಿದ್ದು ಅದನ್ನು ಅವರು 'ಲ ಬ ಸಾ' (ಲಯ ಬದ್ಧ ಸಾಲುಗಳು) ಅನ್ನುತ್ತಿದ್ದರು.

'ಬೊಮ್ಮಿಯ ಹುಲ್ಲು ಹೊರೆ' 1949ರಲ್ಲಿ ಪ್ರಕಟವಾದ ಇವರ ಮೊದಲ ಕಥೆ. ಚಿತ್ತಾಲರ ಬರವಣಿಗೆ ಹಲವು ನೆಲೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಕಾಫ್ಕ, ಗಾರ್ಸಿಯಾ, ದಾಸ್ತೋವಸ್ಕಿ, ಗೌರೀಶ ಕಾಯ್ಕಿಣಿ, ಗಂಗಾಧರ ಚಿತ್ತಾಲ, ಶಾಂತಿನಾಥ ದೇಸಾಯಿ ಮುಂತಾದವರ ಬರವಣಿಗೆಯ ಪ್ರಭಾವವನ್ನು ಇವರ ಸಾಹಿತ್ಯದಲ್ಲಿ ಕಾಣಬಹುದು. ಇವರ ಸಾಹಿತ್ಯ ಚಿಂತನೆಯ ಆಕರಗಳು ಸಾಂಪ್ರದಾಯ ಸಾಹಿತ್ಯದ ಬದಲಾಗಿ ಅನ್ಯಜ್ಞಾನ ಶಿಸ್ತುಗಳ ಆಳವಾದ ಓದಿನ ಫಲಿತ. ಸಾಹಿತ್ಯ ಮತ್ತು ಈ ಅನ್ಯಶಿಷ್ಟಗಳೊಂದಿಗೆ ಅನುಸಂಧಾನ ಮಾಡುವುದನ್ನು ಕುತೂಹಲವಾಗಿ ಓದಿನಲ್ಲಿ ಉಳಿಸುತ್ತಾರೆ.

ನಾನು ಬರೆಯುತ್ತಿದ್ದುದು ನಾನು ನಾನೇ ಆಗಲು, ಪ್ರೀತಿಸುವುದನ್ನು ಕಲಿಯಲು, ಉಳಿದವರನ್ನು ತಿದ್ದುವುದಕ್ಕಲ್ಲ ಎನ್ನುತ್ತಿದ್ದರು ಚಿತ್ತಾಲರು.

ಜೀವನ ಮೀಮಾಂಸೆ, ಸಮಾಜ ಮೀಮಾಂಸೆ ಮತ್ತು ಸಾಹಿತ್ಯ ಮೀಮಾಂಸೆಗಳ ನಡುವೆ ನಿಕಟ ಸಂಬಂಧವಿದೆ. ಸಾಹಿತ್ಯವು ಮನುಷ್ಯ ಸಂಬಂಧವನ್ನು ಅರ್ಥೈಸಲು ಮಾಧ್ಯಮವಾಗುತ್ತದೆ. ಈ ಹಿಂದೆ ಸಾಹಿತ್ಯದಲ್ಲಿ ಇದ್ದ ವಾಸ್ತವ ಮಾರ್ಗವನ್ನು ಮೀರಲು ಚಿತ್ತಾಲರು ಪ್ರಯತ್ನಿಸಿದರು. ಸಾಮಾಜಿಕ ಸಂಬಂಧಗಳ ಗ್ರಹಿಕೆ, ಸಮಕಾಲೀನ ಆಧುನಿಕ ಸಮಾಜಗಳನ್ನು ವಿವರಿಸಲು, ವಿಶ್ಲೇಷಿಸಲು ಕನಿಷ್ಟ ಪಕ್ಷ ವ್ಯಕ್ತಿ ನೆಲೆಯಲ್ಲಿ ನಿಂತು ಪರಿಹಾರ ಕಂಡುಕೊಳ್ಳಲು ಇವರ ಸಾಹಿತ್ಯ ಸಹಕಾರಿ. ಮನುಷ್ಯನ ಅಸ್ತಿತ್ವ, ಅವನೊಳಗಿನ ಪರಕೀಯತೆ, ಭಯ, ಗ್ರಹಿಕೆಗಳ ಬಗ್ಗೆ ಕಥನ ಮಾದರಿಯ ಒಳಗೆ ಇವರು ಚಿತ್ರಿಸುವ ಚರ್ಚಿಸುವ ಪರಿ ಬೆರಗುಗೊಳಿಸುತ್ತದೆ.

ಇವರ ವಸ್ತುವಿನ ಆಯ್ಕೆಯಲ್ಲಿ ಸಾರ್ವತ್ರಿಕತೆ ಇದೆ. ಕಾರ್ಪೊರೇಟ್ ಸಂಸ್ಕೃತಿಯ ಪ್ರಭಾವವಿದೆ. ಸಾಹಿತ್ಯವು ಓದುಗರೊಂದಿಗೆ ನಡೆಸುವ ಸಂವಾದವೇ ಹೊರತು ಸಮಾಜವನ್ನು ಬದಲಿಸುವ ಉಪಕರಣವಲ್ಲವೆಂದು ಅವರು ನಂಬಿದ್ದರು. ಸೃಜನಶೀಲವಾದ ಕಥನ ಮಾದರಿಯನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಕಟ್ಟಿಕೊಟ್ಟರು. ಕಲ್ಪನೆಗಳ ಬದುಕನ್ನು ಕಿತ್ತುಗೆದು ನೈಜ ನೆಲೆಯಲ್ಲಿ ಅರ್ಥೈಸಿದ್ದು ಗಮನಿಸ ಬೇಕಾದ ಸಂಗತಿ. ಜೀವನಮೌಲ್ಯ, ಎಚ್ಚರಿಕೆಯ ಪ್ರಜ್ಞೆ, ಒಳಿತು ಕೆಡುಕುಗಳ ಚರ್ಚೆ, ಸಮಕಾಲೀನವಾಗುವ ಆಧುನಿಕ ಸವಾಲುಗಳನ್ನು ಇವರ ಕೃತಿಗಳಲ್ಲಿ ಕಾಣಬಹುದು.

ಮಾನವೀಯ ಮೌಲ್ಯಗಳು ಮತ್ತು ಅನುಭವದ ಪದರುಗಳನ್ನು ಶೋಧಿಸಿ ನೋಡುವ ಕುತೂಹಲಕ್ಕೆ ಶಿಕಾರಿಯ ನಾಗಪ್ಪನಂತಹ ಪಾತ್ರವು ಮನುಕುಲದ ಪ್ರತೀಕವಾಗುತ್ತದೆ.

'ಕತೆಯಾದಳು ಹುಡುಗಿ' ಇವರ ಅತ್ಯಂತ ಜನಪ್ರಿಯ ಕತೆ. ಚಿತ್ತಾಲರನ್ನು ಅನೇಕರು ಈ ಕತೆಯಿಂದ ಗುರುತಿಸುತ್ತಾರೆ.

ಇವರ 'ಮೂರು ದಾರಿಗಳು' ಕಾದಂಬರಿ ಹದಿನಾಲ್ಕು ಮುದ್ರಣ ಕಂಡಿದೆ. ಸಂಪ್ರದಾಯದ ಚೌಕಟ್ಟಿನ ಒಳಗಡೆ ಕಾದಂಬರಿಯ ಅನಾವರಣವಾಗುತ್ತದೆ. ಮೂಲ ಮಾದರಿಯ ಪಾತ್ರಗಳು ಇಲ್ಲಿ ನೋಡಲು ಸಿಗುತ್ತವೆ. ಕುಮಟಾ ಪರಿಸರದ ಗಾಳಿಸುದ್ದಿ ನಿರಪರಾಧಿಗೆ ಅತೀವ ಯಾತನೆ ತಂದು ಸಾವಿಗೆ ಕಾರಣವಾಗುವ ಅಂಶವನ್ನು ಇಲ್ಲಿ ಕಾಣುತ್ತೇವೆ. ನಿರ್ಮಲ ಎಂಬ ಪಾತ್ರ ಎಚ್ಚರಿಕೆಯ ಸಂಕೇತವಾಗಿ ಬರುತ್ತದೆ.

'ಛೇದ' ಪ್ರಸ್ತುತ ಸಮಾಜದ ವ್ಯವಹಾರ ಸಂಬಂಧ ನೋವು ನಲಿವು, ಮುಖವಾಡ ಇತ್ಯಾದಿಗಳ ಆತ್ಮ ಶೋಧದ ಕತೆ ಹೊಂದಿದೆ.

ಹೀಗೆ ಡಾ. ಮೇಘನಾ ಅವರು ಯಶವಂತ ಚಿತ್ತಾಲರ ಬಗ್ಗೆ ಹಾಗೂ ಅವರ ಕೃತಿಗಳ ಬಗ್ಗೆ ನಿರರ್ಗಳವಾಗಿ ಮಾತನಾಡಿದರು. ಆಗಾಗ ನೆಟ್ ವರ್ಕ್ ಸಮಸ್ಯೆಯಿಂದಾಗಿ ಕಾರ್ಯಕ್ರಮಕ್ಕೆ ಅಡಚಣೆ ಉಂಟಾಗುತ್ತಿದ್ದರೂ ಕೊನೆಯಲ್ಲಿ ಸಂವಾದ ಕಾರ್ಯಕ್ರಮದಲ್ಲಿ ಕೆಲವರ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಯಿತು.

ಶ್ರೀಮತಿ ರಾಧಿಕಾ ಗುಜ್ಜರ್ರವರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿವುದರೊಂದಿಗೆ 'ತಿಂಗಳ ಬೆಳಕು ಕಾರ್ಯಕ್ರಮ ಮುಕ್ತಾಯವಾಯಿತು.

***

ಕವಿ ಮನ

ಸಿಗಲಿಲ್ಲ ಪುರಸೊತ್ತು

ಒಂದೊಮ್ಮೆ ಹುಡುಕಿ ದಣಿದಿದ್ದಳು ರಮಾಳ ಹೆಣ್ಮಗಳು
ಮನೆಗೆಲಸದ ನಡುವಲ್ಲಿ, ಕ್ಯಾರಿಯರ್‌ಗಳ ತಯಾರಿಯಲ್ಲಿ
ಗಂಡನುಪಚಾರದಲಿ. ಮಕ್ಕಳ ಹೋಂವರ್ಕ್ ಮುಗಿಸುವಲ್ಲಿ
ಸಮೀಪದ ಅಂಗಡಿಗಳಲಿ, ಎಲ್ಲಿಯಾದರೂ ದೊರೆತೀತೆ?

ಒಮ್ಮೆ ನಿಟ್ಟುಸಿರು ಬಿಟ್ಟು ಕುಳಿತಿರಲು ದೊರೆತೀತೆ? ಎಂದು
ಎಲ್ಲೆಲ್ಲಿ ಹುಡುಕಾಡಿದರೂ ಸಿಕ್ಕಿರಲಿಲ್ಲ ಪುರಸೊತ್ತು!
ಅಂತೂ ಇಂತೂ ಎಡೆಬಿಡದ ಭಗೀರಥ ಪ್ರಯತ್ನದಲಿಂದು
ಕಡೆಗೂ ಸಿಕ್ಕಿತ್ತು ಬಹಳಷ್ಟು ಹಂಬಲಿಸಿದ ಆ ಸವಲತ್ತು!

ಮಹಿಳೆಯರ ಸ್ವಾತಂತ್ರ್ಯದ ಕೂಗಿನಡಿಯಲ್ಲಿ
ಸಮಾನತೆಗೆ ಹೋರಾಡುವ ಸತ್ಯಾಗ್ರಹದ ನಡುವಲ್ಲಿ
ಪುರುಷರೊಡನೆ ಪೈಪೋಟಿಮಾಡುವ ಆಕ್ರೋಶದಲ್ಲಿ
ತಮಗಾಗಿ"ಸ್ಪೇಸ್" ಹುಡುಕುವ ತರಾತುರಿಯಲ್ಲಿ!

ಅಂದೇ ಬಂದಿತು ಕುತ್ತಿಗೆ! ಗಂಡಸಿನ ಪುರಸೊತ್ತಿಗೆ
ಹುಡುಕುವ ಸರದಿ ಬಂದಿತು ಬಡಪಾಯಿ ಗಂಡಸಿಗೆ!
ಮಕ್ಕಳನು ಶಾಲೆಗಟ್ಟುವ ಗಡಿಬಿಡಿಯಲ್ಲಿ
ಆಫೀಸಿನಲ್ಲಿ ದುಡಿದು ಸಂಜೆ ಮನೆ ಸೇರುವಲ್ಲಿ

ಒಗೆದ ಬಟ್ಟೆಗಳ ಮಡಿಸಿ ಜೋಡಿಸುವಲ್ಲಿ
ಸ್ವಿಮ್ಮಿಂಗು, ಕ್ರಿಕೆಟ್ಟು, ಇತ್ಯಾದಿಗಳಿಗೆ ಮಕ್ಕಳನೊಯ್ಯುವಲ್ಲಿ
ಮಾಡಿದ್ದ ಅಡುಗೆ ಬಡಿಸುವಲ್ಲಿ. ಪಾತ್ರೆ ತೊಳೆಯುವಲ್ಲಿ
ಕಡೆಗೆ ಮನೆ ಕಸಗುಡಿಸಿ ಒರೆಸುವಲ್ಲಿ!

ಸಂದುಗೊಂದುಗಳಲಿ ಹುಡುಕಿ ದಣಿದಿದ್ದೇ ಬಂತು
ಸಿಗದಾಯ್ತು ಪುರಸೊತ್ತು, ರಾತ್ರೆ ಹತ್ತಾಯ್ತು, ದೇಹ ಬಳಲಿತ್ತು
ಮಕ್ಕಳನು ಮಲಗಿಸುವಲ್ಲಿ ಹುಡುಕಿದ್ದಾಯ್ತು
ಎಲ್ಲಿಯೂ ಸಿಗಲಿಲ್ಲ ಅರೆಕ್ಷಣಕೂ! ಬರೀ ಬಳಲಿದ್ದೇ ಬಂತು.

ತಿಳುವಳಿಕೆ ಹೇಳಿತ್ತು .ಇನ್ನೆಲ್ಲಿ ಆ ನಿನ್ನ ಗತ್ತು?
ಇರಬೇಕು ನೀನೆಂದು ಪತ್ನಿಯಾ ಸುತ್ತು
ಹಿಂದೊಂದು ಕಾಲದಲಿ ನಿನ್ನ ಸ್ವತ್ತಾಗಿದ್ದ ಪುರಸೊತ್ತು,
ಕಾಲದ ಕರಾಮತ್ತಿಗೆ ಸಿಕ್ಕಿ ಆಗಿಹೋಗಿದೆ ಸ್ತ್ರೀಯರಾ ಸ್ವತ್ತು

– ಡಾ. ಸತ್ಯವತಿ ಮೂರ್ತಿ
03.04.2024

ಕವಿ ಮನ

ಪಟ್ಟಿ

ತೆರೆದುಕೊಂಡ ಸಜ್ಜೆಯ
ಕೊಕ್ಕೆಯಿಂದ ದಾರವನಿಳಿಸಿ
ಒಂದಿಡೀ ದಾರಕ್ಕೆ ಸೀರೆ
ಉಳಿದಂತೆ, ಮೈಯೊರೆಸುವ ಚೌಕಗಳು
ಮತ್ತು ಮನೆಯ ಎಲ್ಲರ ಬಟ್ಟೆಗಳನು
ಒಂದೊಂದೇ ದಾರಗಳಿಗೆ ಹರವಿ
ಕುಂಡಗಳಲ್ಲಿಯ ದಾಸವಾಳ, ತುಳಸಿ
ಕೊಂಡಾಡಲು ಏನಿಲ್ಲದ ಮೆಚ್ಚಿನ
ಇನ್ನೊಂದಿಷ್ಟು ಹಸಿರು ಮಿತ್ರರನ್ನು ತಡವಿ
ಸಕುಶಲ ಮಂಗಳ ಕೇಳಿ ನೀರೆರೆದು,
ನೀರೆರೆದ ನನ್ನ ಮುಡಿಯ ಗಂಟು
ಬಿಚ್ಚುತ್ತೇನೆ
ಕೊಡವುತ್ತೇನೆ
ನೀರು ಜಡೆ ಹೆಣೆದು
ನಿರಾಳದ ಬೆಳಗು ಸಡಿಲಿಸಿ
ಎಳೆ ಸೂರಿಯ ಬೆಳೆಯಲು ಬಿಟ್ಟು
ಹಕ್ಕಿಯಾದವಳು
ಸಜ್ಜೆ ಬಿಟ್ಟು ಮನೆಯಾಕೆಯಾಗುತ್ತೇನೆ

ಅಕ್ಕ ಪಕ್ಕದ
ಮೇಲಿನ ಕೆಳಗಿನ
ಅದೆಷ್ಟೋ ಮಹಡಿಗಳ ಸಜ್ಜೆಗಳಲ್ಲಿ
ಕರವಾಣಿಯ ಹಿಡಿದವರು,
ಕರಪತ್ರದಷ್ಟೇ ಬಟ್ಟೆ ಸಿಗಿಸಿದವರು,
ಓರೆ ಕೋರೆಗಳನ್ನೇ
ಎಲ್ಲರಲ್ಲೂ ಬೆದಕುವವರು,
ಮಹಾನಗರವೆಂಬ ಆನೆಯ
ಅವಳಿ ಬಸಿರ ಹೊತ್ತವರು,
ಉರಿಯುವ ನೋಟವನ್ನು ಬೀರಿ
ಇಡಿಯ ರಾತ್ರಿ ಕಿಡಿ ಹೊತ್ತಿಸಿ
ಉಸಿರಿಗೆ ಕಾಳ್ಗಿಚ್ಚನಿತ್ತು ಹೊಗೆ ಬಿಡುತ್ತಾ
ಬೆಲ್ಲದ ಬಣ್ಣದ ಕಹಿ ದ್ರವ ಹೀರುವವರು
ಹಗಲಿಗೆ ಮರೆಯಾಗಿಬಿಡುವರು

ಬಿಕೋ ಒಳ ಹೊರಗುಗಳ
ಭಣ ಭಣ ನೀರವತೆಯ
ಹಗಲಿನ ಸಜ್ಜೆಗೆ ಕೇವಲ ಮೇಜು
ಅದರ ಮೇಲಿಷ್ಟು ಎಂಜಲು ಗಾಜು
ಬಣ್ಣದ ಪಿಂಗಾಣಿಗಳು
ನೇಣು ಏರಿ, ಜೋತು ಬಿದ್ದ
ಯಾವ ದನಿಯನ್ನೂ ಹೊರಡಿಸದ
ಟೆರ್ರಾಕೋಟಾ ಗಂಟೆಗಳು
ಉಳಿಸಿ ಕಳೆದು ಹೋಗಿದ್ದಾರೆ
ನೆರೆ ಹೊರೆ, ಹೊರೆ ಹೊರೆ ಇದ್ದರೂ
ಬರಿ ಬರಿದಾದ ಸುಂದರ ಪಟ್ಟಿಗಳು

ಬೇಡವೆಂದರೂ ಅಳಿಸಲಾಗದ ನೋಟ
ಕಣ್ಣಾಡಿಸಿ ಒಳ ಬರುವ ನಾನು
ಕಾಲು ನೀಡಿ ಕುಳಿತು
ಮತ್ತೆ ನನ್ನ ಕಸೂತಿಯ ದಾರಗಳ
ಆರೆಳೆ ಸೀಳಿ, ಸಿಕ್ಕು ಬಿಡಿಸಿ
ನಾಜೂಕು ಹೆಣಿಗೆಯಲ್ಲಿ ತೊಡಗುತ್ತೇನೆ

ನೆನಪಾಯ್ತು
ಗೆಳತಿಯ ತಂಗಿಗೆ ತುಂಬಿವೆ ದಿನಗಳು
ಬಾಣಂತಿ ಖಾರದ ಪಟ್ಟಿ ಹೇಳಬೇಕು

ಪಟ್ಟಿಯ ಚಿತ್ರಣ ಬಿಟ್ಟೆ
ಪಟ್ಟಿಯೆಡೆ ಗಮನವಿತ್ತೆ

– ರಾಧಿಕಾ ಗುಜ್ಜರ್
10.04.2024

ಕವಿ ಮನ

ಅರಿವು

ಹೊತ್ತಾಯಿತು ಗೊತ್ತಾಯಿತು
ಪಯಣ ಮುಗಿಯಲಿದೆಯೆಂದು
ರವಿಯು ಮುಳುಗಿ
ತಾರೆ ಮಿನುಗಿ
ಶಶಿ ಆಗಸ ಬೆಳಗುವನೆಂದು

ಹೊತ್ತಾಯಿತು ಗೊತ್ತಾಯಿತು
ಗಳಿಸಿದ್ದು ಉಳಿಸಿದ್ದು
ಚಿಟಕೆಯಷ್ಟೇ ಎಂದು
ಅರಿಯುವುದು ಅಳಿಸುವುದು
ಬೆಟ್ಟದಷ್ಟಿದೆಯೆಂದು

ಹೊತ್ತಾಯಿತು ಗೊತ್ತಾಯಿತು
ಬಾಳ ಲೆಕ್ಕಾಚಾರದಲಿ
ಒಂದನೊಂದು ಕೂಡಿದರೆ
ಎರಡೇ ಆಗಬೇಕಿಲ್ಲವೆಂದು
ಶೂನ್ಯವೂ ಮೂಡಬಹುದೆಂದು

ಹೊತ್ತಾಯಿತು ಗೊತ್ತಾಯಿತು
ಭರದಿ ಹರಿದ ನದಿಯು ಧುಮುಕಿ
ಕಡಲ ಸೇರಲಿದೆಯೆಂದು
ತನ್ನತನವ ಕಳೆದುಕೊಂಡು
ಅಲೆಅಲೆಯಲಿ ಸುಳಿಯುವುದೆಂದು

ಹೊತ್ತಾಯಿತು ಗೊತ್ತಾಯಿತು
ನನ್ನದೆಂಬುದೆಲ್ಲ ನನ್ನದೇ
ಆಗಿರಬೇಕಿಲ್ಲವೆಂದು
ಋಣ ಸಂದಾಯವಾಗದೆ
ಬಿಡುಗಡೆಯು
ಸಾಧ್ಯವೇ ಇಲ್ಲವೆಂದು

– ಬಿ.ಎಸ್.ಶ್ರೀನಿವಾಸ್
17.04.2024

ಕವಿಗಳಿಗೆ ಕಾಲವಿದಲ್ಲ

ಕವಿಗಳಿಗೆ ಕಾಲವಿದಲ್ಲ
ಬಣ್ಣಿಸಲು ಮಾತೆಯಿಲ್ಲ
ಸವಿಘಳಿಗೆ ಬಂದಿಹುದಲ್ಲ
ಅನುರಾಗದ ಸಮಯವೆ ಎಲ್ಲಾ

ಪಿಸುಮಾತಿನ ಸ್ವರದಲಿ
ನಸುನಗೆಯ ಬಲೆಯಲಿ
ಹೊಸ ನೋಟದ ತೆರೆಯಲಿ
ವಶವಾಗಿಹ ತೆರದಲಿ
ಹೊಸ ಜಗದ ಕರೆಯಲಿ
ಹೊಸತನವೆ ತುಂಬಿಹುದಲ್ಲಾ

ತುಂಟ ನೋಟ ಕಣ್ಣಲಿ
ಜಂಟಿಯಿವರು ಜಗದಲಿ
ಕುಂಟುನೆಪವು ನುಡಿಯಲಿ
ತಂಟೆವುಂಟು ನಡೆಯಲಿ
ಎಂಟು ಕನಸು ಅವರಲಿ
ನನಸು ಮಾಡೊ ಮನಸಿದೆಯಲ್ಲಾ

ಚೆಲುವ ಹುಡುಕಿ ಹೊರಟರು
ಒಲವೇ ಚೆಲುವೆಂದರಿತರು
ಜಗದ ನೆಲದಲಿದ್ದರು
ಜಗವನ್ನೆ ಮರೆತರು
ತಮ್ಮ ಪಾಲ ಸ್ವರ್ಗವನು
ಇಲ್ಲೆ ತಂದುಕೊಂಡರು

– ರಂ ನರಸಿಂಗರಾವ್
24.04.2024

ಅಂಶೀ ಛಂದಸ್ಸು

– ಗಣಪತಿ ಹೆಗಡೆ

'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಅಂತ ತನ್ನ ಹೆಂಡತಿ ಮನೋರಮೆಗೆ ಹೇಳಿ ಹೃದ್ಯವಾದ ಗದ್ಯದಲ್ಲಿಯೇ ಮುದ್ದಣನು ರಾಮಾಶ್ವಮೇಧ ಎನ್ನುವ ಹಳಗನ್ನಡ ಕಾವ್ಯವನ್ನು ರಚಿಸಿರುವದು ಸಾಹಿತ್ಯಾಸಕ್ತರಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಆದರೆ ವಡ್ಡಾರಾಧನೆಯನ್ನು ಹೊರತುಪಡಿಸಿ ಉಳಿದ ಹಳೆ/ನಡುಗನ್ನಡ ಕಾವ್ಯಗಳು ಪದ್ಯ ರೂಪದಲ್ಲಿ ಅಥವಾ ಚಂಪೂ ರೀತಿಯಲ್ಲಿ ಇರುವದು ಸುಳ್ಳಲ್ಲ. ಕಾವ್ಯ ಅಂದರೆ ಪದ್ಯ ಸಾಹಿತ್ಯವೇ ಎನ್ನುವ ನಿರ್ಣಯಕ್ಕೆ ಬರುವಷ್ಟು ಈ ಪದ್ಯ ಸಾಹಿತ್ಯವು ಹಿರಿಮೆ ಸಾಧಿಸಿದೆ. ಇದಕ್ಕೆ ಪದ್ಯ ಅಥವಾ ಕವನ ಸ್ವರೂಪದ ಕಾವ್ಯದ ಗೇಯತೆಯೂ ಕಾರಣ ಇರಬೇಕು. (ನವ್ಯಕಾವ್ಯವೂ ಕವನದ ರೂಪವನ್ನು ಹೊಂದಿರುವದನ್ನು ಕಾಣುತ್ತೇವೆ.)

ಇಂತಹ ಪದ್ಯವನ್ನು ರಚಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಬೇರೆ ಬೇರೆ ರೂಪದ ಪದ್ಯಗಳ ಶಬ್ದ ಸಂಯೋಜನೆ ಬೇರೆ ಬೇರೆ ರೀತಿಯದೇ ಆಗಿರುತ್ತದೆ. ಆದರೆ ಈ ಶಬ್ದ ಸಂಯೋಜನೆಗಳು ಒಂದು ನಿರ್ದಿಷ್ಟವಾದ ರಾಗ ಸಂಯೋಜನೆಗೆ ಅನುವು ಮಾಡಿಕೊಡುತ್ತವೆ. ಇಂತಹ ಪದ್ಯಗಳ ರಚನೆ ಕ್ರಮಬದ್ಧವಾಗಿರಲು ಛಂದಶ್ಶಾಸ್ತ್ರದ ತಿಳುವಳಿಕೆ ಅವಶ್ಯ.

ಛಂದಸ್ಸು ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯದ ಆರಂಭದ ದಿನಗಳಿಂದಲೂ ಬಳಕೆಯಲ್ಲಿದ್ದು, ಕಾಲಕ್ರಮದಲ್ಲಿ ಹಲವಾರು ಪರಿಷ್ಕರಣೆಗೊಳಪಟ್ಟಿದೆ.

ಛಂದಸ್ಸನ್ನು ಪ್ರಾಸ, ಯತಿ ಹಾಗೂ ಗಣ ಹೀಗೆ ಮೂರು ರೀತಿಯಿಂದ ವಿಂಗಡಿಸುವದುಂಟು.

ಪದ್ಯದ ಪ್ರತಿ ಸಾಲಿನ ಪ್ರಾರಂಭದಲ್ಲಿ ಬರುವ ಪ್ರಾಸವನ್ನು ಆದಿಪ್ರಾಸವೆಂತಲೂ, ಮಧ್ಯದಲ್ಲಿ ಬರುವ ಪ್ರಾಸವನ್ನು ಮಧ್ಯಪ್ರಾಸವೆಂತಲೂ, ಕೊನೆಯಲ್ಲಿ ಕಾಣಿಸಿಕೊಳ್ಳುವ ಪ್ರಾಸವನ್ನು ಅಂತ್ಯಪ್ರಾಸವೆಂದು ಕರೆಯುತ್ತಾರೆ. ಇಂತಹ ಪ್ರಾಸಗಳು ಕೇಳಲು ಆಕರ್ಷಕವಾಗಿರುತ್ತವೆ.

'ಯತಿ' ಎಂದರೆ ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣ. (ನವ್ಯಕಾವ್ಯವನ್ನು 'ಯತಿ' ಪ್ರಕಾರದ ಕಾವ್ಯದ ಗುಂಪಿಗೆ ಸೇರಿಸಬಹುದೇನೊ?).

ಗಣ ಎಂದರೆ ಗುಂಪು. ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಈ ಗಣಗಳನ್ನು ಕಟ್ಟುವ ಘಟಕಗಳು ಎಂದರೆ ಹ್ರಸ್ವ ದೀರ್ಘಾಕ್ಷರಗಳು. ಇದರಲ್ಲಿ 'ವರ್ಣಗಣ' ಅಥವಾ 'ಅಕ್ಷರಗಣ', 'ಮಾತ್ರಾಗಣ' ಮತ್ತು 'ಅಂಶಗಣ'ಗಳೆಂಬ ಮೂರು ವಿಧದ ಗಣಗಳಿವೆ. ಅಕ್ಷರಗಣಗಳನ್ನು ವೃತ್ತಗಳಲ್ಲಿಯೂ, ಮಾತ್ರಾಗಣಗಳನ್ನು ಷಟ್ಪದಿ, ರಗಳೆ ಹಾಗೂ ಚೌಪದಿಗಳಲ್ಲಿಯೂ ಕಾಣಬಹುದು.

ಅಂಶಗಣಗಳನ್ನು 'ತ್ರಿಮೂರ್ತಿ ಗಣಗಳು' ಎನ್ನುತ್ತಾರೆ. ಅಂದರೆ ಬ್ರಹ್ಮ, ವಿಷ್ಣು ಹಾಗೂ ರುದ್ರಗಣಗಳು.

ಮೇಲ್ನೋಟಕ್ಕೆ ಇದು ಅಕ್ಷರಗಣಗಳ ಹಾಗೆ ಕಾಣಿಸಿದರೂ ಸ್ವಲ್ಪ ವ್ಯತ್ಯಾಸವಿದೆ. ಇಲ್ಲಿ ಶಬ್ದಗಳನ್ನು ಅಂಶಗಳಾಗಿ ವಿಂಗಡಿಸಲಾಗುತ್ತದೆ. ಶಬ್ದದ ಮೊದಲ 'ಅಂಶ' ಎರಡು ಮಾತ್ರೆಯದ್ದಾಗಿರಬೇಕು. ಅಂದರೆ ಒಂದು 'ಗುರು' ಅಕ್ಷರ ಅಥವಾ ಎರಡು ಲಘ್ವಕ್ಷರಗಳು. ಇದು ಮೊದಲಿನ 'ಅಂಶಕ್ಕೆ' ಮಾತ್ರ ಸೀಮಿತ. ಮುಂದಿನ 'ಅಂಶ'ಗಳು 'ಗುರು' ವಾದರೂ ಒಂದೇ ಅಕ್ಷರ, 'ಲಘು' ವಾದರೂ ಒಂದೇ ಅಕ್ಷರ.

'ಉದಾರ' ಇದೊಂದು 'ಜ' ಗಣ (ಅಕ್ಷರಗಣದಂತೆ). ಆದರೆ ಇದು 'ಅಂಶ'ಗಣಕ್ಕೆ ಹೊಂದಿಕೆಯಾಗುವದಿಲ್ಲ. ಮೊದಲಿನ 'ಅಂಶ' ಒಂದು ಗುರುವಾಗಿರಬೇಕು ಅಥವಾ ಎರಡು 'ಲಘುಗಳ' ಜೋಡಣೆಯಾಗಬೇಕು. 'ಉದಾರ'ದಲ್ಲಿ ಮೊದಲಿನ ಅಕ್ಷರ ಗುರು ಅಲ್ಲ ಹಾಗೆಯೇ ಮೊದಲಿನ ಎರಡು ಅಕ್ಷರಗಳು 'ಲಘು' ಸಂಯೋಜನೆಯೂ ಅಲ್ಲ. ಆದುದರಿಂದ 'ಉದಾರ' ಇದು ಅಂಶೀಗಣವಲ್ಲ.

'ಮಾನ' ಇದು ಎರಡು 'ಅಂಶ'ಗಳ ಒಂದು ಶಬ್ದ. ಇಲ್ಲಿ ಮೊದಲಿನ ಅಕ್ಷರ 'ಮಾ' ಗುರು. ಆದುದರಿಂದ ಇದು ಎರಡು ಅಂಶಗಳಿರುವ ಒಂದು ಶಬ್ದ.

ಆದರೆ ಶಬ್ದ ಎನ್ನಿಸಿಕೊಳ್ಳಲು ಕನಿಷ್ಠ ಎರಡು 'ಅಂಶ'ಗಳಿರಬೇಕು. 'ಮನ' ಇದೂ ಅಂಶೀಗಣವಲ್ಲ. ಇಲ್ಲಿ ಎರಡು ಲಘುಗಳು ಒಟ್ಟಿಗಿದ್ದರೂ ಒಂದೇ ಅಂಶವಾಗಿರುತ್ತದೆ.

ಬ್ರಹ್ಮದಲ್ಲಿ ಮೂರರಿಂದ ನಾಲ್ಕರವರೆಗೆ, ವಿಷ್ಣುವಿನಲ್ಲಿ ನಾಲ್ಕರಿಂದ ಆರರವರೆಗೆ, ರುದ್ರದಲ್ಲಿ ಐದರಿಂದ ಎಂಟರವರೆಗೆ ಮಾತ್ರೆಗಳು ಸೇರಬಹುದಾದ್ದರಿಂದ ಅಕ್ಷರದ ಮಾತ್ರಾಪ್ರಮಾಣ ಪದ್ಯಲಯದ ಅವಶ್ಯಕತೆಗೆ ತಕ್ಕಂತೆ ಹಿಗ್ಗುವುದು–ತಗ್ಗುವುದು ಆಗಬಹುದಾಗಿದೆ. ಎಂದರೆ ಒಂದು ಗಣದ ಒಟ್ಟು ವಿಸ್ತಾರವನ್ನು ಇನ್ನೊಂದು ಗಣದ ಒಟ್ಟು ವಿಸ್ತಾರದೊಡನೆ ಸರಿತೂಗಿಸಿ ತಾಳಗತಿಯನ್ನು ಸಾಧಿಸಬಹುದಾಗಿದೆ. ಹ್ರಸ್ವದೀರ್ಘಾಕ್ಷರಗಳನ್ನು ಅವಶ್ಯಕತೆಗೆ ತಕ್ಕಂತೆ ಹಿಗ್ಗಿಸಿ ಕುಗ್ಗಿಸಿ ಲಯಾನುಗುಣವಾಗಿ ಉಚ್ಚಾರಾಂಶಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ.

ಬ್ರಹ್ಮಗಣ: (ನಾಲ್ಕು ಬಗೆ)

('ನ' ವನ್ನು ಲಘುವಾಗಿಯೂ 'ನಾ' ವನ್ನು ಗುರುವಾಗಿಯೂ ಗುರುತಿಸಿದಾಗ)

ಅಂಶಗಳು	ಉದಾಹರಣೆಗಳು
ನ ನ ನ	ಸುಲಭ
ನಾ ನಾ	ಧಾರಾ
ನ ನ ನಾ	ನರನಿಂ
ನಾ ನ	ಭಾರ

(ಪ್ರಾರಂಭದ ಅಂಶ ಎರಡು ಲಘುವಾದರೆ ಮೂರಕ್ಷರಗಳು, ಒಂದು ಗುರುವಾದರೆ ಎರಡಕ್ಷರಗಳು)

(ಮೂರು ಮಾತ್ರೆಗಳಿಂದ ನಾಲ್ಕು ಮಾತ್ರೆಗಳ ತನಕ)

ವಿಷ್ಣುಗಣ: (ಎಂಟು ಬಗೆ)

ನಾ ನಾ ನಾ	ಗೋವಿಂದಂ
ನ ನ ನಾ ನಾ	ಗುರುನಾಥಾ
ನಾ ನ ನಾ	ಮಾನವಾ
ನ ನ ನ ನಾ	ವರಹಿತಂ
ನಾ ನಾ ನ	ಮಾರಾರಿ
ನ ನ ನಾ ನ	ಜಲಜಂಗೆ
ನಾ ನ ನ	ವಾನರ
ನ ನ ನ ನ	ಮುರರಿಪು

(ಪ್ರಾರಂಭದ ಅಂಶ ಎರಡು ಲಘುವಾದರೆ ನಾಲ್ಕಕ್ಷರಗಳು, ಒಂದು ಗುರುವಾದರೆ ಮೂರಕ್ಷರಗಳು)
(ನಾಲ್ಕು ಮಾತ್ರೆಯಿಂದ ಆರು ಮಾತ್ರೆಯ ತನಕ)

ರುದ್ರಗಣ: (ಹದಿನಾರು ಬಗೆ)

ನಾ ನಾ ನಾ ನಾ	ಗಂಗಾಧೀಶಂ
ನಾ ನ ನ ನ	ಮಾನವತೆ
ನಾ ನ ನಾ ನಾ	ಸಾರಸಾಕ್ಷೀ
ನ ನ ನ ನಾ ನಾ	ಅಸುರವೀರಾ
ನಾ ನಾ ನ ನಾ	ದೇವಾಧಿಪಂ
ನ ನ ನಾ ನ ನ	ಧರಣೀಶನು
ನಾ ನ ನ ನಾ	ಭಾಸವತೀ
ನ ನ ನ ನ ನಾ	ಅವನತಿಯಿಂ
ನಾ ನಾ ನಾ ನ	ಧಾರಾತೀರ್ಥ
ನ ನ ನಾ ನಾ ನ	ಕನಸೊಂದನ್ನು
ನಾ ನ ನಾ ನ	ಭಾಗ್ಯವಂತ
ನ ನ ನ ನಾ ನ	ಕವಲುದಾರಿ
ನಾ ನಾ ನ ನ	ಗಂಗಾಸುತ
ನ ನ ನಾ ನ ನ	ಮನಸಾಗಲಿ
ನಾ ನ ನ ನ	ಭೂರಹಿತ
ನ ನ ನ ನ ನ	ಹೊಗೆಸಹಿತ

***

ಸೋಮಾರಿತನವೇ ಶತ್ರು

– ಹು ವಾ ಶ್ರೀಪ್ರಕಾಶ್

ಈಗಲೂ ನನಗೆ ಅವನಾಡುವ ಮಾತುಗಳು ನೆನಪಾಗುತ್ತವೆ. ಅವನು ನನ್ನ ಸಣ್ಣಚಿಕ್ಕಪ್ಪ. ಪುಸ್ತಕದಲ್ಲಿ ಓದಿದ್ದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಹಿರಿಯರು ಹೇಳಿದ ಮಾತುಗಳು ಮನಸ್ಸಿಗೆ ನಾಟುತ್ತವೆ.

ನನ್ನ ಹುಟ್ಟು ಮತ್ತು ಬಾಲ್ಯ ಮಲೆನಾಡಿನಲ್ಲಿ. ಮನೆ ಇದ್ದದ್ದು ಬೆಟ್ಟ, ಕಾಡು, ಅಡಿಕೆ ತೋಟ, ಗದ್ದೆಯ ಸುಂದರ ಪರಿಸರದಲ್ಲಿ! ಮನೆಯ ತುಂಬ ಜನ. ಅವಿಭಕ್ತ ಕುಟುಂಬ. ತಂದೆ ತಾಯಿ, ಚಿಕ್ಕಪ್ಪ ಚಿಕ್ಕಮ್ಮಂದಿರು, ಅವರ ಮಕ್ಕಳು!

ನನಗೆ ಸಣ್ಣಚಿಕ್ಕಪ್ಪ ಅಂದರೆ ಹೆಚ್ಚು ಇಷ್ಟ. ಅವನ ಹೆಸರು ಕೃಷ್ಣಯ್ಯ ಎಂದಿದ್ದರೂ ಎಲ್ಲರೂ ಅವನನ್ನು ಬಾಬು ಎಂದೇ ಕರೆಯುತ್ತಿದ್ದರು. ಉತ್ತಮ ಕೃಷಿಕ. ನಮ್ಮ ತಂದೆಗೆ ಬಹಳ ವಿಧೇಯನಾಗಿದ್ದ. ನಮಗೆ ಅಪ್ಪಯ್ಯ ಎಂದರೆ ಭಯ, ಚಿಕ್ಕಪ್ಪ ಎಂದರೆ ಸಲುಗೆ. ಅವನು ಎಲ್ಲರಿಗೂ ಪ್ರೀತಿಪಾತ್ರನಾಗಿದ್ದ. ಎಲ್ಲ ಕೆಲಸಕ್ಕೂ ಸೈ. ನಮಗೆ ಅವನೇ ಹೀರೋ.

ನಾನು ತುಂಬಾ ಚಿಕ್ಕವನಿರುವಾಗ ಅವನ ತಲೆಕೂದಲು ಹಿಡಿದು ಅವನೊಂದಿಗೆ ಉರುಡುತ್ತಿದ್ದೆ. ನನ್ನನ್ನು ರಾತ್ರಿ ಉಚ್ಚೆ ಹೊಯ್ಯಿಸಿ ಮಲಗಿಸುತ್ತಿದ್ದ. ನನಗೆ ನೆನಪಿರದ ಅದೆಷ್ಟು ಚಾಕರಿ ಅವನು ಮಾಡಿದ್ದಾನೋ ತಿಳಿಯದು.

ಬೆಳೆಯುತ್ತಾ ಬಂದಂತೆ ಹದವಾಗಿ ಗದರಿಸಿ ತಿಳುವಳಿಕೆ ಹೇಳುತ್ತಿದ್ದ. ಸಂಜೆಯಾದೊಡನೆ ಎಲ್ಲ ಮಕ್ಕಳೂ ಕೈಕಾಲು ತೊಳೆದು ರಾಮಧ್ಯಾನ (ಭಜನೆ) ಮಾಡಬೇಕು. ಪ್ರಭವ.. ವಿಭವ.. ಎಂದು ಸಂವತ್ಸರ, ಋತುಗಳು ಮೊದಲಾದವನ್ನು ಹೇಳಿಕೊಡುತ್ತಿದ್ದ. ಬೇಗ ಮಲಗಿ ಬೇಗ ಏಳಬೇಕು ಅನ್ನುತ್ತಿದ್ದ. ಸೋಮಾರಿತನವೇ ಶತ್ರು ಎಂಬುದು ಅವನು ಯಾವಾಗಲೂ ಹೇಳುತ್ತಿದ್ದ ಮಾತು.

ಸುಮ್ಮನೆ ಕುಳಿತುಕೊಳ್ಳಬಾರದು ಎಂದು ಸಣ್ಣಪುಟ್ಟ ಕೆಲಸಗಳನ್ನು ನಮಗೆ ಹೇಳಿ ಮಾಡಿಸುತ್ತಿದ್ದ. ಅಡಿಕೆ ಕೊಯಿಲಿನ ಸಂಧರ್ಭ ಮನೆಯಂಗಳದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಅಡಿಕೆ ಸುಲಿಯುತ್ತಿದ್ದರು. ಬೆಳಗ್ಗೆ ಅಡಿಕೆ ಸಿಪ್ಪೆಯನ್ನು ರಾಶಿ ಮಾಡಿ ಬುಟ್ಟಿಗೆ ತುಂಬುವ ಕೆಲಸ ನಮಗೆ ಕೊಡುತ್ತಿದ್ದ. ಸಿಪ್ಪೆ ರಾಶಿ ಮಾಡುವಾಗ ಅಡಿಕೆ ಕಣ್ಣಿಗೆ ಬಿದ್ದರೆ ತೆಗೆಯಬೇಕು. ಯಾವುದೇ ಕೆಲಸ ಮಾಡುವಾಗಲೂ ಶ್ರದ್ಧೆಯಿಂದ ಮಾಡಬೇಕು ಎನ್ನುತ್ತಿದ್ದ.

ಕೆಲಸಗಾರರಿಗೆ ಅವನೇ ಕೆಲಸ ಹೇಳುತ್ತಿದ್ದ. ಅವನೂ ಅವರೊಂದಿಗೆ ಕೆಲಸ ಮಾಡುತ್ತಿದ್ದ. ಕಾಲಕ್ಕೆ ಸರಿಯಾಗಿ ಯಾವ ಕೆಲಸ ಆಗಬೇಕು ಅನ್ನುವ ತಿಳುವಳಿಕೆ ಅವನಿಗೆ ಚೆನ್ನಾಗಿತ್ತು. ಮುಂದಾಲೋಚನೆಯಿತ್ತು. ಮಧ್ಯಾಹ್ನ ಊಟದ ನಂತರ ಕೆಲಸಗಾರರು ಎಲಾಡಿಕೆ ಹಾಕಿಕೊಂಡು ಹರಟುತ್ತಾ ಕುಳಿತರೆ ಹೆಚ್ಚು ಕಾಲಹರಣ ಮಾಡದಂತೆ ಕೆಲಸಕ್ಕೆ ಹೊರಡಿಸುತ್ತಿದ್ದ. ಅವರ ಸಮಸ್ಯೆ ಗಳನ್ನೂ ಆಲಿಸಿ ಉಪಕರಿಸುತ್ತಿದ್ದ.

ನಮ್ಮನ್ನೂ ಒಮ್ಮೊಮ್ಮೆ ತೋಟಕ್ಕೆ ಕರೆದುಕೊಂಡು ಹೋಗಿ ಸುತ್ತಿಸುತ್ತಿದ್ದ. ಬಿದ್ದಿದ್ದ ಚಂದದ ಹೊಂಬಾಳೆ (ಎಳೆಯ ಅಡಿಕೆ ಹಾಳೆ) ಕಂಡರೆ ಅದರಲ್ಲಿ ಊಟ ಮಾಡುವುದಕ್ಕೆ ನಮಗೆ ಆಸೆ. ಅದರ ಎರಡೂ ತುದಿಯನ್ನೂ ಕೊರೆದು ಮಡಚಿ ಊಟ ಮಾಡಲು ಅನುಕೂಲವಾಗುವಂತೆ ಮಾಡಿಕೊಡುತ್ತಿದ್ದ. ತೋಟದಲ್ಲಿ ಸುತ್ತಾಡುವಾಗ ಸುಮ್ಮನೆ

ಹೋಗುವುದಲ್ಲ. ಸುತ್ತಮುತ್ತ ನೋಡಬೇಕು. ಬಾಳೆಕೊನೆ ಬಿಟ್ಟದೆಯಾ ಹಣ್ಣಾಗಿದೆಯಾ ಅಂತೆಲ್ಲ ಗಮನಿಸಬೇಕು. ಉದುರು (ಅಡಿಕೆ ಕಾಯಿ) ಬಿದ್ದಿದ್ದರೆ ಹೆರಕಬೇಕು ಎಂದು ಉಪದೇಶಿಸುತ್ತಿದ್ದ. ಅವನು ತೋಟಕ್ಕೆ ಹೋದಾಗ ಬಾಳೆ ಎಲೆಯನ್ನೋ, ಬಾಳೆಕೊನೆಯನ್ನೋ ಅಥವಾ ಒಂದಷ್ಟು ವೀಳ್ಯದೆಲೆಯನ್ನೋ ಹಿಡಿದುಕೊಂಡುಬರುತ್ತಿದ್ದ.

ಅನೇಕ ಮರಗಿಡಗಳನ್ನು ಪರಿಚಯಿಸುತ್ತಿದ್ದ. ಹಲಸಿನ ಹಣ್ಣು, ಮಾವಿನ ಹಣ್ಣು ಇತ್ಯಾದಿ ಆಗುವ ಕಾಲದಲ್ಲಿ ಒಂದೊಂದು ಮರದ ಹಣ್ಣಿನ ಬಗ್ಗೆಯೂ ಅವನು ಅದರ ವೈಶಿಷ್ಟ್ಯದ ಬಗ್ಗೆ ಹೇಳುತ್ತಿದ್ದ. ಹಲಸಿನ ಹಣ್ಣು ತಂದು ಕೊಟ್ಟಿಗೆಯಲ್ಲಿ ಹೆಚ್ಚಿದಾಗ ನಮಗೆಲ್ಲಾ ಕೈಗೆ ಒಂದಿಷ್ಟು ಎಣ್ಣೆ ಹಚ್ಚಿಕೊಂಡು ಸೋಳೆ ಬಿಡಿಸುವ ಕೆಲಸ. ಕೂಡಿ ಮಾಡುವ ಕೆಲಸಗಳು ಕೆಲಸ ಅನಿಸಿದ್ದಿಲ್ಲ. ಬಾಳೆಎಳೆಯ ಸಿಗಳನಲ್ಲಿ ಸ್ವಲ್ಪ ಸಕ್ಕರೆ ತುಪ್ಪ ಹಾಕಿ ಬಾಳೆಹಣ್ಣು ತಿನ್ನಲು ಕೊಡುತ್ತಿದ್ದ.

ಸಣ್ಣಪುಟ್ಟ ವ್ಯಾಯಾಮ ಹೇಳಿಕೊಡುತ್ತಿದ್ದ. ಗೋಡೆಗೆ ಒರಗಿ ಶೀರ್ಷಾಸನ ಮಾಡಿ ಅನ್ನುತ್ತಿದ್ದ. ನಾವು ಗೋಡೆ ಬದಿಗೆ ಹೋಗಿ ತಲೆ ನೆಲಕ್ಕಿಟ್ಟು ನಾಲ್ಕಾರು ಬಾರಿ ಹಾರಿ ಗೋಡೆಗೆ ಕಾಲು ಕೊಟ್ಟು ಶೀರ್ಷಾಸನ ಮಾಡುತ್ತಿದ್ದೆವು.

ಗಣಪತಿ ಹಬ್ಬ ಬಂತು ಅಂದರೆ ನಮಗೆಲ್ಲ ಖುಷಿ. ಬಾಯಿಗೆ ಪಂಚಕಜ್ಜಾಯ ತುಂಬಿಕೊಂಡು 'ಬುಧವಾರ' ಅನ್ನುವುದು. ಅದು ಬಾಯಿಂದ ಹಾರಿದಾಗ ನಗುವುದು.

ಸಂಜೆಯ ಹೊತ್ತಲ್ಲಿ 'ಯಾರು ಹೆಚ್ಚು ಕುಮ್ಟೆಟ್ಟು ಹಾರುತ್ತೀರಿ, ಹಾರಿ' ಅಂದಾಗ ನಾವೆಲ್ಲ ಜಿಗಿಯುತ್ತಿದ್ದೆವು. "ಸರಿಯಾಗಿ ನೆಗೆಯಬೇಕು. ಹಿಂಗಾಲು ಅಂಡಿಗೆ ಮುಟ್ಟಬೇಕು" ಎನ್ನುತ್ತಿದ್ದ.

ಯುಗಾದಿ ಹಬ್ಬ ಬಂತು ಅಂದರೆ ಅಪ್ಪ ದೊಡ್ಡ ಬಟ್ಟೆಯ ಗಂಟಿನ ಮೂಟೆಯನ್ನೇ ಹೊತ್ತು ತರುತ್ತಿದ್ದರು. ಎಲ್ಲರಿಗೂ ಒಂದೇ ತರದ ಅಂಗಿ ಬಟ್ಟೆ. ಚಿಕ್ಕಪ್ಪ ಅಂಗಿಯ ಕಾಲರ್ ಮಣ್ಣಾಗದ ಹಾಗೆ ಕುತ್ತಿಗೆಗೆ ಕರವಸ್ತ್ರ ಸಿಕ್ಕಿಸಿಕೊಳ್ಳುತ್ತಿದ್ದ

ಕತ್ತಲೆಯಲ್ಲಿ ಹಿಂದಿರುಗಿ ನೋಡದೆ ನಡೆಯಬೇಕು, ಭಯವಾದರೆ 'ರಾಮ ರಾಮ' ಎಂದು ಹೇಳುತ್ತಾ ನಡೆಯಿರಿ ಎನ್ನುತ್ತಿದ್ದ ಅವನು, ಭೂತಪ್ರೇತ ಎಲ್ಲ ಸುಳ್ಳು, ಭಯಪಡಬಾರದು, ಯಾವಾಗಲೂ ಧೈರ್ಯ ಕಳೆದುಕೊಳ್ಳಬಾರದು ಎಂದು ಹೇಳುತ್ತಿದ್ದ.

ನಮ್ಮ ಮನೆಯಲ್ಲಿ ಮಾತ್ರವಲ್ಲ, ಹಳ್ಳಿಯ ಯಾವ ಮನೆಯಲ್ಲಿ ಯಾವುದೇ ಕಾರ್ಯಕ್ರಮವಾದರೂ ಅಲ್ಲಿ ನಮ್ಮ ಚಿಕ್ಕಪ್ಪನದೇ ಮುಂದಾಳತ್ವ. ಬಾಬು ಬಂದರೆ ಎಲ್ಲ ಕೆಲಸ ಸುಸೂತ್ರವಾಗಿ ಸಾಗುತ್ತದೆ ಅನ್ನುವ ನಂಬಿಕೆ.

ಊಟದ ಮನೆಯಾದರೆ ಅಡುಗೆಗೆ ಏನೆಲ್ಲಾ ಮಾಡಿಸಬಹುದೆಂಬ ಸಲಹೆ ಕೊಡುತ್ತಿದ್ದ. ಸಾರು ಬಹಳ ಚೆನ್ನಾಗಿ ಮಾಡಬೇಕು. ಎರಡೆರಡು ಸಾರಿ ಕೇಳಿ ಬಡಿಸಬೇಕು. ಮತ್ತೆ ಕೆಲವು ಬಗೆ ಪಲ್ಯ ಕೋಸಂಬರಿ ಇತ್ಯಾದಿಯನ್ನು ಬಾಳೆ ಎಲೆ ತುದಿಗೆ ಬಡಿಸಿದರೆ ಸಾಕು ಎನ್ನುತ್ತಿದ್ದ.

ಬಾಲ್ಯದಲ್ಲಿ ಪದೇಪದೇ ಕಿವಿಯ ಮೇಲೆ ಬೀಳುವ ಇಂತಹ ಮಾತುಗಳು ಬಹಳ ಪರಿಣಾಮಕಾರಿ. ನಮ್ಮ ಬದುಕು ಹಾದಿ ತಪ್ಪದೇ ಸಾಗಲು ಹಿರಿಯರ ಎಚ್ಚರಿಕೆಯ ಮಾತುಗಳೇ ಕಾರಣ.

ಕಾಲ ಸರಿಯಿತು. ಹೆಚ್ಚಿನ ಓದಿಗಾಗಿ ಪಟ್ಟಣ ಸೇರಿದ ನಾನು ನಂತರ ಬ್ಯಾಂಕಿನ ನೌಕರಿ ಹಿಡಿದೆ. ಇಬ್ಬರು ಚಿಕ್ಕಪ್ಪಂದಿರ ಸಂಸಾರವೂ ಬೆಳೆದಂತೆ ಮನೆ ಪಾಲಾಗಿ ಒಂದು ಮನೆ ಮೂರು ಮನೆಯಾಯ್ತು. ಊರಿಗೆ ಹೋದಾಗ ಚಿಕ್ಕಪ್ಪಂದಿರ ಮನೆಗೆ ಹೋಗುತ್ತಿದ್ದೆವು. ಸಣ್ಣಚಿಕ್ಕಪ್ಪ ನಮ್ಮನ್ನು ನೆಂಟರಂತೆ ಸಂಭ್ರಮದಿಂದ ಉಪಚರಿಸುತ್ತಿದ್ದ.

ಅವನ ಬದುಕು ಹಳ್ಳಿಯಲ್ಲಾದರೆ ನನ್ನದು ಪೇಟೆಯಲ್ಲಿರಬಹುದು. ಆದರೆ ನನ್ನ ವೃತ್ತಿ ಜೀವನದಲ್ಲಿ ಮತ್ತು ಸಾಂಸಾರಿಕ ಬದುಕಿನಲ್ಲೂ ಅವನಾಡಿದ ಮಾತುಗಳು ನನ್ನನ್ನು ನಿರ್ದೇಶಿಸುತ್ತಾ ಬಂದಿವೆ. ಅದೇ ಮಾತುಗಳನ್ನು ನಾನು ಮಕ್ಕಳಿಗೂ ಹೇಳುತ್ತೇನೆ. ಅಗತ್ಯ ಬಿದ್ದಾಗ ಸಹೋದ್ಯೋಗಿಗಳಿಗೂ ಹೇಳಿದ್ದಿದೆ.

ಬಾಲ್ಯದಲ್ಲೇ ತಂದೆ ತಾಯಿಯನ್ನು ಕಳೆದುಕೊಂಡ ಚಿಕ್ಕಪ್ಪ, ನನ್ನ ತಂದೆ ತಾಯಿಯ ಆರೈಕೆಯಲ್ಲೇ ಬೆಳೆದವನು. ಅವನಾಡುತ್ತಿದ್ದ ಬಹುತೇಕ ಬುದ್ಧಿಮಾತುಗಳು ನಮ್ಮ ತಂದೆಯದೇ ಆಗಿದ್ದವು.

ಸಣ್ಣಚಿಕ್ಕಪ್ಪನಿಗೆ ದಕ್ಕಿದ ಜಮೀನಿನಲ್ಲಿ ಒಂದಷ್ಟು ಪಾಳು ಭೂಮಿಯಿತ್ತು. ಅದನ್ನೂ ಬಂಗಾರದ ಅಡಿಕೆ ತೋಟ ಮಾಡಿದ. ನಡುನಡುವೆ ಬಾಳೆ, ಕಾಳುಮೆಣಸು, ಏಲಕ್ಕಿ ಇತ್ಯಾದಿ. ಅವನ ಮನೆ ಸಮೃದ್ಧವಾಗಿತ್ತು. ವಯಸ್ಸಾದಂತೆ ಆರೋಗ್ಯ ಕೆಟ್ಟಿತು. ಹೃದ್ರೋಗ ಕಾಡಿತು.

ಒಮ್ಮೆ ಡಾಕ್ಟರ್ ಬಳಿ ಪರೀಕ್ಷೆಗಾಗಿ ಬೆಂಗಳೂರಿಗೆ ಬಂದು ಅವನ ಮಗಳ ಮನೆಯಲ್ಲಿದ್ದ. ನಾನು ಹೋಗಿ ಮನೆಗೆ ಕರೆದಾಗ ಖುಷಿಯಿಂದ ಚಿಕ್ಕಮ್ಮನೊಂದಿಗೆ ನಮ್ಮ ಮನೆಯಲ್ಲಿ ಬಂದು ಉಳಿದ. ಬೆಳಗ್ಗೆ ಹೊರಡುವಾಗ ಕಾರಲ್ಲಿ ಕುಳಿತವನು ನನ್ನ ಮಕ್ಕಳನ್ನೂ ಬಳಿಗೆ ಕರೆದು ಒಂದಷ್ಟು ಬುದ್ಧಿ ಮಾತು ಹೇಳಿದ.

ಮರುದಿನವೇ ಅವನು ಇನ್ನಿಲ್ಲವೆಂಬ ವಾರ್ತೆ ಬಂದಿತ್ತು. ಚಿಕ್ಕಪ್ಪ ನೆನಪಾಗಿಬಿಟ್ಟ. ಆದರೆ ಈಗಲೂ ಕೆಲವು ಸಂದರ್ಭಗಳಲ್ಲಿ ಅವನ ಎಚ್ಚರಿಕೆಯ ಮಾತು ಕೇಳಿದಂತಾಗುತ್ತದೆ. ಆಗ ಮನದಲ್ಲೇ ಧನ್ಯವಾದ ಹೇಳುವೆ

***

ಮುಕ್ತಕ ಸಿರಿ

ಎಚ್ಚರ ಮತದಾರ ಎಚ್ಚರ

–ಪೂರ್ಣಿಮ ಭಗವಾನ್

ಮತಹಬ್ಬ ಬಂದಿಹುದು ಗತವನ್ನು ನೆನಪಿಸುತ
ಹಿತವನ್ನು ತರಲೆಂದು ಆಶಿಸುತ ಜನತೆ
ಮತದಾನ ಕರ್ತವ್ಯ ಎಂಬುದನು ಮರೆಯದೆಯೆ
ಶತಕ ಗುರಿಯಾಗಿರಲಿ ನೇತ್ರತನಯೆ.

ಮತಗಳಿಕೆ ಮಾಡಲಿಕೆ ನೂರಾರು ಹಾದಿಗಳು
ಅತಿಯಾದ ಆಸೆ ತರವಲ್ಲ ಎಂದರಿತು
ಹಿತವಾದ ಕಾಯಕವ ಮಾಡಿ ಮನವೊಲಿಸುತ್ತ
ಪಥವನ್ನು ಸರಿಮಾಡಿ ನೇತ್ರತನಯೆ.

ಮತಹಬ್ಬ ಬಂದಿಹುದು ಮತ್ತೊಮ್ಮೆ ಆಚರಿಸೆ
ಗತಿಸಿರುವ ಘಟನೆಗಳ ಅವಲೋಕಿಸುತ್ತ
ಮತಹಾಕಿ ಎಚ್ಚರದಿ ದೇಶವನು ಮುನ್ನಡೆಸಿ
ಗತಿಹೀನ ನಡೆ ಬೇಡ ನೇತ್ರತನಯೆ.

ಜಾರಿಯಾಗಿದೆ ನೀತಿಸಂಹಿತೆಯು ಭಾರತದಿ
ಭಾರಿ ವ್ಯವಸ್ಥೆಗಳ ಸಿದ್ಧತೆಯು ಭರದಿ
ಆರಿಸುವ ಸೂಕ್ತ ಅಭ್ಯರ್ಥಿಗಳ ನಾವೆಲ್ಲ
ಭೂರಿ ಭೋಜನ ಬೇಡ ನೇತ್ರತನಯೆ.

ಭರಪೂರ ಭರವಸೆಯ ಗಂಟನ್ನು ನೀಡುತ್ತ
ಹರಿಸುತಿವೆ ಘೋಷಣೆಯ ಪಕ್ಷಗಳು ಇಂದು
ಸರಿಯಾದ ಅಭ್ಯರ್ಥಿ ಯಾರೆಂದು ತಿಳಿಯದಲೆ
ಮರುಕಳಿಸಿ ನಾಟಕವು ನೇತ್ರತನಯೆ.

ಊರೂರು ಅಲೆಯುತ್ತ ಘೋಷಣೆಯ ಕೂಗುತಲಿ
ಮಾರುದ್ದ ಭಾಷಣವ ಮಾಡಿದರೆ ಏನು
ಮೂರನ್ನು ಆರೆಂದು ಬಿಂಬಿಸುವ ನಾಯಕರು
ದೂರುವುದು ತಪ್ಪುವುದೆ ನೇತ್ರತನಯೆ.

ದಾಳಗಳು ರಾಜಕೀಯ ಚದುರಂಗ ಆಟದಲಿ
ಕಾಳಗಕೆ ಇಳಿದಿರಲು ಅರ್ಥವದು ಇರದು
ಹಾಳಾದ ಯೋಚನೆಯ ಫಲವದುವೆ ಮತ್ತೇನು
ಬಾಳಿನಲಿ ಬೆಳಕಿರದು ನೇತ್ರತನಯೆ.

ಭಂಡತನ ತೋರುತ್ತ ಮೀಸೆಯನು ತಿರುವುದಿರು
ಪುಂಡುಪೋಕರಿಯಾಗಿ ಊರೆಲ್ಲ ತಿರುಗಿ
ಕಂಡವರ ದೃಷ್ಟಿಯಲಿ ಕೀಳಾಗಿ ಕಾಣಿಸುತ
ಕೊಂಡು ಹೋಗುವುದೇನು ನೇತ್ರತನಯೆ.

ಪ್ರತಿದಿನ ಪಾಲಿಸುತ ಸೂತ್ರದಲಿರುವ ನೀತಿ
ನೀತಿಸಂಹಿತೆ ಜಾರಿ ಅನುಷ್ಠಾನದಲಿ
ಮತಿವಂತ ಅಭ್ಯರ್ಥಿ ಕಣದಲ್ಲಿ ಆರಿಸುವ
ಚತುರಮತಿ ವೃದ್ಧಿಸಲಿ ನೇತ್ರತನಯೆ.

ನಡೆನುಡಿಯ ಬದ್ಧತೆಯು ಶುದ್ಧವಿರೆ ಭೂಷಣವು
ತೊಡೆದುಬಿಡು ಅತಿಯಾದ ಆಸೆಯನು ದೂರ
ಬಡತನವು ಹಣದಲಿರೆ ಸಿರಿತನವು ಮನದಲ್ಲಿ
ಅಡಿಯಿಡುತ ಸತ್ಕರ್ಮ ನೇತ್ರತನಯೆ.

ರಾಜಕೀಯದ ಚಿತೆಯ ಬಲಿಪಶುವು ಆಗದಿರಿ
ರಾಜಕಾರಣದ ಒಳಮರ್ಮ ಅರಿತಿಲ್ಲ
ರಾಜರೊಲು ಮಜವಾದ ಬದುಕೆನುವ ಹುಂಬತನ
ರಾಜಕೀಯದ ದೃಶ್ಯ ನೇತ್ರತನಯೆ.

ಅಬ್ಬರದ ಘೋಷಣೆಗೆ ಮರುಳಾಗಿ ಮತದಾರ
ಉಬ್ಬಿರುವ ಪೂರಿಯನು ಸವಿದಂತೆ ಸವಿಯೆ
ಕೊಬ್ಬುವರು ಬೇರಿಹರು ಯೋಚಿಸುವ ಸರಿಯಾಗಿ
ತಬ್ಬಲಿಯ ಗತಿ ಬೇಡ ನೇತ್ರತನಯೆ.

ಹುತ್ತದಲಿ ಅಡಗಿರುವ ಹಾವಂತೆ ಕೆಲವರಿರೆ
ಸುತ್ತಲಿನ ಜಗದಲ್ಲಿ ಎಚ್ಚರದಿ ನಡೆಯೆ
ಕುತ್ತದುವೆ ಬಳಿ ಬರದು ಬದುಕಿನಾ ಪಯಣದಲಿ
ಹೊತ್ತಿಸುವ ಹಣತೆಯನು ನೇತ್ರತನಯೆ.

ತಗ್ಗಿ ಬಗ್ಗುವ ನಡೆಯ ಪಾಲಿಸುತ ಅನುದಿನವು
ಬಗ್ಗಿದವ ಮೇಲೇಳೆ ಬಿಡದಂತ ಜನರು
ಹುಗ್ಗಿಯನು ಸವಿಯುತ್ತ ಕೇಳಿಯನು ಮಾಡುವರು
ಬಗ್ಗಿ ನಡೆದರೆ ಗುದ್ದು ನೇತ್ರತನಯೆ.

ಮಂದೆಯಲಿ ಒಂದಾಗಿ ಕುರಿಯಂತೆ ಸಾಗುತಿರೆ
ಮುಂದೇನು ಅರಿಯದಲಿ ಹಳ್ಳದಲಿ ಬಿದ್ದು
ಚಂದವಿಹ ಬದುಕಿನಾ ಬಲಿಯನ್ನು ನೀಡುತ್ತ
ಕುಂದಣವ ಕೆಡಿಸಿದೊಲು ನೇತ್ರತನಯೆ.

ರಂಗೇರಿ ಅಬ್ಬರದ ಕಹಳೆಯನು ಮೊಳಗಿಸುತ
ಮಂಗನಾಟವನಾಡಿಸುವ ಪಕ್ಷಗಳಿರೆ
ಸಂಗಡವಿರಲಿ ಬುದ್ಧಿ ನಿರ್ಧಾರ ಜನತೆಯಲಿ
ಭಂಗುರದ ಬದುಕಿದುವೆ ನೇತ್ರತನಯೆ.

ಮತಿವಂತ ಜನರನ್ನು ಬಲೆಬೀಸಿ ಸೆಳೆಯುವರು
ಅತಿಯಾದ ಧೂರ್ತ ವಿನಯವ ತೋರಿಸುತಲಿ
ಹಿತನುಡಿಗೆ ಮರುಳಾಗಿ ಮತವನ್ನು ನೀಡಿದರೆ
ಗತಿಗೆಡುವ ಸಂದರ್ಭ ನೇತ್ರತನಯೆ.

ಮತಮಾರಿ ಪಡೆಯುವುದು ನಶ್ವರದ ಸುಖಭೋಗ
ಚ್ಯುತಿಗೊಳಿಸಿ ಹಕ್ಕುಗಳ ಗಳಿಸಿ ವೈಭೋಗ
ಸತಿಸುತರ ನೆಮ್ಮದಿಗೆ ಭಂಗವನು ತರುವಂತ
ಮತದಾನ ಬೇಕೇನು ನೇತ್ರತನಯೆ.

ಕೋರಿಕೆಯ ಮಹಪೂರ ಪಟ್ಟಿಯದು ಮುಂದಿರಲು
ಸಾರಿ ಹೇಳುವ ಸತ್ಯ ಧರ್ಮಗಳ ಬೆಳಕಿನಲಿ
ತೋರಿಕೆಗೆ ಮರುಳಾಗೊ ಮತದಾನ ಧಿಕ್ಕರಿಸಿ
ಮೇರುಗುಣ ಮೆರೆಸುತಲಿ ನೇತ್ರತನಯೆ.

ವಿಕಸಿತವು ಭಾರತವು ಎಂದೆನುವ ಭಾವವೇ
ನಿಕಟ ಮುದ ನೀಡುವುದು ಭಾರತೀಯರಿಗೆ
ಸಕಲ ಜನರೊಗ್ಗೂಡಿ ಮತದಾನ ಜಾಗೃತಿಗೆ
ಅಕಳಂಕ ದೇಶವಿದು ನೇತ್ರತನಯೆ.

***

ವೆಂಕಿ ಅಂತಾಳ !!!!

– ರೇಣುಕಾ ದೇಸಾಯಿ

(ಇದೊಂದು ಲೇಖನ ಅನ್ನಿ, ಇಲ್ಲಾ ಹರಟೆ ಅನ್ನಿ, ಇಲ್ಲಾ ಕಥೆ ಅನ್ನಿ, ನಿಜವಾದ ಸನ್ನಿವೇಶ, ಹೆಸರು ಬದಲಾಯಿಸಲಾಗಿದೆ ಅಷ್ಟೇ. ಈ ಬರಹದ ಉದ್ದೇಶ, ಬರುಬರುತ್ತಾ ಸಣ್ಣ, ಅತೀ ಸಣ್ಣ ಕುಟುಂಬ ಕಾಣುವ ಕಾಲದಲ್ಲಿ ಇಬ್ಬರು ಗಂಡುಮಕ್ಕಳು, ಇಬ್ಬರು ಸೊಸೆಯರು ಮತ್ತು ಇಬ್ಬರು ಮೊಮ್ಮಕ್ಕಳ ಜೊತೆಗೆ, ಅಂಚೆ ಇಲಾಖೆಯಲ್ಲಿ ಪೂರ್ತಿ ಅರವತ್ತು ವರ್ಷದವರೆಗೆ ಒಟ್ಟಿಗೆ ಸೇವೆ ಮಾಡಿ ನಿವೃತ್ತಿ ಹೊಂದಿದ ದಂಪತಿಗಳ ನಿರಾಳ ಸಂಸಾರದ ಚಿತ್ರಣ, ಕಂಡದ್ದು ಕಂಡಹಾಗೆ ಅದೇ ಉತ್ತರ ಕರ್ಣಾಟಕ ಭಾಷೆಯಲ್ಲಿ ಬರೆದು ನಿಮ್ಮಗಳ ಎದುರಿಗೆ ಇಡುವ ನನ್ನ ಸಣ್ಣ ಪ್ರಯತ್ನ ಅಷ್ಟೆ)

ವೆಂಕಿ ಅಂತಾಳ !!!!

"ಬರ್ರಿ, ಬರ್ರಿ.., ಸಂತೋಷ ಆಯ್ತು ನೋಡು, ನೀವೆಲ್ಲ ಬಂದಿದ್ದು", ಹೀಂಗ ಮನೆ ಯಜಮಾನಿ ಖರೇನ ಸಂತೋಷ ದಿಂದ ಬರಮಾಡಿಕೊಂಡ್ರು. ಲಕ್ಷಣವಾದ ಮುತ್ತೈದೆ, ವಯಸ್ಸಾದರೂ ಮಾರಿ ಮ್ಯಾಲಿನ್ ಕಳೆ ಒಂಚೂರು ಕಡಿಮ್ ಆಗಿಲ್ಲ ಅನ್ನಿಸ್ತು. ನಮಗರ ಖುಷಿ, ಈಗಿನ ದಿನ್ದಾಗ ಯಾರ್ ಕರೀತಾರ ಹಿಂಗ, ಎಲ್ಲರೂ ಮಾರಿ ಸೊಟ್ಟ ಮಾಡರ.

"ಸ್ವಲ್ಪ ಚಾ ಕುಡಿರಿ, ಚಾ ಕುಡಿತೀರ ಕಾಫಿ ಕುಡಿತಿರ? ಹಚ್ಚಿಟ್ಟದ್ದು ಅವಲಕ್ಕಿ ಅವ, ಸ್ವಲ್ಪ ಬಾಯಾಗ ಹೊಕ್ಕೊಳ್ರಲ"

"ಅಯ್ಯ, ಅವರು ಕೈಕಾಲ ಮಾರಿ ತೋಳಲೀssss, ಅಷ್ಟ ಯಾಕ ಅವಸರಾ ಮಾಡ್ಲಿಕಹತ್ತಿರೀ" ಎಲ್ಲಾರ ಮುಂದನ ಯಜಮಾನನಿಗೆ ಯಜಮಾನಿ ಕುಟುಕಿದ್ರ.

ನಾವ್ ಇವ್ರನ ವೆಂಕಟೇಶ ಪದ್ಮಾವತಿ ಅನ್ನೋಣ. ಯಾಕಂದ್ರ ಮನಿ ಒಡ್ತಿ ಭಾಳ ಛಂದ ತಿದ್ದಿದ ಗೌರಿ ತರ ಇದ್ದಾಳ, ಗಂಡ ನೋಡಿದ್ರ ಕರ್ರಗ ತಿರುಪತಿ ತಿಮ್ಮಪ್ಪನಂಗ ಇದ್ದಾನ. ಇಬ್ರು ಮಕ್ಕಳು, ಇಬ್ರ ಸೊಸೇರು, ಇಬ್ರು ಮೊಮ್ಮಕ್ಕಳು ಹಿಂಗಾಗಿ ಮನ್ಯಾಗ, ಕೆಳಗ, ಮ್ಯಾಲ ಅವರ ಅದಾರ.

ನಾವು ಮಾರಿ ತೊಳ್ಕೊಂಡ್ ಫ್ರೆಶ್ ಆಗೋದ್ರೊಳಗ ಮ್ಯಾಲಿನ್ ಮನಿಯಿಂದ ರುಚಿ ರುಚಿ ಹಚ್ಚಿದ ಅವಲಕ್ಕಿ ಸೊಸೆ ತಂದುಕೊಟ್ಲ, ನಾವು ನಾಲ್ಕೂ ಜನಕ್ಕ ಪ್ಲೇಟ್ನಾಗ ಅವಲಕ್ಕಿ ಹಾಕಿ, ತಗೋರಿ, ಚಾ ತರ್ತೀನಿ ಅನ್ಕೊತ ನಮ್ಮ ಪದ್ಮಾವತಿ ಒಳಗ್ಹೋದ್ರಾ.

"ಏsss, ಇಕಿನ, ಅವಗೊರ್ಂದಿಷ್ಟು ಸೇವು ಹಾಕಲಾ, ಬಾಳಾ ರುಚಿಯಾಗ್ತದ", ಕುಂತಲ್ಲಿಂದನ ಹೆಂಡ್ತಿಗೆ ಕೂಗ್ ಹಾಕಿದ್ರ. ರುಚಿ ರುಚಿ ಅವಲಕ್ಕಿ ಸೇವು, ಚಾ ಸೇವನೆ ಆಯ್ತಾ.

"ನೋಡಪಾ, ಸಾಡೆ ನೌವಿಗೆ ಇನ್ನೊಬ್ಬ ಆಟೊದೋನ್ ಜೊತೆ ಮನೆ ಹತ್ರ ಬಂದ್ಬಿಡು, ರಾಣಿ ಚೆನ್ನಮ್ಮ ಗಾಡಿಗೆ ಹೋಗದದ" ರಾತ್ರಿ ಹೋಗಾಕ ವ್ಯವಸ್ಥೆ ಮಾಡ್ಲಿಕ್ಕೆ ಹತ್ತಿದ್ರು ಪದ್ಮಕ್ಕ.

"ಏ ಪೂರ್ಣಿಮಾsss ಲಘೂನ ನಡಿ, ನಿನ್ನ ಬಳಿ ಬದ್ಲು ಮಾಡ್ಕೊಂಡ್ ಬರೋಣ".

"ನೀವು ಟಿವಿ ನೋಡ್ಕೋಂತ ಕುಂತಿರ್ರಿ, ನಾವ್ ಹಿಂಗ್ ಹೋಗಿ ಹಿಂಗ್ ಬರ್ತಿವಿ. ಬೆಂಗಳೂರ್ದಾಗ ಗಟ್ಟಿ ಬಳಿ ಸಿಗಂಗಿಲ್ಲ, ಇಲ್ಲಿ ಬಳಿ ಕೊಂಡ್ಕಂಡರ ಎರಡ್ ವರ್ಷ ಚಿಂತಿರಾಂಗಿಲ್ಲ." ಎಂದ ಹೇಳಿದೋರನ ಅತ್ತಿಗೆ ನಾದ್ನಿ ಬಳಿ ತರಾಕ ಹೊಂಟ್ರು.

ಪೂರ್ಣಿಮಾ, ಪದ್ಮಾವತಿ, ಅತ್ತಿಗೆ–ನಾದ್ನಿ, ನಾನು, ಪೂರ್ಣಿಮಾ, ಅನಸುಯಕ್ಕ, ವಸಂತಕ್ಕ ಬೆಂಗಳೂರಿಂದ ಹುಬ್ಬಳ್ಳಿಗೆ ಹೋಗಿದ್ವಿ. ಒಂದು ಕಾನ್ಫರೆನ್ಸ್‌ಗೆ, ಬರುವಾಗ ಪೂರ್ಣಿಮಾ ಹೇಳಿದ್ಲು, 'ಬರೋ ದಿನಾ ನನ್ನ ಗಂಡನ ಅಕ್ಕನ ಮನೆಗೆ ಹೋಗೋಣ, ರಾತ್ರಿ 10:30ಕ್ಕ ರಾಣಿ ಚೆನ್ನಮ್ಮ ಅದ, ಅಲ್ಲಿವರ್ಗು ಅವರ್ರ ಮನ್ಯಾಗ ಇದ್ದು ಊಟ ಮಾಡ್ಕೊಂಡು ಬರೋಣ' ಅಂತ. ಈಗಿನ ಕಾಲ್ದಾಗ ನಾದಿನಿ ಜೊತೆ ಬರೋ ಮೂರು ಮಂದಿ ಗೆಳ್ತ್ಯಾರ್ನ ಆದರ ಮಾಡೋರು ಯಾರ್ ಇರ್ತಾರೆ ಹೇಳ್ರಿ?

"ಬ್ಯಾಸ್ರ ಆಗ್ತದ, ಟಿವಿ ನೋಡ್ರಿ." ಅಂತ ಟಿವಿ ಹಚ್ಚಿ ಹೋದ್ರು ಅತ್ತಿಗೆ ನಾದ್ನಿ. ಎಲ್.ಕೆ.ಅಡ್ವಾಣಿಯವರ್ಗೆ ಭಾರತರತ್ನ ಸಿಕ್ಕ ವಿಷಯ ಸಂಭ್ರಮದಿಂದ ಹೇಳ್ತಾ ಇದ್ರು ಟಿವಿಯೋರು. ನಮ್ಮೊಂದಿಗೆ ಕುಳಿತಿದ್ದ ವೆಂಕಟೇಶ ಟಿವ್ಯಾಗ ಬರೋ ಒಂದೊಂದು ವಿಷಯಕ್ಕೂ ಒಂದೊಂದಿಷ್ಟು ಮಾತಾಡತಿದ್ರು. ಅದೆಷ್ಟು ಅತಿಥಿಗಳೊಂದಿಗೆ ಮಾತಾಡೋ ಸಂಭ್ರಮ ಅವರ್ಗೆ!!!

ನನ್ನೊಂದಿಗೆ ಇದ್ದ ವಸಂತಕ್ಕನಿಗೆ ಧಾರ್ವಾಡದಾಗ ಇದ್ದು ರೂಢಿ ಇತ್ತು, ಹೀಗಾಗಿ ಅವರು ಈ ಮನಿ ಯಜಮಾನ ಮಾತಾಡೊ ಉತ್ತರ ಕರ್ಣಾಟಕದ ಮಾತು ತಿಳ್ಕೊಂಡು ತಮ್ಮೊವ ಒಂದಿಷ್ಟು ಮಾತು ಸೇರಿಸಿದ್ರು, ಆದ್ರ ಪಾಪ ಅನ್ಸುಯಕ್ಕಗ ನಮ್ಮ ಧಾರವಾಡ ಮಂದಿ ಫಾಸ್ಟ್ ಕನ್ನಡ ಅರ್ಥ ಆಗವಲ್ದು. ಆದರ, ರಿಟೈರ್ಡ್ ಪೋಸ್ಟ್‌ಮಾಸ್ಟರ್ ಆದ ವೆಂಕಟೇಶ್ ತಮ್ಮ ಅಧ್ಯಯನ, ಅಡ್ಡಾಟದ ಅನುಭವದಿಂದ ಪ್ರತಿ ಮಾತಿಗೂ ಮಾತು ಸೇರಿಸೋರು. ನನಗರ ಆರವರ್ಷ ಕಾಲೇಜ್ ಕಲಿಯಾಕ ಹುಬ್ಬಳ್ಳಿಯಲ್ಲಿದ್ದು ಅನುಭವ ಇತ್ತ, ಹೀಗಾಗಿ ನಾನು ಅವರ ಸ್ಪೀಡ್ಗೆ ಮಾತಾಡ್ದೆ.

ಮಧ್ಯಕ್ಕ, ಅವ್ರ್ ಸೊಸೆ ಮ್ಯಾಲಿಂದ ಬಂದು, "ಅವರಿನ್ನು ಬರ್ಲಿಲ್ಲ ಏನ್? ಊಟ ರೆಡಿ ಅದ, ಅವರಿಬ್ಬರೂ ಬರೋ ಹೊತ್ತಿಗೆ ಮ್ಯಾಲ್ ಬರ್ರಿ, ಇವರಿದ್ರೆ ನಿಮಿಗ್ ಚಲೋ ಕಂಪನಿ ಕೊಡ್ತಾರೆ, ಬ್ಯಾಸರ ಆಗಂಗಿಲ್ ನೋಡ್ರಿ ನಿಮ್ಗ" ಎಂದು ಹೇಳಿದ್ದಾಕೀನ, ನಮ್ ಜೊತೆ ಎರಡು ಮಿನಿಟ್ ಹರಟೆ ಹೊಡೆದು ಹೋದ್ಲು.

ಅರ್ಧ ಗಂಟೆ ಆಗದ್ರಾಗ ಅತ್ತಿಗೆ ನಾದ್ನಿ ಸಂತೋಷದಾಗ ಬಂದ್ರು. ಅವ್ರ್ ಮಾರಿ ನೋಡಿದ್ರೆ ಗೊತ್ತಾಗ್ತಿತ್ತು ಅವರಿಗೆ ಚಂದದ ಬಳಿ ಸಿಕ್ಕಾವಂತ. ಎಲ್ಲರೂ ಸೇರಿ ಮ್ಯಾಲೆ ಊಟಕ್ ಹೋದ್ವಿ, ಸರಳ ಮಾತು ದೊಡ್ಡ ವಿಚಾರ ಅನ್ನೋಹಂಗಿತ್ತು ಊಟದ ತಯಾರಿ. ನೆಲದ ಮೇಲೆ ತಾಟ್ ಹಾಕಿ, "ಎಲ್ಲರೂ ನೆಲ್ದಮ್ಯಾಲ ಕೂತ್ಕೋತೀರೋ ಇಲ್ಲ?" ಅಂತ ಕೇಳಿದ್ರು ನಮ್ಮ ಪದ್ಮಕ್ಕ. ನೆಲ್ದಮ್ಯಾಲ ಚಕ್ಕಮಕ್ಕ ಹಾಕ್ಕೊಂಡು ಕೂತು ಬಾಳಾsss ದಿನ ಆಗಿತ್ತ.

ಸೊಸೆ ಒಂದೊಂದ ಅಡಗಿ ಇಟ್ಟಾಂಗ, ಅತ್ತಿ ಒಂದೊಂದ ಬಡ್ಸಾಕ್ ಹತ್ತಿದ್ರು. ಟೊಮೆಟೊ, ಸೊಪ್ಪಿನ ಪಚ್ಚಿ, ಶೇಂಗಾ ಚಟ್ನಿ, ಮೊಸರು, ರಂಜಕ, ಜೋಳದ ಭಕ್ರಿ, ಚಪ್ಪರದವರಿಕಾಯಿ ಪಲ್ಯ ಜೊತೆ ಜೊತೆಗೆ ಹರಟೆ ನಡದsss ಇತ್ತು.

"ನಿಮ್ಮನೇರ್ನ ಕರೀರಿ, ಅವರು ಒಬ್ಬರ$_{ss}$ ಇದ್ದಾರ ಕೆಳಗ", ನಾವ ಊಟಕ್ಕ ಕುಂತೀವಿ ಅನ್ನೋ ಮುಜುಗರ ನಮಗ.

"ಅಯ್ಯೋ ನಮ್ಮನೆ ಗಂಡಸರು ಹಂಗೆಲ್ ಬರ್ತಾರ? ಹನ್ನೊಂದು ಹೊಡೆದ ಮ್ಯಾಲ ಬರ್ತಾರ, ಅವರಿಗೆ ಹೊತ್ತಿಲ್ಲ ಗೊತ್ತಿಲ್ಲ. ನನ್ ಮಗ ಅಂತೂ ಗೆಳ್ಯಾರು ಅಂತ ಈಗ ಹೊರಗ ಹೋಗ್ಯಾನ, ಅವನು ಬಂದಾ$_{ssss}$ಗ ನಿಜ. ನಮ್ಮನೆ ಗಂಡಸರಿಗೆ ನಮ್ ಕಷ್ಟ ಒಂದಿಷ್ಟು ಅರ್ಥ ಆಗವಲ್ದಾಗೆದ ನೋಡ್ರಿ"

ಆಗ ನಂಗ ಮಾಸ್ಟರ್ ಹಿರಣ್ಣಯ್ಯ ಹೇಳೋ ಗಂಡಂದ್ರ ವಿವರ ನೆನಪಿಗೆ ಬಂತು. ಪಂಚಿ ಚುಂಗ ಹಿಡಿದು ದಾಪಗಾಲ ಹಾಕುತ್ತಾ ಗಂಭೀರವಾಗಿ ಮುಂದೆ ಮುಂದೆ ಹೋಗ್ತಿದ್ರ, ಹೆಂಡ್ತಿ ಕಂಕ್ಳಾಗ ಒಂದು ಮಗು, ಕೈಯಾಗ್ ಒಂದ್ ಚೀಲ ಹಿಡ್ಕೊಂಡು ಹಿಂದ್ ಹಿಂದ ಬರತಿದ್ರ, ಅದು ಹೊಳ ಆಕಡಿ ಸಂಸಾರ. ಮುಂಗೈಲೊಂದ್ ಮಗು, ಬಲಗೈಯಾಗ ಕಾಯಿಪಲ್ಯ ಚೀಲ ಹಿಡಿದು ನಡೆಯೊ ಗಂಡನ ಜೋಡಿನ ಲಪ್ಟಿಕ್ ಹಾಕಿ, ಒಂದೊಳ್ಳೆ ಚಂದನ ಡ್ರೆಸ್ ಮಾಡ್ಕೊಂಡು ಹೆಂಡ್ತಿ ಹೋಗ್ತಾ ಇದ್ರ, ಅದು ಹೊಳ ಇಕಡಿ ಸಂಸಾರ ಅಂದದ್ಕ, ಅವರ ಸೊಸೆ ಗೊಳ್ ಅಂತ ದೊಡ್ಡಕ ನಕ್ಕು ನಮಗೆಲ್ರವ್ವಾ ಅಂತ ಭಾಗ್ಯ ಅಂತಾಳ.

ಬಿ ವಿ ಬಿ ಕಾಲೇಜ್ದಾಗ ಇಂಜಿನಿಯರಿಂಗ್ ಓದಿದ ಹುಡುಗಿ ಆದ್ರೂ ಪಾಪ ತನಗ ಅಂತಾ ಸೌಲತ್ತು ಇಲ್ಲಾಂತ ಬ್ಯಾಸರಾ ಮಾಡ್ಕೊಲ್ದನ ನಕ್ಕೊಂತ ಅದಾಳ, ಜೊತೆಗೆ **Successful Entrepreneur** ಆಗ್ಯಾಳ.

"ನಮ್ಮಾವ, ಅದಾರ ನೋಡ್ರಿ ಅವರ ಹಂಗಲ್ಲ, ಪಾಪ ಇವರುಕೂಡ ಇರಾಕ್ ನೋಡ್ತಾರ, ಆದ್ರ ಇವರು ನನಗ ಅವರಕೂಡ ಏಗಾಕ ಆಗಲ್ಲ ಅಂದ್ಬಿಡ್ತಾರ. ಮೊನ್ನೆ ಅಯೋಧ್ಯಾಕ ಒಬ್ರ ಹೋಗಿ ಬಂದಾರ. ಪಾಪ ಕರದ್ರು ಬಾರ$_{sss}$... ಬಾರ$_{sss}$... ಅಂತ. ಅವರು ಬಾಳ ಗಟ್ಟಿ ಅದಾರ, ಸಮೀಪ ಇಲ್ಲೇ ಎಲ್ಲಾದ್ರು ಹೋಗ್ಬೇಕಾದ್ರ, ಎಲ್ಲಾ ಕಡೆ ನಡ್ಕೋತನ ಹೋಗ್ತಾರ, ಸ್ವಲ್ಪ ದೂರ ಇದ್ರ, ಬಸ್ಯಾಗ ಹೋಗಿಬಿಡ್ತಾರಾ. ಆದ್ರ, ಇವರಿಗೆ ನಮ್ಮ ಜೊತೆಗಿದ್ದು ಬಾಗಲವರ್ಗು ಕಾರ್ ಬರೋದು ರೂಢಿ ಆಗ್ಬಿಟ್ಟದ್, ಅವರು ಕೂಡ ಎಲ್ಲಿಗೂ ಹೋಗವಲ್ದ ಆಗ್ಯಾರ್", ನಕ್ಕೋತನ ಹೇಳ್ತಿದ್ಲು ಸೊಸಿ.

"ಮತ್ತ, ಇವರಿಗೇನ್ ಬ್ಯಾಸ್ರ ಇಲ್ಲಾ, ಬಾ ಅಂದ್ರ ಒಬ್ರ$_{ssss}$ ಬರ್ತಾರ, ನಮ್ಕೂಡಾ ಕಾರ ಹತ್ತಿಬಿಡ್ತಾರ", ಜೋರ್ ಧ್ವನಿಯಲ್ಲಿ ಹೇಳಿದ್ಲು, ಗಹಗಹಿಸಿ ನಗ್ತಿದ್ಲು.

ಅದಕ್ಕ ಅವರತ್ತಿ, ಸೊಸೆ ಹಿಂಗ ಅಂದ್ಲು ಅಂತ ಏನ್ ಬ್ಯಾಸರಾ ಮಾಡಕೊಳೇಲ್ಲಾ!! ಬದ್ಲಿಗೆ ನಕ್ಕೋಂತ, "ಎಲ್ರಪ್ಪ ಅವರ ಕೂಡ ಯಾರ ಹೋಗ್ತಾರ, ನನ್ ಕಾಲು ನೋವಾಗ್ಬಿಟ್ಟವ, ಅವ್ರು ಬಿರಾ$_{sssss}$ ಬಿರಾ, ಬೇರೆ ಹೋಗ್ತಾರ, ಎಲ್ಲ್ ಓಡಿ ಹೋಗಲಿ ಅವರು ಹಿಂದಿಂದ, ಎಲ್ಲರ ಹೋಗಿ ಬರ್ರಿ ಅಂತಬಿಟ್ಟಟ್ಟೆನಿ."

"ನಿಮಗ ಗೊತ್ತಿಲ್ರಿ, ಎಲ್ಲರ ಹೋದಾಗ ಅವರು ಮುಂದೆ ಹೋದ್ರ, ಅಯ್ಯೋ$_{sssss}$, ಅವರೆಲ್ಲೋ ಹೋದ್ರು ಅಂದ್ರ, ಬರ್ತಾರ್ ಬಿಡ್ರೋ, ಅವರೆಲ್ಲೊಗ್ತಾರ, ಅಂತಾರೆ ಇವರು. ಅದೇ ನಮ್ಮವ್ವ, ಅಪ್ಪ ಹೋಗುವಾಗ ನನಗೂ ನನ್ ತಂಗಿಗೂ ಬೈತಾರ್. ನಮ್ಮವ್ವಂತೂ, ನಮ್ಮಪ್ಪ ಮುಂದ ಮುಂದ ಹೋದರ, "ಅವರು ಹೋದರ ನೋಡು, ನೀವು

ಇಲ್ಲೇನ್ ಮಾಡ್ಲಿಕ್ಕ ಹತ್ತಿರೀ? ಯಾಕ್ ನಿಂತಿರೀ? ನಿಮಗೋಸ್ಕರ ನಾನು ನಿಲ್ಬೇಕಾಯ್ತು", ಅಂತಾ ಸಿಟ್ಟ ಸಿಟ್ಟ ಮಾಡತಾಳ, ಅವಳಿಗೆ ಗಂಡ ಬಯ್ಯಿತಾನ ಅಂತಾ ಹೆದರಕಿ. ಆದರೆ ಇವರ ಹಂಗಲ್ಲ ಬರ್ತಾರೇಳು, ಅಂತ ಆರಾಮ್ ಇರ್ತಾರೆ. ನಾವ್ ಕಾರ್‌ನ್ಯಾಗ ಹೋದ್ರ, ಅವ್ರ್ ಬಸ್ ಹಿಡ್ಕೊಂಡು ಬಂದು ಅಲ್ಲಿಗೆ ಸೇರತಾರ" ಹಿಂಗ, ಅತ್ತಿ ಮಾವನ ಬಗ್ಗೆ ಸೊಸೆ ಆರಾಮ್ ಹೇಳ್ಕೊಂತಿದ್ರ, ಅತ್ತಿಗೇನೂ ಬ್ಯಾಸರಿಲ್ಲ, ಅವರೂ ನಕ್ಕೋಂಡ್ ನಮ್ ಜೊತೆ ಹರಟಿ ಹೊಡೀಲಿಕ್ ಹತ್ತಿದ್ರು.

"ಏನss ಅನ್ರೀ, ನಾವು ಇವರಗತೆ ಗಟ್ಟಿಲ್ಲ, ನಮ್ಮ ಸುಹಾಸ್ ಅಂತೂ ಇನ್ನೂ ಆಲಸಿ ಇದಾನ" ಸೊಸೆ ಮಾತ್ಗೆ, "ಯಾರು ಸುಹಾಸ್ ಅಂತಾ" ಸುಮ್ಮನಿರಲಾರದ ನಾನ್ ಕೇಳ್ದನ, "ಅಯ್ಯss sss, ಅವಾ ನನ್ನ ಮಗ, ಇಕಿ, ಅವನ್ನ ಹೆಸರಿಟ್ಟ ಕರಿತಾಳ".

"ಮೊನ್ನೆ, ಒಂದು ಮದುವಿಗೆ ಹೋಗಿದ್ದೆ, ಕನ್ಯಾ ಹಸಿಮಣಿ ಮ್ಯಾಲ ವೆಂಕಿss ವೆಂಕಿssss ಅಂತಾಳ, ಆ ವರನ ಹೆಸರು, ವೆಂಕಟೇಶಮೂರ್ತಿ. ಹಣಿ ಹಣಿ ಬಡಕೋಬೇಕ್ರವ್ವಾ"

"ಮತ್ತ ನೀವು, ನಿಮ್ಮ ಮನೆರನ್ನ ಎನಂತಾ ಕರಿತಿರಿ" ಎನ್ನೋ ಪ್ರಶ್ನೆ ನಾನು ಮೋಜಿಗೋಸ್ಕರ ಕೇಳದೆ. "ಅಯ್ಯ ನಮ್ಮವ್ವಾ, ನಾವು ರೀ ಅನ್ನೋದ, ಸಿಟ್ಟು ಬಂದ್ರೂ ರೀ ನ" (ರೀ..ನ ಒಂದಿಷ್ಟು ಒತ್ತಿ ಹೇಳದ್ರು) ಅಂತಾ ಅವರು ಅಂದ್ರ, ನಮಗರ ನಗುನೋ ನಗು.

"ನಿಮ್ಮ ಅತ್ತಿ, ಸೊಸಿ ಮಾತು ಬಾಳಾ ಆಪ್ತ ಆಗ್ಯಾವ, ಎಷ್ಟರ ನಕ್ಕೊತ ಮಾತಾಡ್ತಿರಿ, ಈಗಿನ ದಿನ್ದಾಗ ಕೂಡಿ ಇರೋದ ಅಪರೂಪ, ಮೇಲಾಗಿ ಹಿಂಗ ನಕ್ಕೊತ ಮಾತಾಡೋದು ಇನ್ನೂ ಕಡಿಮಿನ", ಅವರಿಬ್ಬರ ನೋಡಿ ನನ್ನ ಖುಷಿ ನಾನ್ ಹೇಳದೆ.

ಮತ್ತ ಮಾತಿಗೆ ಶುರುಹಚ್ಚಿದ್ಲು ನಮ್ಮ ಸಾಕ್ಷಿ, ತನ್ನ ಒರಿಜಿನಲ್ ಧ್ವನ್ಯಾಗಾ. ದೊಡ್ಡ ಧ್ವನಿ ಬಾಯತುಂಬ ನಗು. "ಅಯ್ಯ ನಮ್ಮ ಮನ್ಯಾಗ ಹೋದ ತಿಂಗಳ ನಮ್ ಮೈದಾ ಸ್ವೀಡನ್ಗೆ ಹೋದ್ನ, ಎಲ್ಲಾರು ಅಳೋದ, ಅಳೋದು, ಅವನೂ ಅಳ್ತಾನ, ನಾವೂ ಅಳ್ತೇವಿ ಮತ್ತ ಇವರೂ ಅಳ್ತಾರ, ಎಲ್ಲಾರೂ ಆಳೋರ. ನಗು ಬ್ಯಾರೆ".

ನನಗ ಅವಳ ಮಾತು, ಆ ನಗು ಬಾಳಾ ಛಂದ ಅನ್ಸತಿತ್ತು ಅದಕ್ಕ ಕೇಳ್ದೆ, "ಯಾಕ ಹೋದ್ರು?"

"ವೋಲ್ವೋ ಕಂಪನಿಯಾಗ ಛಲೋ ಪ್ಯಾಕೇಜ್ ಸಿಕ್ಕದ."

"ಸ್ವೀಡನ್ಯಾಗ ಎಲ್ಲಿದ್ದಾನ?"

"ಗೋತನ್ ಬರ್ಗ ಅಂತಾರ, ಅವರ ಹೇಳದ್ದು, ನಮ್ಗ ಗೊತ್ತಿಲ್ಲ, ನಾವು ಫಾರನ್ ಮಂದಿ ಅಲ್ಲ, ಫಾರನ್ ಹೋಗೋರಲ್ಲ", ಹಸಿ ಗ್ವಾಡಿ ಮ್ಯಾಲ ಹರಳ ಒಗದಾಂಗ ಹೇಳುತಿದ್ಲು ಸಾಕ್ಷಿ. ಆದ್ರೂ ಒಂದು ದೊಡ್ಡ ಕಂಪನಿ ಸೆಟಪ್ ಮಾಡ್ಯಾಳ, ಹುಬ್ಬಳ್ಯಾಗ ಒಂದಿಷ್ಟು ಹೆಸರೂ ಮಾಡ್ಯಾಳ.

ನಾವಂತೂ ಅವರ್ ಮಾತಿನ್ ಮಜಾ ತಗೊಂತ ಎರಡೆರಡು ಜ್ವಾಳದ ಭಕ್ರಿ, ಬಿಸಿ ಬಿಸಿ ಅನ್ನ ಹುಳಿ, ಮೊಸರನ್ನ ಜಡ್ಡಮ್ಯಾಲ್, ರಾಣಿ ಚೆನ್ನಮ್ಮ ವ್ಯಾಳ್ಯ ಆಗಿತ್ತ, ಬಾಯಿಗೆ ಬಡೇ ಸೋಪ್ ಹಾಕ್ಕೊಂಡು. ಹಣ್ಣು, ಅಡಿಕೆ ಎಲೆ, ಅಕ್ಕಿ ಎಲ್ಲ ಉಡಿ ತಗೊಂಡು ಕೆಳಗ ಬರೋದ್ಕು ಆಟೋ ಬಂದ್ ನಿಂತಿದ್ವ. ನಮ್ಮ ಲಗೇಜ್ ತಗೊಂಡ್ ಹತ್ತಿದ್ವಿ. ದಾರಿಯಾಗ ಅನುಸೂಯಕ್ಕ ಕೇಳ್ತದ್ಲು, ಅವರಿಬ್ರು ಛಂದ ಮಾತಾಡ್ತಾ ಇದ್ರು. ಅತ್ತೆ ಎದುರ್ಗೆ ಸೊಸೆ ಏನಂದ್ರೂ ಅತ್ತಿ ಬ್ಯಾಸ್ರಾ ಮಾಡ್ಕೊಳಲ್ಲ."

"ಹೌದ್ರೀ ನಮ್ ಕಡೆ ಹಿಂಗ, ಏನ್ ಅನಿಸ್ತು, ಅದು ಮ್ಯಾರಿ ಮ್ಯಾಲ್ ಹೇಳಿ ಸಂತೋಷಪಡ್ತೀವಿ" ಹಾಸ್ಯಗಾರ ಪ್ರಾಣೇಶ ಹೇಳ್ತಾರಲ್ಲ, ಬೆಂಗಳೂರು ಮಂದಿ ಹಂಗ ನಾಜೂಕ ಮಾಡ್ಕೊಂತ ಹೊಟ್ಯಾಗ ಒಂದು ಮ್ಯಾಲೊಂದು ಮಾತಾಡೊರಲ್ಲ, ಅಂದಿದ್ಕ ಅನಸೂಯಕ್ಕಗ ಅಸಮಾಧಾನ ಆಯ್ತುವ್ವ!!!

***

ಕಥೆ

ತುಟ್ಟಿಯ ತುಟಿಗಳು

– ವಿಠ್ಠಲ ಇಜೇರಿ

ಕಥೆ ಹೇಳುವವರು ತಮ್ಮದೇ ಆದ ರೀತಿಯಲ್ಲಿ ಪಾತ್ರಗಳಿಗೆ ಜೀವ ತುಂಬುತ್ತಾರೆ. ಪ್ರಾಚೀನ ಕಾಲದಿಂದಲೂ ಕಥೆ ಎನ್ನುವುದು ಮಾನವ ಜೀವನದ ಒಂದು ಅಂಗವಾಗಿದೆ. ಜಗತ್ತಿನ ಎಲ್ಲೆಡೆಯೂ ಕಥೆ ಹೇಳುವ, ಕೇಳುವ ಮತ್ತು ಬರೆಯುವ ಹವ್ಯಾಸ – ಸಂಸ್ಕೃತಿಯಾಗಿ ರೂಪಗೊಂಡು ಮನು ಕುಲಕ್ಕೆ ಸಂಸ್ಕಾರ ನೀಡುವ ಮಾಧ್ಯಮವಾಗಿದೆ. ಆಧುನಿಕತೆ, ತಂತ್ರಜ್ಞಾನ ಬೆಳೆದ ಈ ದಿನಗಳಲ್ಲಿಯೂ ಕಥೆ ಹೇಳುವ ಮತ್ತು ಕೇಳುವ ಪರಿ ಬದಲಾಗಿಲ್ಲ. ಕಥೆ ಬರೆಯುವವರಿಗಾಗಿ ಕಮ್ಮಟಗಳು ನಡೆದರೆ, ಕೇಳುಗರಿಗಾಗಿ ವಿಶೇಷ ಕಾರ್ಯಕ್ರಮಗಳು, ಮಾಧ್ಯಮ ಪ್ರಸಾರಗಳು ಇರುತ್ತವೆ. ಹಿರಿಯರಿಗೆ, ಮಕ್ಕಳಿಗೆ ಅವರವರ ವಯಸ್ಸಿಗನುಗುಣವಾಗಿ ಕಥೆಗಳು ಭಿನ್ನವಾಗಿರುತ್ತವೆ. ಕಥೆಗಳು ನೇರವಾಗಿ ಮನಸ್ಸನ್ನು ಮುಟ್ಟುತ್ತವೆ. ಆದುದರಿಂದ ಎಲ್ಲ ವಯಸ್ಸಿನವರು ಕತೆಗಳನ್ನು ಇಷ್ಟಪಡುತ್ತಾರೆ.

ಕಥೆಗಾರ ವಿವಿಧ ತಿರುವುಗಳನ್ನು ಪರಿಚಯಿಸುತ್ತ ಸಂತೋಷದಲ್ಲಿ ಕೊನೆಗೊಳಿಸಿದರೆ ಮನಸ್ಸಿಗೆ ಖುಷಿಯಾಗುತ್ತದೆ. ಅಂತ್ಯ ದುಃಖದಲ್ಲಾದರೆ, ಅಯ್ಯೋ ಹೀಗಾಗಬಾರದಿತ್ತು ಎಂದು ಮನಸ್ಸು ಕೊರಗುತ್ತದೆ. ಹಿರಿಯರ ಕತೆಗಳು ಪ್ರಬುದ್ಧತೆಯಿಂದ ಕೂಡಿದ್ದು ಚಿಂತನೆಗೆ ಹಚ್ಚುತ್ತವೆ. ಇಲ್ಲವೆ ಉತ್ತಮ ಸಂದೇಶಗಳನ್ನು ಹೊಂದಿರುತ್ತವೆ. ಮಕ್ಕಳ ಕಥೆಗಳು ಅವರ ಕಲ್ಪನಾ ಶಕ್ತಿಗೆ ಹೆಚ್ಚು ಒತ್ತು ಕೊಡುವಂತಹ, ಅವರ ಸೃಜನಶೀಲತೆಗೆ ಸ್ಫೂರ್ತಿ ನೀಡುವ ಮತ್ತು ಮನೋರಂಜನೆಯ ಮೂಲ ಉದ್ದೇಶ ಹೊಂದಿರುತ್ತವೆ. ಮಕ್ಕಳ ಯೋಚನಾ ಶಕ್ತಿಯನ್ನು ಊಹಿಸುವುದು ಕಷ್ಟ. ಯಾಕೆಂದರೆ ಬಾಲ್ಯದಲ್ಲಿ ನಾವು ಹೇಗೆ ಯೋಚಿಸುತ್ತಿದ್ದೆವು ಎಂಬುದು ನಮಗೆ ಜ್ಞಾಪಕವಿಲ್ಲ. ಆದರೆ ಒಂದಂತೂ ಸತ್ಯ ಕಥೆ ಕೇಳುತ್ತ ಕೇಳುತ್ತ ಮಕ್ಕಳು ಸಮಾಧಾನ ಹೊಂದಿ ನಿದ್ರೆಗೆ ಜಾರುತ್ತಿದ್ದರು. ಕಥೆ ಅಂದ ತಕ್ಷಣ ಅಜ್ಜ, ಅಜ್ಜಿಯರು ಜ್ಞಾಪಕಕ್ಕೆ ಬರುತ್ತಾರೆ. ಅಜ್ಜ, ಅಜ್ಜಿಯರು ಕಥೆ ಹೇಳುವುದು ನಮ್ಮ ಸಂಸ್ಕೃತಿಯಲ್ಲಿ ಒಂದು ಪರಂಪರೆಯೇ ಆಗಿದೆ. ಕೆಲವು ದಿನ ಹಿನ್ನಡೆಯಾದ ಈ ಪರಂಪರೆಯನ್ನು ಕೆಲವು ಸಂಘ ಸಂಸ್ಥೆಗಳು ಕಥೆ ಹೇಳುವ ಕಾರ್ಯಕ್ರಮಗಳನ್ನು ಆಯೋಜಿಸಿ ಮತ್ತೆ ಈ ಅಭ್ಯಾಸವನ್ನು ಮುನ್ನೆಲೆಗೆ ತರುತ್ತಿದ್ದಾರೆ. ಈಗ ಒಂದು ಒಳ್ಳೆಯ ಸಂದೇಶವಿರುವ ಹಾಸ್ಯ ಕಥೆ ನೋಡೋಣ.

ಒಂದು ಸಮಾರಂಭದಲ್ಲಿ ಯುವಕ ಯುವತಿಯರಿಬ್ಬರು ಒಂದೆಡೆ ಸೇರಿದ್ದರು. ಪರಸ್ಪರರ ಪರಿಚಯವಾಗಿ, ಪರಿಚಯ ಸ್ನೇಹವಾಗಿ ಕಣ್ಣಿಗೆ ಕಾಣದ ಭಾವವನ್ನು ಹೃದಯಗಳು ಗುರುತಿಸಿದವು. ಅವನ ಪಾಲಿಗೆ ಆಕೆ ಮುಗುಳು ನಗೆಯ ಚಂದ್ರನಂತೆ, ಆಕೆಯ ಪಾಲಿಗೆ ಅವನು ಮುಂಬರುವ ಬದುಕಿನ ಸಿಹಿಗನಸಾಗಿದ್ದನು. ಯುವತಿ ತಂದೆಯ ಬಳಿ "ನಾನೊಬ್ಬ ಯುವಕನನ್ನು ಇಷ್ಟಪಟ್ಟಿದ್ದೇನೆ. ನೀವು ಹೇಳಿದಾಗ ಬರಹೇಳುತ್ತೇನೆ. ನೀವು ಅವನೊಡನೆ ಮಾತನಾಡಿ ಒಪ್ಪಿಗೆ ಸೂಚಿಸಿದರೆ ಅವನನ್ನೇ ಮದುವೆಯಾಗುವೆ" ಅಂದಳು. ತಂದೆ "ನೋಡು ಮಗಳೇ, ನಮ್ಮದು ಸಿರಿವಂತ ಮನೆತನ, ನೀನು ಮೆಚ್ಚಿದ ಹುಡುಗ ನಮ್ಮ ಅಂತಸ್ತಿಗೆ ತಕ್ಕವನಾಗಿರಬೇಕು" ಎಂದು ಹೇಳಿದರು. ಆ ಯುವಕನಿಗೆ ಆಕೆ ತಂದೆಯ ಮಾತುಗಳನ್ನು ತಿಳಿಸಿ, ನಮ್ಮ ಮದುವೆ ಕಷ್ಟ, ಯಾಕೆಂದರೆ ನೀನು ನನ್ನನ್ನು ಸಲುಹಬಲ್ಲೆ, ಆದರೆ ಸಂಪತ್ತಿನ ಒಡೆಯನಲ್ಲ" ಎಂದು ಬೇಸರದಿಂದ ನುಡಿದಳು. ಯುವಕನಿಗೆ ಆಕೆಯನ್ನು ಬಿಡಲು ಇಷ್ಟವಿಲ್ಲ. ಏನೇ ಆಗಲಿ ನಿಮ್ಮ ತಂದೆಯ ಭೇಟಿಗೆ ಬರುವೆ" ಅಂದ.

ಆ ಹುಡುಗ ಒಬ್ಬ ಮದುವೆ ದಲ್ಲಾಳಿ ಬಳಿಗೆ ಹೋಗಿ ತನ್ನ ತೊಂದರೆ ಹೇಳಿಕೊಂಡ. ದಲ್ಲಾಳಿ "ನಾನು ಹತ್ತು ಲಕ್ಷ ಕೊಟ್ಟರೆ ನಿನ್ನ ಮೂಗು ಕುಯ್ದು ಕೊಡುವಿಯಾ? ಅಂದ. ಹುಡುಗ ದಲ್ಲಾಳಿಗೆ “ನಾನು ಮದುವೆಗೆ ಸಹಾಯ ಕೇಳಿದರೆ ಮೂಗು ಕುಯ್ಯುವ ಮಾತನಾಡುತ್ತಿರುವಿ. ನಾನು ಎಷ್ಟು ದುಡ್ಡು ಕೊಟ್ಟರೂ ಏನೂ ಕೊಡಲಾರೆ" ಅಂದ. ದಲ್ಲಾಳಿಗೆ ಸಹಾನುಭೂತಿ ಉಂಟಾಯಿತು. “ನೀನು ಹೋಗಿ ಹುಡುಗಿಯ ತಂದೆಯನ್ನು ಭೇಟಿಮಾಡಿ ಬಾ, ಆಸ್ತಿ ಅಂತಸ್ತಿನ ವಿಷಯ ನಮ್ಮವರು ಬಂದು ಮಾತನಾಡುತ್ತಾರೆಂದು ಹೇಳು" ಎಂದು ಹೇಳಿ ಕಳಿಸಿದ. ಯುವತಿಯ ತಂದೆಗೆ ಯುವಕನ ಆಕರ್ಷಕ ವ್ಯಕ್ತಿತ್ವವೇನೋ ಇಷ್ಟವಾಯಿತು. ಸಿರಿವಂತಿಕೆಯ ಕೊಡು ತೆಗೆದುಕೊಳ್ಳುವ ವಿಷಯ ಬಂದಾಗ ಅದನ್ನು ನಮ್ಮ ಹಿರಿಯರು ಬಂದು ಮಾತನಾಡುತ್ತಾರೆ" ಎಂದು ಹುಡುಗ ಹೇಳಿ ಬಂದ. ದಲ್ಲಾಳಿ ಶ್ರೀಮಂತ ಹುಡುಗನ ಸಂಬಂಧಿ ಎಂದು ಪರಿಚಯ ಮಾಡಿಕೊಂಡು ಕೋಟಿ ಕೋಟಿ ಆಸ್ತಿಯ ವಿವರ ಕೊಟ್ಟು ಬಂದ. ಮದುವೆಯೂ ನಡೆದು ಹೋಯಿತು. ಮದುವೆಯ ನಂತರ ಯುವಕನ ಬಂಡವಾಳ ಬಯಲಾಯಿತು. ಮದುವೆಗೆ ಮುಂಚೆ ಹೇಳಿದ ಕೋಟಿ ಖಾಲಿ ಲಕೋಟಿ ಎಂಬುದು ತಿಳಿದಾಗ ಶ್ರೀಮಂತ ದಲ್ಲಾಳಿಯನ್ನು ಕರೆಸಿ, "ಹೀಗೆ ಮೋಸ ಮಾಡುವುದೇ?" ಎಂದು ಜೋರು ಮಾಡಿದ. ದಲ್ಲಾಳಿ ಹೇಳಿದ, "ಸ್ವಾಮಿ, ನಾನು ನಿಮ್ಮ ಅಳಿಯನಿಗೆ ಹತ್ತು ಲಕ್ಷ ಕೊಡುತ್ತೇನೆ, ನಿನ್ನ ಮೂಗನ್ನು ಕುಯ್ದು ಕೊಡುವೆಯಾ? ಎಂದು ಕೇಳಿದೆ, ಕೊಡಲಾರೆ ಅಂದ. ನಾನು ಇಪ್ಪತ್ತು ಲಕ್ಷ ಕೊಡುವೆ ಎರಡೂ ಕಿವಿ ಕತ್ತರಿಸಿ ಕೊಡುವೆಯಾ? ಅಂದೆ. ಅವನು ಒಪ್ಪಲಿಲ್ಲ. ಹೋಗಲಿ ಮೂವತ್ತು ಲಕ್ಷ ಕೊಡುವೆ ನಿನ್ನ ಎರಡೂ ಕಣ್ಣುಗಳನ್ನು ಕಿತ್ತುಕೊಡು" ಅಂದೆ. ಅವನು ಅದೂ ಆಗದು ಅಂದ. ನಂತರ ನಿನ್ನ ತುಟಿಗಳೆರಡನ್ನು ಹರಿದು ಕೊಡು ಐವತ್ತು ಲಕ್ಷ ಕೊಡುವೆ" ಅಂದಾಗ ಕೊಡಲಾರೆ ಅಂದ. ಸ್ವಾಮಿ ನಿಮ್ಮ ಅಳಿಯ ಬಲು ತುಟ್ಟಿ ಇದ್ದಾನೆ, ಮುಖದಲ್ಲೇ ಕೋಟಿ ಲೆಖ್ಖ ಆಯಿತು. ಅವನ ಬೆಲೆ ಕಟ್ಟಲು ಹೋಗಬೇಡಿ, ನಿಮ್ಮ ಅಳಿಯ ಗುಣವಂತ, ಸದೃಢನಾಗಿದ್ದಾನೆ. ಮೈಮುರಿದು ದುಡಿದು ಮರ್ಯಾದೆಯಿಂದ ಬದುಕುತ್ತಾನೆ, ಇದೆಲ್ಲ ಸಂಪತ್ತಿಗೂ ಮಿಗಿಲಾದುದು" ಎಂದು ಸಿರಿವಂತನಿಗೆ ವಿವೇಕದ ಮಾತುಗಳನ್ನು ಹೇಳಿ ಸಮಾಧಾನಪಡಿಸಿದ.

ಈ ಕತೆಯ ಹಿನ್ನೆಲೆ ಏನೆಂದರೆ ನರೇಂದ್ರನ ತಂದೆ ವಿಶ್ವನಾಥ ದತ್ತ ವಕೀಲರು ಸಾಕಷ್ಟು ಸಂಪಾದನೆ ಮಾಡಿದರೂ ದಾನ ಧರ್ಮಗಳಲ್ಲಿ ಸಾಕಷ್ಟು ಖರ್ಚು ಮಾಡುತ್ತಿದ್ದರು. ಒಮ್ಮೆ ಯುವ ನರೇಂದ್ರ "ಅಪ್ಪಾ, ಹೀಗೆ ಖರ್ಚು ಮಾಡುತ್ತಿದ್ದರೆ, ನನಗಾಗಿ ಏನು ಆಸ್ತಿ ಉಳಿಸುವೆ?" ಎಂದು ಕೇಳಿದಾಗ ತಂದೆ "ಹೋಗು ಕನ್ನಡಿ ಎದುರು ನಿಂತು ನಿನ್ನನ್ನು ನೋಡಿಕೊಂಡು ಬಾ" ಅಂದರು. ನರೇಂದ್ರ ಕನ್ನಡಿ ಎದುರು ನಿಂತು ನೋಡಿಕೊಂಡಾಗ ಕಂಡದ್ದೇನು? ದಷ್ಟಪುಷ್ಟವಾದ ಆರೋಗ್ಯವಂತ ಶರೀರ ಮತ್ತು ಉತ್ಸಾಹಪೂರಿತ ವ್ಯಕ್ತಿತ್ವ. ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಜನರಿಗೆ ಮೇಲಿನ ಕಥೆ ಹೇಳುತ್ತಿದ್ದರು.

***

ಮತ್ತೆ ಬಂತು ಯುಗಾದಿ

– ಅನ್ನಪೂರ್ಣ ಸುಬ್ಬರಾವ್

ಯುಗಯುಗಗಳೆ ಕಳೆದರೂ ಬಂತು ಮತ್ತೆ ಯುಗಾದಿ
ವರ್ಷ ಕಳೆದು ಮತ್ತೆ ತಂತು ಹೊಸ ವರ್ಷದ ಆದಿ....

ಬಣ್ಣ ಬಣ್ಣದ ಹೂವು ಜಗವೆಲ್ಲ ಸಿಂಗಾರ
ಧರೆಯುಟ್ಟ ಹಸಿರಲ್ಲಿ ಒಡಲೆಲ್ಲ ಚಿತ್ತಾರ...
ಗಿಡಮರದ ಒಡಲಲ್ಲಿ ಚಿಗುರು, ಹೂ ಮೊಗ್ಗುಗಳು
ಗಂಧ ಸೂಸಿವೆ ನಸುನಾಚಿ ಅರೆಬಿರಿದ ಪಕಳೆಗಳು...

ಮಾಮರದ ಮರೆಯಲ್ಲಿ ಕೋಗಿಲೆಯು ಕೂಗಿ
ಚಿಗುರು ಚಾಮರವ ಬೀಸುತಿದೆ ತಲೆಬಾಗಿ....
ವಸಂತನ ಆಗಮನಕ್ಕೆ ಸ್ವಾಗತವ ಕೋರಿ
ಬಂತಿದೋ ನೋಡಿ ಋತುಗಳ ರಾಜನ ಸವಾರಿ..

ಮಾವಿನ ತೋರಣವು ಸ್ವಾಗತವ ಕೋರುತಿದೆ
ಬೇವೂ ಜೊತೆಯಾಗಿ ತನ್ನಿರುವನ್ನು ಸಾರುತಿದೆ
ಮುಂಜಾನೆಯ ಅಭ್ಯಂಜನ, ಪಂಚಾಂಗ ಶ್ರವಣ
ಬೇವು ಬೆಲ್ಲದ ಭಕ್ಷಣ ಭವಿಷ್ಯ ತಿಳಿಯುವ ಕ್ಷಣ...

ಬೇವು ಬೆಲ್ಲದ ಸಿಹಿಯಲಿ ಮಾವಿನೊಗರು
ನೋವು ನಲಿವುಗಳ ಜೊತೆ ಹಾಸ್ಯದಲಿ ನವಿರು
ಬೇಳೆ ಬೆಲ್ಲದ ಸಿಹಿ ಹೂರಣದ ಹೋಳಿಗೆ
ತಾಳ್ಮೆ ಸಮರಸವೇ ಜೀವನ ಎಂದಿಹುದು ಬಾಳಿಗೆ...

***

ಆವರಣ

– ಶೀಲಾ ಅರಕಲಗೂಡು

ಆವರಣವಿರಬೇಕು
ಸಾರ ಹೊಂದಿರಬೇಕು
ಹೊಸತನವ ಸೃಜಿಸುತ್ತ ಧೀವಸವ ಮೆರೆದು
ಆವರಿಸಿ ಸರ್ವರನು
ಸೆಳೆದು ಸದ್ಭಾವವನು
ಹರಡುತ್ತ ಗಂಧವನು ನಿಲದೆ ನಡೆದು

ನನ್ನಾತ್ಮ ನಿಧಿಯಾಗಿ
ಇಹುದೊಂದು ಆವರಣ
ಹಿಗ್ಗುತ್ತ ಹಿಗ್ಗಿಸುತ ಮನಸಿನಾನಂದ
ಹಳೆ ಬಂಧ ಹೊಸ ರೂಪ
ಪರಿಪರಿಯ ವೃತ್ತಾಂತ
ಕೊಡುತಿಹನು ಪರಮಾತ್ಮ ಕರುಣೆಯಿಂದ

ಹಾಗೊಂದು ದಿನವಿತ್ತು
ಕನಸಿನರಮನೆ ಇತ್ತು
ಬಂದೆಲ್ಲ ಅನುಭವವ ತಬ್ಬಿ ಹಿಡಿದಿತ್ತು
ಸೌಧ ತಾ ಹಿರಿದಾಗಿ
ವೈಭವವ ಮೆರೆಯುತ್ತ
ಬೆಳೆಯುತ್ತ ಬೆಳೆಸುತ್ತ ನನ್ನ ಹೊತ್ತು

ಬೀಜಗಳು ಮರವಾಗಿ
ಹನಿ ಹನಿಯು ಮಳೆಯಾಗಿ
ನೀರ ತೊರೆ ತಾ ಹರಿದು ಶರಧಿ ತಾನಾಗಿ
ಮೊಗ್ಗುಗಳು ಬಿರಿದಂತೆ
ಘಮಘಮಿಪ ಸುಮವಾಗಿ
ಆವರಣ ನಮಗಿರಲಿ ಬೆರಗದಾಗಿ

ಮಕ್ಕಳಿರಬೇಕಿಂತು
ಲೋಕದೊಳಗೊಂದಾಗಿ
ಪ್ರೀತಿಯನು ಹಂಚುತ್ತ ದೇಶಕ್ಕೆ ತುಡಿತ
ಭವ್ಯವಾಗಿರಲವರ
ಮುನ್ನೋಟ ಮುಂದಾರಿ
ಹರಸಿರಲಿ ಪರಬೊಮ್ಮ ಬಿಡದೆ ಸತತ

***

ಶುನಕಗಳ ಜಾಲದಲ್ಲಿ

- ಎಲ್. ಗಿರಿಜಾ ರಾಜ್

ಮೂಲೆ ಮನೆ ನಮ್ಮದು, ಬಯಸಿ ಬಯಸಿ ತೆಗೆದುಕೊಂಡ ಕಾರ್ನರ್ ಸೈಟಿನಲ್ಲಿ ಕಟ್ಟಿದ ಕಾರ್ನರ್ ಹೌಸ್. ಮನೆಯ ದಕ್ಷಿಣ ಮೂಲೆಯ ಕಾಂಪೌಂಡಿನ ಬಳಿ ನೆಟ್ಟಿರುವ "ನಂದಿಬಟ್ಟಲು ಮತ್ತು ಏಳು ಸುತ್ತು ಮಲ್ಲಿಗೆಯ ಗಿಡಗಳು" ಆಚೆಗೆ ಚಾಚಿಕೊಂಡು, ಹೂವುಗಳು ಆ ಕೊಂಬೆಗಳಲ್ಲೇ ಹೆಚ್ಚು ಬಿಡುವುದರಿಂದ ಬೆಳಗಿನ ಹೊತ್ತು ಕೈಯಲ್ಲಿ ಪ್ಲಾಸ್ಟಿಕ್ ಕವರ್ ಅಥವಾ ಚೀಲವೊಂದನ್ನು ಹಿಡಿದು ಬರುವ ಪುಷ್ಪ ಚೋರರು ನಿರ್ದಾಕ್ಷಿಣ್ಯವಾಗಿ ಒಬ್ಬರಲ್ಲ ಒಬ್ಬರು ಸಾರ್ವಜನಿಕ ಆಸ್ತಿಯೆಂಬಂತೆ ನಿರ್ದಾಕ್ಷಿಣ್ಯವಾಗಿ ಕೀಳುತ್ತಾರೆ. ವಯಸ್ಸಾದವರನ್ನು ಆಕ್ಷೇಪಿಸಲು ಮನಬಾರದೆ, ಕೊನೆಗೆ ಅವರೂ ಪೂಜೆಗೆತಾನೇ ಕಿತ್ತುಕೊಂಡು ಹೋಗುವುದು... ಇದೊಂದು ಬಲವಂತದ ಉಪಕಾರದ ಪುಣ್ಯಾರ್ಜನೆ ಬಿಡು ಎಂದುಕೊಂಡು ಸುಮ್ಮನಾಗಿಬಿಟ್ಟಿದ್ದೇವೆ!

ಮಲ್ಲಿಗೆ ಮನೆ ಎಂಬ ಅಡ್ಡ ಅಭಿದಾನವೂ ನಮ್ಮ ಮನೆಗೆ ಬಂದಿದೆ. ಗಾಳಿ ಧಾರಾಳವಾಗಿ ಬರಲಿ ಎಂದು ಕಿಟಕಿಗಳನ್ನು ತೆರೆದರೆ, ಟಾರ್ ರೋಡ್ ಎಂಬ ಮರ್ಯಾದೆಯನ್ನು ಮೇಲ್ನೋಟಕ್ಕೆ ಹೊಂದಿದ್ದರೂ ಅಲ್ಲಲ್ಲೇ ಎಲ್ಲ ಕಿತ್ತು ಹೋಗಿ ಹೆಚ್ಚೂ ಕಡಿಮೆ ಮಡ್ ರೋಡೇ ಆಗಿಬಿಟ್ಟಿರುವುದರಿಂದ ಗಾಳಿಯ ಜೊತೆಗೆ ಧೂಳು, ಮಣ್ಣು, ಸೊಳ್ಳೆ ಎಲ್ಲ ಧಾರಾಳ ಒಳ ನುಗ್ಗುತ್ತವೆ. ಎಷ್ಟೋ ಸಲ ಅಚ್ಚ ಬಿಳಿಯ ಮಧುರ ಮನದ, ನಂದಬಟ್ಟಲು ಮತ್ತು ಮಲ್ಲಿಗೆಗೂ ಧೂಳು ಅಡರಿ ಆ ಬಣ್ಣವೂ ಮಂಕಾಗಿರುತ್ತದೆ. ಹಗಲೋ ವಾಹನಗಳ ಶಬ್ದ!

ನಿಮಗೊಬ್ಬರಿಗೇ ಏನು? ಬೆಂಗಳೂರಿನಲ್ಲಿ ವಾಸಿಸುವವರಿಗೆಲ್ಲಾ ಇದ್ದದ್ದೆ ಎನ್ನುವಿರಾ? "ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ" ಎಂಬ ಮಹದೇವಿಯಕ್ಕನ ವಚನಕ್ಕೆ ನಾವೆಲ್ಲ ಅನ್ವರ್ಥರೇ! ಹೋಗಲಿ ರಾತ್ರಿ ಹೊತ್ತಿನಲ್ಲಾದರೂ ನೆಮ್ಮದಿಯಾಗಿ ನಿದ್ದೆ ಮಾಡುತ್ತಿದ್ದೇವೆ ಎಂದುಕೊಂಡಿದ್ದೀರಾ? ಇಲ್ಲ, ಯಜಮಾನರು ಮಲಗಿ, ಅಚ್ಚುಕಟ್ಟಾಗಿ ಒಂದು ನಿದ್ದೆ ತೆಗೆದಮೇಲೆ, ನಾನು ಮಲಗಲು ಸರಿ ರಾತ್ರಿಯಲ್ಲಿ ಹೊರಡುತ್ತೇನೆ. ದೊಡ್ಡ ಸಮಾರಾಧನೆ ಮಾಡಿರುವ ಹಾಗೆ ನಾನೇ ಹರಡಿರುವ ಅಡುಗೆ ಮನೆಯ ಸಮಸ್ತ ವಸ್ತುಗಳನ್ನೂ ಅವುಗಳ ಜಾಗಕ್ಕೆ ಸೇರಿಸದೆ ಇದ್ದರೆ ಬೆಳಗ್ಗೆ ಎದ್ದು ಅಡುಗೆ ಮನೆಗೆ ಬಂದು ಆ ಯುದ್ಧರಂಗ ನೋಡಿ ಹೆದರುವ ಶಿಕ್ಷೆ ನನಗೇ! ತೊಳೆ, ಬಳಿ, ಬಾಚು, ಒರೆಸುಗಳನ್ನು ಮಾಡಿ, ಒಂದಿಷ್ಟು ತಲೆಗೆ ಹೊಳೆದದ್ದಷ್ಟನ್ನು ಗೀಚಿ, (ಆ ಸಮಯದಲ್ಲಿ ಪ್ರಶಾಂತವಾಗಿರುವುದರಿಂದ ಬರೆಯಲು ಆಹ್ಲಾದಕರ) ಒಂದು ನಿಮಿಷ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಮಲಗಲು ಹೋಗುವ ಹೊತ್ತಿಗೆ ರಾತ್ರಿ ಸರಿಯಾಗಿ ಹನ್ನೆರೆಡು ಗಂಟೆ.

"ಅದು ನಿಶಾಚರರು ಸಂಚರಿಸುವ ಸಮಯ" ಎಂದು ನಮ್ಮವರು ಛೇಡಿಸುತ್ತಾರೆ. ಏನಾದರೂ ಹೆಸರಿಡಲಿ ನನಗೇನೂ ಚಿಂತೆಯಿಲ್ಲ! ಹಾಗೆನ್ನುವ ಮಹರಾಯರು ನನಗೇನೂ ಮಾಡಿಕೊಡುತ್ತಾರೆಯೇ?

ಮಲಗಿ ಹತ್ತು ನಿಮಿಷವಾಗಿರುತ್ತದೇನೋ! ನಿದ್ರಾದೇವಿ ಇನ್ನು ಕಣ್ಣುಗಳಿಗೆ ಮುತ್ತಿಟ್ಟು, ಮಡಿಲಿಗೆ ಎಳೆದುಕೊಳ್ಳುವುದಕ್ಕೆ ಬರಲೋ ಬೇಡವೋ ಎಂದು ಮೀ.ಮೇ. ಎಣಿಸುತ್ತಿರುವಾಗಲೇ ಮನೆಯ ಮೂಲೆಯಲ್ಲಿ, ನಾಲ್ಕು ರಸ್ತೆಗಳು ಕೂಡುವ ಜಾಗದಲ್ಲಿ ಶುನಕ ಕಾಳಗ ಶುರುವಾಗುತ್ತದೆ. ಸುತ್ತಮುತ್ತಲಿನ ಬಡಾವಣೆಗಳ ಶ್ವಾನ ವೀರರೆಲ್ಲ ಅಲ್ಲಿಗೆ ಆಗಮಿಸಿ ಜಮಾಯಿಸುತ್ತಾರೆ. ನಾಲ್ಕೂ ಕಡೆಯಿಂದ ನಾಲ್ಕು ತುಕಡಿಗಳು ಬಂದು ಸೇರುತ್ತವೆ. ದೂರದಿಂದ ನಿಧಾನವಾಗಿ

ಪ್ರಾರಂಭವಾಗುವ ಬೌ ಬೌ ಭಾಷೆ ನಿಧಾನವಾಗಿ ತಾರಕ ಸ್ವರಕ್ಕೆ ಏರುತ್ತ ಹೋಗುತ್ತದೆ. ಒಂದು ಗುಂಪು ಇನ್ನೊಂದು ಗುಂಪಿಗೆ ಉತ್ತರ ನೀಡುತ್ತ ಹೋಗುತ್ತವೆ. ಇವುಗಳ ಮಧ್ಯೆ ಅದೆಂತೋ ನಾ ಕಾಣೆ! ಮನುಷ್ಯರ ಹಾಗಾಡುವ ನಾಯಿಯೊಂದು ಅನೇಕ ದಿನಗಳಿಂದ ನಮ್ಮ ಮನೆಯ ಆಸುಪಾಸಿನಲ್ಲೇ ತಿರುಗಾಡುತ್ತದೆ. ಮನುಷ್ಯರ ರೀತಿಯಲ್ಲಿ ಗೊಣಗುಟ್ಟುತ್ತದೆ. ಅದು ಬೊಗಳುವುದಕ್ಕಿಂತ ರೇಗಿದಂತೆ ಗೊಣಗುವುದೇ ಹೆಚ್ಚು! ನಾನೆಷ್ಟೋ ಸಲ ಇವರೊಂದಿಗೆ "ರೀ.. ಇದಕ್ಕೆ ಕಲಿಸಿದರೆ, ನಿಜವಾಗಿ ಮಾತಾಡುವುದನ್ನು ಕಲಿತುಬಿಡುತ್ತದೆ" ಎಂದಿದ್ದೇನೆ.

ನಾನು ಒಮ್ಮೆ ಇವರೊಂದಿಗೆ ಜಗಳಮಾಡಿ ಕೋಪದಲ್ಲಿದ್ದಾಗ ಈ ನರನಾಯಿ ಏನೋ ಗೊಣಗಾಡುತ್ತ ಬೀದಿಯಲ್ಲಿ ತಿರುಗುತ್ತಿತ್ತು. "ನೋಡಿ, ನಿಮ್ಮ ತಾತನೇ ಈ ಜನ್ಮದಲ್ಲಿ ಹುಟ್ಟಿ ಬಂದಿರಬೇಕು, ಬಲು ಕಾಡಿಸುತ್ತದೆ. ಬಲು ಗೊಣಗಾಟ.. ಪಾಪ! ಅದೇನೆಂದು ಹೋಗಿ ಕೇಳಬಾರದೇ?" ಎಂದೆ. ಅದಕ್ಕೆ ಅವರು, "ಇಲ್ಲ ಇಲ್ಲ ಅದು ನಿಮ್ಮ ಅಜ್ಜಿ ಇರಬೇಕು. ಹೆಂಗಸರು ತಾನೆ ಜಾಸ್ತಿ ಗೊಣಗುಡುವುದು, ಬೇಕಾದರೆ ನಿಮ್ಮಮ್ಮನನ್ನು ಕೇಳು, ನಾನು ಹೇಳುತ್ತಿರುವುದು ನಿಜವೋ ಅಲ್ಲವೋ" ಎಂದು ತಿರುಗೇಟು ಕೊಟ್ಟರು. ನಾನು ಸಿಟ್ಟಿನಿಂದ "ಅದು ಹೆಣ್ಣೋ ಗಂಡೋ ನಿಮಗೆ ಹೇಗೆ ಗೊತ್ತು?" ಎನ್ನುತ್ತೇನೆ. "ನಿನಗೆ ಗೊತ್ತೆ?" ಎನ್ನುತ್ತಾರೆ. "ಗೊತ್ತಿಲ್ಲ" ಎನ್ನುತ್ತೇನೆ. “ಮತ್ತೆ ಸುಮ್ಮನಿರು” ಎಂದು ಸುಮ್ಮನಿರಿಸುವ ಪ್ರಯತ್ನ ಮಾಡುತ್ತಾರೆ. "ಜೀವನವೆಲ್ಲ. ನನ್ನನ್ನು ಸುಮ್ಮನಿರಿಸುವುದೇ ಆಯಿತು" ಎಂದು ಗೊಣಗುತ್ತೇನೆ. "ನೋಡು, ನೋಡು ನೀನೂ ಅದರಂತೆ ಗೊಣಗುವುದೇ ಹೆಚ್ಚು! ವಂಶಪಾರಂಪರ್ಯವಾಗಿ ಬಂದ ವಂಶವಾಹಿ ಗುಣವಲ್ಲವೇ?" ಎನ್ನುವುದೇ? ನಾನು ಇನ್ನೇನು ಸಿಡಿಯಬೇಕು, ಅಷ್ಟುಹೊತ್ತಿಗೆ ಅವರೇ "ಸದ್ಯ! ಕಾಳಿಯಾಗಬೇಡ, ತಮಾಷೆಗಂದೆ" ಎಂದು ನುಣುಚಿಕೊಳ್ಳುತ್ತಾರೆ. ಇವರು ಯಾವಾಗಲೂ ಹೀಗೇ! ಒಂದೊಂದು ಸಲ ರೇಗಿ, ಅನ್ನಬೇಕು ಅಂದುಕೊಂಡಿರುವುದನೆಲ್ಲ ಒದರಿಬಿಡಬೇಕು! ಎಂದು ನಾನು ಕ್ಲೈಮ್ಯಾಕ್ಸ್‌ಗೆ ಹೋಗುವ ಸೂಚನೆ ಕಂಡ ತಕ್ಷಣ ರಾಜಿಯಾಗಿ ಬಿಡುತ್ತಾರೆ.

ರಾತ್ರಿಯ ಈ ಗುರ್ರ್.. ಗುರ್.. ಕುಂಯ್.. ಕುಂಯ್.. ಸದ್ದಿಗೆ ಹತ್ತಿರ... ದೂರ ಎಂದು ಕಣ್ಣುಮುಚ್ಚಾಲೆಯಾಡುತ್ತಿದ್ದ ನಿದಿರಾಮಾತೆ ಕೋಪಿಸಿಕೊಂಡು ಹೊರಟೇಹೋಗುತ್ತಾಳೆ. ಈ ನಾಯಿಗಳ ತಾರಕ ಸ್ವರ ನನ್ನವರ ಕಿವಿದೆರೆಗಳನ್ನು ದಾಟಿ ಒಳಪದರಕ್ಕೆ ಸೇರಿ ಮಿದುಳಿಗೆ ಸಂದೇಶ ರವಾನೆಯಾಗಿ ನಿದ್ದೆ ಕೆಟ್ಟು ತಟ್ಟನೆ ಎದ್ದು ಬಿಡುತ್ತಾರೆ. "ಛೇ! ಏನು ನಾಯಿಗಳಪ್ಪಾ ಇವು!" ಎಂದು ಗೊಣಗಿಕೊಳ್ಳುತ್ತಾ ಎದುರಿನ ಕೋಣೆಗೆ ಹೋಗಿ ಒಂದು ಚೀಲದಲ್ಲಿ ಸಂಗ್ರಹಿಸಿ ಇಟ್ಟಿರುವ ದಪ್ಪ ದಪ್ಪ ಕಲ್ಲುಗಳನ್ನು ಕಿಟಕಿ ಮುಖಾಂತರ ಅವುಗಳ ಮೇಲೆ ಬೀಳುವಂತೆ, ಬೀಸಿ ಬೀಸಿ ಒಗೆಯುವಾಗ ಒಂದೆರೆಡಾದರೂ ತಾಕಿ, ಸೇನಾಧಿಪತಿ ಮತ್ತು ಸೈನಿಕರು ಈ ಅಗೋಚರ ಶಿಲಾವರ್ಷಕ್ಕೆ ಬೆದರಿ ಕುಯ್ಯೋ ಮರ್ರೋ ಎನ್ನುತ್ತ ಕಾಲಿಗೆ ಬುದ್ಧಿ ಹೇಳುತ್ತವೆ. ಬುದ್ಧಿವಂತ ಮನುಷ್ಯ-ನಾಯಿ ಈ ಏಟಿಗೆ ಸುತರಾಂ ಸಿಕ್ಕದೆ, ಸುರಕ್ಷಿತ ನೆಲೆಯಲ್ಲೆಲ್ಲೋ ನಿಂತು ಬೈದು ಕೊಳ್ಳುತ್ತಿರುತ್ತದೆ.

ಸ್ವಲ್ಪ ದಿನಗಳ ಹಿಂದೆ ನಾಯಿಗಳನ್ನು ಹಿಡಿದುಕೊಂಡು ಹೋಗುವ ವಾಹನದವರಿಗೆ "ಬಂದು ಇವುಗಳನ್ನು ಹಿಡಿದು, ಪ್ರಾಣಿ ದಯಾ ಸಂಘಕ್ಕೆ ಕೊಟ್ಟು ಪುಣ್ಯ ಕಟ್ಟಿಕೊಳ್ಳಿರಪ್ಪ" ಎಂದು ನಾವೇ ಫೋನು ಮಾಡಿ ಕರೆಯಿಸಿದ್ದೆವು. ಅವರು ಬಂದು ಎಲ್ಲವನ್ನೂ ಸಾರಾ ಸಗಟಾಗಿ ವ್ಯಾನಿನಲ್ಲಿ ತುಂಬಿಕೊಂಡು ಹೊರಟಾಗ ಎಲ್ಲರೂ ನಿಟ್ಟುಸಿರು ಬಿಟ್ಟೆವು.

ಆದರೆ ಕೆಲದಿನಗಳಲ್ಲೇ ಅವುಗಳನ್ನೆಲ್ಲಾ ಕರೆದುತಂದು ಇಲ್ಲೇ ಬಿಟ್ಟಾಗ ನಾವು ಅಚ್ಚರಿಯಿಂದ "ಯಾಕ್ರಯ್ಯಾ?" ಎಂದು ಕೇಳಿದ್ದೆವು. " ಹೌದು! ಇನ್ನೆಲ್ಲಿಗೆ ತೆಗೆದುಕೊಂಡು ಹೋಗುವುದು? ಅವುಗಳ ಸಂತಾನ ಬೆಳೆಯದ ಹಾಗೆ ಆಪರೇಷನ್ ಮಾಡಿ ತಂದು ಬಿಟ್ಟಿದ್ದೇವೆ" ಎಂದವರೇ ಮುಂದಿನ ಮಾತಿಗೆ ಅವಕಾಶವಿಲ್ಲದಂತೆ ವ್ಯಾನಿನಲ್ಲಿ ಹೊರಟೇ ಹೋದರು.

ಇತ್ತೀಚೆಗೆ ದುಂಡಗೆ, ಶ್ವೇತವರ್ಣದಲ್ಲಿರುವ ಹಣೆಯ ಮೇಲೆ ತಿಲಕದ ಹಾಗೆ ಕಪ್ಪುಗೆರೆ ಇರುವ ಶ್ವಾನ ಕುಲಕ್ಕೆಲ್ಲ ರಾಣಿಯಂತಿರುವ ಚೆಂದದ ಶುನಕವೊಂದು ಗೇಟಿನ ಸರಳುಗಳ ಮಧ್ಯೆ ತೂರಿ, ಒಮ್ಮೊಮ್ಮೆ ಹೇಗೋ ತೆವಳಿಕೊಂಡು ಬಂದಾದರೂ ನಮ್ಮ ಕಾರಿನ ಕೆಳಗೆ ಮಲಗುವ ಕೋಣೆ ಮಾಡಿಕೊಂಡು ಮಲಗುತ್ತಿದೆ. "ಆ ಮಲಗುವ ಕೋಣೆ ಅದರ ಟಾಯ್ಲೆಟ್ ಕೋಣೆಯಾಗದೆ ಇರಲಪ್ಪ" ಎಂದು ದೇವರನ್ನು ಬೇಡಿಕೊಂಡಾಗಿದೆ.

ನಾಯಿ ಹಿಡಿಯುವ ವಾಹನದವರನ್ನು ಕರೆಯಿಸಲು ಫೋನು ಮಾಡಿದವರು ನಮ್ಮವರೇ ಎಂದು ಹೇಗೋ ಪತ್ತೆ ಹಚ್ಚಿಬಿಟ್ಟಿವೆ ಈ ಶ್ವಾನದಳ. ಎಷ್ಟಾದರೂ ನಾಯಿ ಮೂಗಲ್ಲವೇ? ಅದಕ್ಕೆ ನಮ್ಮ ಮನೆಯ ಮೂಲೆಯನ್ನೇ ಯುದ್ಧರಂಗದ ಸ್ಥಳವಾಗಿ ಖಾಯಂ ಮಾಡಿಕೊಂಡಂತಿದೆ.

ಅವರು ಬೇರೆ ಆಗಾಗ "ಕಾರ್ನರ್ ಸೈಟ್ ಬೇಕು, ಕಾರ್ನರ್ ಸೈಟ್ ಬೇಕು ಅಂತ ಪ್ರಾಣ ತಿಂದೆ ನೋಡು, ಅನುಭವಿಸು ಈಗ" ಅನ್ನುತ್ತಿರುತ್ತಾರೆ. "ಅನುಭವಿಸುತ್ತಿದ್ದೇನೆ" ಎಂದು ನಗುತ್ತಾ ಅಳುತ್ತೇನೆ.

***

ತಾಯ್ತನದ ಸವಿ

- ಮಾಲತಿ ಶ್ರೀನಿವಾಸನ್

ಮಕ್ಕಳೊಡನಾಟದಲಿ ಹೆತ್ತವಳ ನೆನಪು,
ಎಲ್ಲರನ್ನು ಸುತ್ತಿ ಬಳಸಿ ಒಂದಾಗಿಸಿದ
ಒನಪು.
ಕರುಳ ಬಳ್ಳಿಯ ಸೆಳೆತದ
ಚಿಲುಮೆಯ ನಿರಂತರ ಹುರುಪು.

ಅದೇ ಆಟ, ಅದೇ ಪಾಠ, ಅದೇ ರಾಜ-
ರಾಣಿಯರ ಕಥೆಯ ಬೊಂಬೆಯಾಟ.
ಕೈ ತುತ್ತು ಲಾಲಿ ಹಾಡಿನ ಮತ್ತು, ಆ
ಮೆತ್ತನೆಯ ಮಡಿಲಲ್ಲಿ ನಿದ್ರೆ ನೂರಾರು
ಕನಸ ಹೊತ್ತು.

ಹಳೆ ಬೇರು ಹೊಸ ಚಿಗುರು ಮೇಳೈಸಲೆ
ಬೇಕು, ಹಳೆ ಹಾಡು ಹೊಸ ರಾಗ
ಹೊಸ ಪೀಳಿಗೆಗಾಗಿ ಹಾಡಲೇಬೇಕು
ಪ್ರತಿಹುಟ್ಟು ಸಾವಿನಲು ನಿರಂತರ ಚಲನೆ,
ಮನದಾಳದಲಿ ಸ್ವರ ರಾಗಗಳ ಚಿಂತನೆ.

ಚರಿತ್ರೆ ಮರುಕಳಿಸಿದಂತೆ, ಬಿಟ್ಟು.
ಬಿಡದಂತೆ ಇದ್ದು ಇರದಂತೆ,
ಮನದಾಳದ ಭಾವ, ಎಲ್ಲ
ಅವನಿತ್ತ ವರವೆನುತ ಪ್ರಸಾದ
ಬುದ್ಧಿಯಲಿ ಈ ಬದುಕ ಸವಿಯಲಿ
ಬೇಕು.

***

ರೇ... ರಾಜ್ಯ

- ಮಾಲತಿ ಶ್ರೀನಿವಾಸನ್

ಒಮ್ಮೆ ಗಡಿಯಾರದ ಮುಳ್ಳ
ಹಿಂದೆ ತಿರುಗಿಸಿ, ಹಿಮ್ಮುಖವಾಗಿ
ಹೆಜ್ಜೆ ಇಟ್ಟು ಸಮಯವ ಹಿಂದೆ
ಸರಿಸಲು ಸಾಧ್ಯವಾದ--ರೇ,

ಅಂದಿನ ಇಂದಿನ ಕಷ್ಟಕೋಟಲೆ,
ದುಃಖದುಮ್ಮಾನಗಳೆಲ್ಲವ ಗುಡಿಸಿ
ಭೂಗತವಾಗಿಸಿ ಮರುಕಳಿಸಿದಂತೆ
ದೂರಾಗಿಸಲು ಸಾಧ್ಯವಾದ-ರೇ

ಅರಿತು ಅರಿಯದೆಯೋ ನನ್ನಿಂದ
ನೊಂದವರ, ದೂರಾದವರ
ನೋವ ಸರಿಸಿ, ಮತ್ತೊಮ್ಮೆ
ಪ್ರೀತಿಯ ಬಾಂಧವ್ಯದ ಸೆಲೆ
ಬೆಸೆಯುವಂತಾದ-ರೇ

ಎಲ್ಲರನು ಎಲ್ಲವನೂ ಪರಕಿಸಿ
ಸರಿ ತಪ್ಪುಗಳ ದ್ವಂದ್ವದಲಿ
ಬಾಳ ದೂಡದೆ, ತನ್ನನರಿಯುವ
ನಿಟ್ಟಿನಲಿ, ಮನ ಆತ್ಮಾವಲೋಕನಕೆ
ಸಜ್ಜಾದ-ರೇ.

ಅದೆಷ್ಟು ಸೊಗಸು ಈ "ರೇ" ರಾಜ್ಯ
ಕೈಗೆಟುಕದ ದ್ರಾಕ್ಷಿ ಹುಳಿ ಎಂದು
ದೂರೀಕರಿಸದೆ, ಮನ ನೀತಿ ಪಾಠ
ಕಲಿತ ಭಾವದಲಿ ಮುನ್ನಡೆಯೆ
ಬದುಕೆಷ್ಟು ಸೊಗಸು.

***

ಹಿರೋಷಿ

– ನಾಗರತ್ನ ಚಂದ್ರಶೇಖರ್

ನಾವು ಇತ್ತೀಚೆಗೆ ಜಪಾನ್ ಪ್ರವಾಸ ಕೈಗೊಂಡಿದ್ದೆವು. ಪ್ರವಾಸಕ್ಕೆ ನಲವತ್ತು ಜನ ಕನ್ನಡಿಗರ ಗುಂಪು ಪ್ರವಾಸಿ ಕಂಪನಿಯೊಂದರ ಮುಖಾಂತರ ಹೆಸರಾಂತ" ಚೆರ್ರಿ ಬ್ಲಾಸಮ್" ನೋಡಲು ಅತ್ಯಂತ ಉತ್ಸಾಹದಿಂದ ಹೊರಟಿದ್ದೆವು. ನಮ್ಮ ಟೂರಿಸ್ಟ್ ಗೈಡ್ ಹಾಗೂ ಮ್ಯಾನೇಜರ್ ಎರಡೂ ಕೆಲಸ ಮಾಡಲು ಬಂದವ ಅಪ್ಪಟ ಜಪಾನಿ ಹಿರೋಷಿ. ಆತ



ಟೋಕಿಯೋದ 'ನಾರಿಟ' ವಿಮಾನ ನಿಲ್ದಾಣದಲ್ಲಿ ಸಂಜೆ ನಮ್ಮನ್ನು ಸ್ವಾಗತಿಸಿ ತನ್ನ ಪರಿಚಯ ಮಾಡಿಕೊಂಡು ವಿಮಾನ ನಿಲ್ದಾಣದ ಹೊರಗಡೆ ನಮ್ಮನ್ನೆಲ್ಲ ಕಾಯುತ್ತಿದ್ದ ಬಸ್‌ನತ್ತ ಕರೆದೊಯ್ದ. ಅವನು ನಮ್ಮ ಹೆಸರುಗಳನ್ನು ಸರಿಯಾಗಿ ಉಚ್ಚಾರಣೆ ಮಾಡಲು ಬಾರದೆ ತಡವರಿಸುತ್ತಿದ್ದ. ಅವನಿಗೆ ಇಂಗ್ಲೀಷ್ ಭಾಷೆ ಗೊತ್ತಿದ್ದರೂ ಸಂವಹನ ಕಲೆ ಅಭ್ಯಾಸವಿಲ್ಲದ್ದರಿಂದಾಗಿ ಅವನ ಇಂಗ್ಲಿಷ್ ಕೂಡ ನಮಗೆ ಅರ್ಥವಾಗುವುದೇ ಕಷ್ಟವಾಗಿತ್ತು. ಯಥಾಪ್ರಕಾರ ಪ್ರವಾಸಿ ಗೈಡುಗಳು ತಾವು ಲಾಂಛನವಾಗಿ ಉಪಯೋಗಿಸುವ ಬಗೆಬಗೆಯ ಗುರುತುಗಳನ್ನು ನಾವು ನೋಡಿರುತ್ತೇವೆ. ಹಿರೋಷಿಯು ತನ್ನ ಕೈಯಲ್ಲಿ ಒಂದು ಪ್ಲಾಸ್ಟಿಕ್ ದಂಡವನ್ನು ಹಿಡಿದಿದ್ದ. ಅದಕ್ಕೆ ಖಾಲಿ ನೀರಿನ ಬಾಟಲಿಯನ್ನು ಸಿಕ್ಕಿಸಿ ಅದರ ಸುತ್ತ ಗೆಜ್ಜೆಗಳನ್ನು ಕಟ್ಟಿದ್ದ. ಶಬ್ದಕ್ಕೆ ಗೆಜ್ಜೆಯಾದರೆ, ನೋಟಕ್ಕೆ ಸುಲಭವಾಗಿ ಸಿಗುವಂತೆ ದೊಡ್ಡ ದೊಡ್ಡದಾದ ಐದು ಹೂವುಗಳನ್ನು ಅದರ ಸುತ್ತ ಬಿಗಿದಿದ್ದ. ಮಾಮೂಲಿನಂತೆ ಕುತ್ತಿಗೆಯಲ್ಲಿ ನೇತುಬಿದ್ದ ಅವನದೇ ಫೋನು ಹಾಗೂ ಪರ್ಸು. ಎಡದ ಕೈಯಲ್ಲಿ ಮಾಹಿತಿ ಗಳನ್ನು ತುಂಬಿಕೊಂಡ ಒಂದು ಚೀಲ. ನಮ್ಮೆಲ್ಲರ ಪರಿಚಯದ ಹಾಜರಾತಿ ಹಾಕಲು ಸುಲಭವಾಗುವಂತೆ ಅವನದೇ ಆದ ಒಂದು ವೈಖರಿ ಇತ್ತು. ಪ್ರವಾಸಿಗಳಾಗಿ ನಾವು 18 ಜೊತೆ ದಂಪತಿಗಳಿದ್ದೆವು, ಇಬ್ಬರು ಸಿಂಗಲ್ ಸೀಟುಗಳು, ಒಬ್ಬರು ಗೈರುಹಾಜರಿ, ಒಂದು ಪುಟ್ಟ ಎರಡು ವರ್ಷದ ಮಗು ಹಾಗೂ ಒಂದು 11 ವರ್ಷದ ಹುಡುಗ. ಜೋಡಿಗೆ ಒಂದು ಹೆಸರು ಇಟ್ಟು, ಅದನ್ನು ಕರೆದಾಗ ಪ್ರತಿ ಸಾರಿ ನಾವು ಕೈ ಎತ್ತಬೇಕೆಂದು ಹೇಳಿದ್ದ. ಅದರಂತೆ ನಾವು ಆರಿಸಿಕೊಂಡ ಹೆಸರು ಕಿಮೋನೋ. ಉಳಿದವರ ಹೆಸರು ಕೂಡ ಚೆರ್ರಿ ಬ್ಲಾಸಮ್, ಸಕೂರ, ಬ್ಲೂ ಬ್ಲಾಸಮ್, ಮೋದಿ, ಫ್ಯೂಜಿ ಇತ್ಯಾದಿ.



ಜಪಾನ್ ಎಂದಕೂಡಲೇ ನಮಗೆ ನೆನಪಾಗುವುದು ಹಿರೋಷಿಮಾ ನಾಗಸಾಕಿಗಳ ಅಣು ಬಾಂಬಿನ ದುರಂತ. ಇಲ್ಲಿ ನಮ್ಮ ಗೈಡಿನ ಹೆಸರು ಕೂಡ ಹಿರೋಷಿ ಇದ್ದಿದ್ದರಿಂದ ನಾವು ಸುಲಭವಾಗಿ ಅವನ ಹೆಸರನ್ನು ಹಿರೋಷಿಮ ಮಾಡಿಕೊಂಡುಬಿಟ್ಟೆವು. ಬಸ್ಸಿನೊಳಗೆ ಕೂತುಕೊಳ್ಳ ಬೇಕಾದರೆ ದಿನವೂ ಒಬ್ಬೊಬ್ಬರಿಗೆ ಹಿಂದೆ ಮುಂದೆ ಸೀಟು. ಸೀಟುಗಳ ಬದಲಾವಣೆಗಾಗಿ ಅವನದೇ ಒಂದು ಯೋಜನೆ ಕೂಡ ಇತ್ತು. ಬಸ್ಸಿನ ಎರಡು ಬದಿಯ ಸೀಟುಗಳ ಒಂದು ನಕ್ಷೆಯನ್ನು ಮಾಡಿ, ಅದರ ಪ್ರತಿಯನ್ನು ಇಬ್ಬರಿಗೆ ಒಂದರಂತೆ ಕೊಟ್ಟಿದ್ದ. ಅದರಲ್ಲಿ ಆಯಾ ದಿನದ ಗುರುತುಗಳಂತೆ ಅವರು ಸೀಟುಗಳ ಬದಲಾವಣೆ ಮಾಡಿಕೊಂಡು ಪ್ರವಾಸದ ಕೊನೆಯ ದಿನದ ತನಕ ಕುಳಿತುಕೊಳ್ಳಬೇಕಿತ್ತು. ಈ ರೀತಿ ಮಾಡದೆ ಅಪ್ಪಿತಪ್ಪಿ ಬೇರೆಕಡೆ ಕುಳಿತುಬಿಟ್ಟರೆ ಅವನಿಗೆ ಭಯಂಕರ ಬೇಸರ ಹಾಗೂ ಪೇಚಾಟ ಶುರುವಾಗುತ್ತಿತ್ತು. ನಾವು ಅಶಿಸ್ತಿನಿಂದ ವರ್ತಿಸಬಾರದೆಂದು ಪದೇ ಪದೇ ಬೇಡಿಕೊಳ್ಳುತ್ತಿದ್ದ. ಅವನದೇ ಇಂಗ್ಲೀಷ್ ಉಪಯೋಗಿಸಿ ಪ್ಲೀಸ್ ಪ್ಲೀಸ್ ಅಂತ ಗೋಗರೆಯುತ್ತಿದ್ದ. ಜಪಾನೀಯರು ಮೃದು ಭಾಷಿಗಳು. ಅತ್ಯಂತ ನಮ್ರತೆಯಿಂದ ನಡು ಬಗ್ಗಿಸಿ ನಮಸ್ಕರಿಸುತ್ತಾರೆ ಕೂಡ. ಬಸ್ಸು ಚಲಿಸುವಾಗ ನಿಲ್ಲುವುದು, ಓಡಾಡುವುದು, ಜೋರಾಗಿ ಮಾತನಾಡುವುದು ಇವೆಲ್ಲಾ ನಿಶಿದ್ಧ. ಆದರೆ ನಾವು ಎಲ್ಲರೂ ಸೇರಿ ಒಂದೇ ಸಮನೆ ಮಾತನಾಡಿದ್ದು ಆಡಿದ್ದೆ ಮೈಕು ಹಿಡಿದು ಅವನು ಏನಾದರೂ ಹೇಳುತ್ತಿದ್ದರೆ ಮೊದಲೇ ಅವನ ಅರ್ಥವಾಗದ ಇಂಗ್ಲಿಷ್. ಬಸ್ಸಿನೊಳಗಿನ ಎಲ್ಲರ ಮಾತುಕತೆಯ ಗಲಾಟೆ. ಆಗಾಗ ಚಕ್ಕುಲಿ ನಿಪ್ಪಟ್ಟು ಬಿಸ್ಕೆಟ್ಟುಗಳ ವಿತರಣೆ. ನಮಗೆ ಶಿಸ್ತು ಕಲಿಸಲು ಅವನು ಮಾಡುತ್ತಿದ್ದ ಪ್ರಯತ್ನ ನೋಡಿ ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಪದೇ ಪದೇ ಅವನು ಬಸ್ಸಿನೊಳಗೆ ಕಸ ಹಾಕಬಾರದು, ರಸ್ತೆಯಲ್ಲಿ ಪೇಪರು, ಖಾಲಿ ನೀರಿನ ಬಾಟಲ್ ಎಲ್ಲೆಂದರಲ್ಲಿ ಎಸೆಯಬಾರದು ಎಂದು ಹೇಳುತ್ತಲೇ ಇರುತ್ತಿದ್ದ.

ಜಪಾನ್ ದೇಶದ ಯಾವುದೇ ಹಳ್ಳಿಗಳಲ್ಲಾಗಲಿ, ನಗರಗಳಲ್ಲಾಗಲಿ ರಸ್ತೆ ಬದಿ ಒಂದೇ ಒಂದು ಚೂರು ಕಸ ಕಡ್ಡಿಗಳಾಗಲಿ ಹಳೆಯ ಬಾಟಲುಗಳಾಗಲಿ, ಪ್ಲಾಸ್ಟಿಕ್ ಚೀಲಗಳಾಗಲಿ ಕಾಣಿಸುವುದಿಲ್ಲ ಅಷ್ಟು ಪಿಚ್ಚರ್ ಪರ್ಫೆಕ್ಟ್ ಎಂದೇ ಹೇಳಬಹುದು. ಸಾರ್ವಜನಿಕ ಶೌಚಾಲಯಗಳು ಕೂಡ ಅಷ್ಟೇ ಸ್ವಚ್ಛ ಸುಂದರ ಕೂಡ. ಜಪಾನೀಯರು ಸಮಯಪ್ರಜ್ಞೆ, ಶಿಸ್ತು, ನಿಯಮ ಪಾಲನೆಗೆ ಹೆಸರಾದವರು. ಹಿರೋಷಿಯ ಗ್ರಹಚಾರಕ್ಕೆ ಮೊದಲನೆಯ ದಿನವೇ ಪ್ರಥಮ ಚುಂಬನಂ ದಂತ ಭಗ್ನಂ ಎಂಬಂತಾಯಿತು. ನೋಕಿಯಾದ ನಗರ ವೀಕ್ಷಣೆಗಾಗಿ ನಾವು ಕಾಯುತ್ತಿದ್ದೆವು. ನಿಗದಿತ ಬಸ್ಸು ವೇಳೆ ಮೀರಿದರೂ ಬಾರದಿದ್ದಾಗ ಹಿರೋಷಿಯ ತಳಮಳ ಉದ್ವೇಗ ನೋಡಲಾಗುತ್ತಿರಲಿಲ್ಲ. ಗಂಟೆ ಮೀರಿದರೂ ಬಸ್ಸು ಬಾರದಿದ್ದಾಗ ಗುಂಪಿನ ಎಲ್ಲರೂ ತಲೆಗೊಂದರಂತೆ ಮಾತನಾಡತೊಡಗಿದ್ದರು. ಕೊನೆಗೆ ಅವನು ಬೇರೆ ಉಪಾಯ ಕಾಣದೆ ಎರಡು ವ್ಯಾನುಗಳನ್ನು ಬುಕ್ ಮಾಡಿದ. ಅದರಲ್ಲಿ ನಮ್ಮನ್ನು ತುರುಕಿಸಿ ಆ ದಿನದ ಕಾರ್ಯಕ್ರಮವನ್ನು ಹಾಗೂ ಹೀಗೂ ಮುಗಿಸಿದಾಗ ಒಂದು ದೊಡ್ಡ ತಲೆಭಾರ ಇಳಿದಂತಾಗಿತ್ತು ಅವನಿಗೆ. ಮರುದಿನವೂ ಕೂಡ ಬಸ್ಸು ಅರ್ಧಗಂಟೆ ತಡವಾಗಿಯೇ ಬಂದಿತು. ಎಲ್ಲರೂ ನಮ್ಮ ನಮ್ಮ ಜಾಗದಲ್ಲಿ ಕೂತಿದ್ದು ಆಯಿತು. ಹಿರೋಷಿಯ ಕ್ಷಮಾ ಯಾಚನೆ ಪ್ರಾರಂಭವಾಗಿದ್ದು ಆಗ. ಹತ್ತು ನಿಮಿಷವಾದರೂ ಅವನು ಸಾರಿ, ಸಾರಿ ಎಂದೆ ಕೇಳುತ್ತಲೇ ಇದ್ದ. ಕೊನೆಗೆ

ಎರಡು ಕೈ ಮುಚ್ಚಿ ಮೆಲ್ಲಗೆ ಅಳಲು ಶುರುಮಾಡಿಬಿಟ್ಟ. ಹಿಂದಿನ ದಿನ ಬಸ್ಸು ಬಾರದಿದ್ದುದರಿಂದ ಆದ ಅನಾನುಕೂಲ ದಿಂದಾಗಿ ಅವನಿಗೆ ತುಂಬಾ ನಾಚಿಕೆ, ಅವಮಾನ ಆಗಿರಬೇಕು. ನಾವೆಲ್ಲ ಸೇರಿ ಸಮಾಧಾನ ಮಾಡಿದ ಮೇಲೆ ಕೊನೆಗೂ ಅವನ ಮುಖದಲ್ಲಿ ಸ್ವಲ್ಪ ನಗು ಮೂಡಿತ್ತು.

ಜಪಾನಿಯರು ತಮ್ಮ ಕಾರ್ಯಕ್ಷಮತೆಗೆ ಲೋಪವಾದರೆ ಅದೆಷ್ಟು ನೋಯುತ್ತಾರೆ ಎಂಬುದಕ್ಕೆ ಅಂದು ಹಿರೋಷಿಯೇ ಸಾಕ್ಷಿಯಾಗಿದ್ದ ನಮಗೂ ಪಾಪ ಅನಿಸಿತ್ತು ಅವನನ್ನು ನೋಡಿ. ಅವನನ್ನು ಹೇಗಾದರೂ ಮಾಡಿ ಸಮಾಧಾನ ಪಡಿಸಲು, ನಗಿಸಲು ನಾವೆಲ್ಲ ಏನೇನೋ ತಮಾಷೆ ಮಾಡಿದೆವು. 50 ದಾಟಿದ್ದರೂ ಇನ್ನೂ ಬ್ರಹ್ಮಚಾರಿಯಾಗಿದ್ದನೆಂದು ತಿಳಿದಿದ್ದ ನಾವು ಅವನಿಗೆ ಭಾರತದ ಹುಡುಗಿ ಹುಡುಕುತ್ತೇವೆ ಎಂದು ನಗಿಸಿದೆವು. ಮಧ್ಯಾಹ್ನ ಹಾಗೂ ರಾತ್ರಿ ನಾವು ಭಾರತೀಯ ಹೋಟೆಲ್‌ಗಳಿಗೆ ಊಟಕ್ಕೆ ಹೋದಾಗ ಅಲ್ಲಿ ಜಾಗದ ಇಕ್ಕಟ್ಟಿದ್ದರೂ ಸಮಾಧಾನದಿಂದ ನಮ್ಮನ್ನೆಲ್ಲ ಕೂಡಿಸಿ ನಮ್ಮದೆಲ್ಲ ಊಟವಾದ ನಂತರವೇ ಅವನು ಅಳಿದು ಉಳಿದದ್ದನ್ನೆಲ್ಲ ಬಳಿದುಕೊಂಡು ತನ್ನ ತಟ್ಟೆಗೆ ಹಾಕಿಕೊಂಡು ತಿನ್ನುತ್ತಿದ್ದ. ಸ್ಥಳಗಳ ವೀಕ್ಷಣೆಗೆ ಹೋದಾಗ ನಾವೆಲ್ಲಾದರೂ ತಪ್ಪಿಸಿಕೊಂಡರೆ, ನಮ್ಮನ್ನು ಹುಡುಕಿ ನಮ್ಮ ಹಿಂದೆಯೇ ಬರುತ್ತಿದ್ದ. ನಮ್ಮ ಜೊತೆ ಸಂವಹನ ಮಾಡಲಾಗದ ಅವನ ವಿಫಲತೆಯನ್ನು ಕಂಡು ಕೆಲವು ಬಾರಿ ನಮಗೆಲ್ಲ ಕೋಪವೂ ಬರುತ್ತಿತ್ತು.

ಜಪಾನ್ ಬಗ್ಗೆ ವಿವರವಾಗಿ ತಿಳಿಯಲು ನಮಗೆ ಮುಖ್ಯವಾಗಿ ಬೇಕಾಗಿದ್ದದ್ದು ಒಬ್ಬ ಸಮರ್ಥ ಗೈಡ್. ಆ ಕೊರತೆ ನಮಗೆ ಇಲ್ಲಿ ದೊಡ್ಡದಾಗಿ ಕಾಣುತ್ತಿದ್ದರೂ ಹಿರೋಷಿಯ ಸರಳತೆ ಮುಗ್ಧತೆ ಕಂಡು ಅದೇನೋ ಅವನ ಬಗ್ಗೆ ಒಂದು ರೀತಿಯ ಮಮತೆ ಸ್ನೇಹ ನಮ್ಮಗರಿವಿಲ್ಲದೆ ಎಲ್ಲರಲ್ಲೂ ಬೆಳೆದುಬಿಟ್ಟಿತ್ತು. ಅವನ ಸರಳತೆ ಪ್ರಾಮಾಣಿಕತೆಯ ಒಂದು ಉದಾಹರಣೆಯು ನಮಗೆ ಕೊನೆಯ ದಿನ ಸಿಕ್ಕಿತು ಜಪಾನಿನಲ್ಲಿ ಪ್ರವಾಸಿ ಬಸ್ಸುಗಳು ರಾತ್ರಿ ಎಂಟು ಗಂಟೆಯ ನಂತರ ಕೆಲಸ ಮಾಡುವುದಿಲ್ಲ. ರಾತ್ರಿ ಒಮೆಡಾ ಸ್ಕೈ ಬಿಲ್ಡಿಂಗ್ ನೋಡಿ ವಾಪಸ್ ಹೋಟೆಲಿಗೆ ಬರುವಾಗ ರಾತ್ರಿ 9 ಆಗುತ್ತಿತ್ತು ಎಂದು ಬಸ್ಸು ವಾಪಸ್ಸು ಡಿಪೋಗೆ ಹೊರಟು ಹೋಯಿತು ನಮಗೆಲ್ಲಾ ಒಂಬತ್ತು ಟ್ಯಾಕ್ಸಿ ಮಾಡಿ ಹಿರೋಷಿ ಒಂದು ಟ್ಯಾಕ್ಸಿಯಲ್ಲಿ ನಾಲ್ಕು ಜನರಂತೆ ಕೂಡಿಸಿ, ಹೋಟೆಲಿಗೆ ಕಳುಹಿಸಿಕೊಟ್ಟ. ಹಣ ನಾವೇ ಕೊಟ್ಟಿರುವಂತೆ ಹೇಳಿ ಮರುದಿನ ಅದನ್ನು ಕೊಡುತ್ತೇನೆಂದು ಹೇಳಿದ. ಒಂದು ಟ್ಯಾಕ್ಸಿಗೆ 3,600 ಯೆನ್‌ಗಳಂತೆ ಎಲ್ಲರೂ ಕೊಟ್ಟಿದ್ದೆವು. ಮರುದಿನವೇ ನಾವು ಬೆಳಗ್ಗೆ ಆರಕ್ಕೆಲ್ಲ ಹೋಟೆಲ್ ಖಾಲಿ ಮಾಡಿ ವಾಪಸ್ಸು ಭಾರತಕ್ಕೆ ಬರಬೇಕಿತ್ತು. ಹಿರೋಷಿ ನಮ್ಮ ತಿಂಡಿಯ ಚೀಲ ಹಿಡಿದು ಪ್ರತಿಯೊಬ್ಬರ ಹೋಟೆಲ್ ರೂಮಿಗೂ ಬೆಳಗಿನ ಜಾವ ಐದು ಗಂಟೆಗೇ ಬಂದು ಕೊಟ್ಟು, ನಮಗೆ ಕೊಡಬೇಕಾಗಿದ್ದ ಟ್ಯಾಕ್ಸಿ ಹಣವನ್ನು ವಾಪಸ್ಸು ಕೊಟ್ಟ. ವಿಮಾನ ನಿಲ್ದಾಣದ ಒಳಗೂ ಬಂದು ಪ್ರತಿಯೊಬ್ಬರ ಕೈ ಕುಲುಕಿ ಶುಭ ಹಾರೈಸಿದಾಗ ಅವನ ಕಣ್ಣಂಚಿನಲ್ಲಿ ನೀರನ್ನು ಕಂಡಂತಾಯಿತು. ನಾವೆಲ್ಲಾ ಸೇರಿ ಸ್ವಲ್ಪ ಹಣ ಸಂಗ್ರಹಿಸಿ ಅವನಿಗೆ ಮತ್ತು ಬಸ್ ಚಾಲಕನಿಗೆ ಉಡುಗೊರೆ ನೀಡಿದೆವು. ಹಿರೋಷಿ ಅಂತ ಒಬ್ಬ ಸರಳ ಮುಗ್ಧ ಸ್ನೇಹಮಯ ವ್ಯಕ್ತಿಯ ಪರಿಚಯ ಪರೋಕ್ಷವಾಗಿ ಜಪಾನ್ ದೇಶದ ಜನರನ್ನು ಪ್ರತಿನಿಧಿಸಿದಂತೆನಿಸಿತು ನನಗೆ.

***

ದೇವಾಲಯ ಪ್ರವಾಸೋದ್ಯಮ
ದೇಶದ ಆರ್ಥಿಕತೆಗೆ ಒಂದು ದಿಕ್ಸೂಚಿ

– ಜಿ.ವಿ. ಅರುಣ

ಈಚೆಗೆ ವಾರಣಾಸಿಗೆ ಭೇಟಿ ನೀಡಿ ಬಂದಾಗ ವಿಮಾನದಲ್ಲಿ ನಮ್ಮ ರಾಜ್ಯದ ಅನೇಕ ಸಹ ಪ್ರಯಾಣಿಕರನ್ನು ಕಂಡು ಮನದಲ್ಲೇ ಒಂದು ರೀತಿಯ ಧನ್ಯತಾಭಾವ ಉಂಟಾಗಿತ್ತು. ಅವರು ದೂರ ಪ್ರಯಾಣವನ್ನೇ ಮಾಡಿರದ, ಕರ್ನಾಟಕದ ಚಿಕ್ಕ ಊರಿನ, ಕೃಷಿಕ ಕುಟುಂಬದ ಹಿರಿಯ ಹೆಂಗಸರು ಮತ್ತು ಗಂಡಸರು. ವಿಮಾನದಲ್ಲಿ ವಾರಣಾಸಿಗೆ ಬಂದು, ಪ್ರಯಾಗ್‌ರಾಜ್, ಅಯೋಧ್ಯೆಗಳನ್ನು ನೋಡಿಕೊಂಡು ಹಿಂದಿರುಗುತ್ತಿರುವರೆಂದು ಅವರ ಮಾತಿನಿಂದ ನನಗೆ ತಿಳಿದುಬಂದಿತು.

ವಾರಣಾಸಿಯಿಂದ ಬೆಂಗಳೂರಿಗೆ ಮಧ್ಯಾಹ್ನ ಹೊರಡಬೇಕಾಗಿದ್ದ ವಿಮಾನವು ಸುಮಾರು ಎರಡು ಘಂಟೆಗಳ ತಡವಾಗಿತ್ತು. ಹಾಗಾಗಿ ಕಾಯುತ್ತ ಕುಳಿತಿದ್ದಾಗ ತಡವಾಗಿ ಬಂದ ಈ ಕರ್ನಾಟಕದ ಮೂವತ್ತೈದು–ನಲವತ್ತು ಗ್ರಾಮೀಣ ಜನರ ಗುಂಪಿಗೆ ಕುಳಿತುಕೊಳ್ಳಲು ಕುರ್ಚಿಗಳಲ್ಲಿ ಸ್ಥಳ ಇರಲಿಲ್ಲ. ಹಾಗಾಗಿ ಅವರು ಆರಾಮವಾಗಿ ಕುರ್ಚಿಗಳ ಹಿಂದೆ ಇದ್ದ ಸ್ಥಳದಲ್ಲಿ ನೆಲದ ಮೇಲೆಯೇ ಕುಳಿತುಬಿಟ್ಟರು. ಅನಂತರ ತಮ್ಮ ಪ್ರಯಾಣದ ವಿಶೇಷತೆಗಳನ್ನು ತಮ್ಮ ತಮ್ಮೊಳಗೆ ಮಾತನಾಡತೊಡಗಿದರು.

ಅವರ ಹಿಂದೆ ಕುರ್ಚಿಯಲ್ಲಿ ಕುಳಿತಿದ್ದ ನನಗೆ ಅವರು ಪರಸ್ಪರ ಆಡುತ್ತಿದ್ದ ಕನ್ನಡದ ಗ್ರಾಮೀಣ ಸೊಗಡಿನ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. ಒಬ್ಬಳು ತನ್ನ ಖಾಯಂ ಗಟ್ಟಿ ಸ್ವರದಲ್ಲಿ ಸುತ್ತ ಕುಳಿತವರಿಗೆ ಹೇಳಿದಳು– "ನಾನು ಯಾವಾಗ್ಲೋ ಚಿಕ್ಕೋಳಿದ್ದಾಗ ಒಂದು ಕಿತ ರೈಲಲ್ಲಿ ಹೋಗಿದ್ದೆ, ಅಷ್ಟೇಯಾ! ಆಗ ಮೈಸೂರಲ್ಲಿ ಚಾಮುಂಡಿ ಬೆಟ್ಟ, ಕನ್ನಂಬಾಡಿ ಕಟ್ಟೆ ನೋಡಿದ್ದು ಗ್ನೆಪ್ತಿಲಿ ಐತೆ. ಆಮ್ಯಾಕೆ, ಊರ ಸುತ್ತಮುತ್ತ ಜಾತ್ರೆ ರಥೋತ್ಸವಕ್ಕೆ ಬಸ್ನಲ್ಲಿ ಹೋಗಿದ್ದೆ. ಏರೋಪ್ಲೇನ್ ಹತ್ತಿ ಕಾಶಿ ವಿಶ್ವೇಶ್ವರ, ವಿಶಾಲಾಕ್ಷಿ, ಅನ್ನಪೂರ್ಣೇಶ್ವರಿನ, ಅಯೋಧ್ಯೆಲಿ ರಾಮನ್ನ ನೋಡ್ತೀನಿ, ಗಂಗೇಲಿ ಸ್ನಾನ ಮಾಡ್ತೀನಿ ಅಂತ ಕನಸಲ್ಲೂ ಕಂಡಿರಲಿಲ್ಲ. ಅವನು ಮನಸ್ಸು ಮಾಡಿ ಕರೆಸಿಕೊಂಡುಬಿಟ್ಟ. ಹುಟ್ಟಿದ್ದು ಸಾರ್ಥಕ ಆಯ್ತು. ಯಾವ ಜನ್ಮದ ಪುಣ್ಯವೋ!" ಅವರ ಈ ಮಾತುಕತೆಗಳಲ್ಲಿ ಅಸಾಧ್ಯವೆನಿಸಿದ್ದನ್ನು ಸಾಧಿಸಿದ ಹೆಮ್ಮೆ ಎದ್ದು ಕಾಣುತ್ತಿತ್ತು. ಅನಂತರ ಅವರಾಡಿದ ಮಾತುಗಳಲ್ಲಿ ಗುಟ್ಟೊಂದು ಹೊರಬಿತ್ತು.

"ಹೌದಮ್ಮಣ್ಣಿ, ನಮ್ಮ ಗಂಡಸರಿಗೂ ದೇವರು ಒಳ್ಳೆ ಬುದ್ಧಿ ಕೊಟ್ಟ. ಅವರಿಗೆ ಈ ಯಾತ್ರೆಗೆ ಒಂದಷ್ಟು ಗಂಟು ಬಿಚ್ಚೊ ಬುದ್ಧಿ ಬಂತಲ್ಲ. ಅದಕ್ಕೆ 'ಅವನಿಗೆ' ಎಷ್ಟು ನಮಸ್ಕಾರ ಮಾಡಿದರೂ ಸಾಲದು."

"ಹೌದು, ನಾವು ಇಷ್ಟು ವರ್ಷ ಮಕ್ಕಳು ಮರಿಗೆ ಅಂತ ದುಡಿದು ಕೂಡಿಡ್ತಿದ್ವಿ. ಈಗ ಹೀಗೆ ಅನುಕೂಲವಾಗಿ ಯಾತ್ರೆಗೆ ಬಂದು ಪುಣ್ಯ ಸಂಪಾದಿಸೊಕ್ಕೆ ನಮ್ಮ ಮೇಲೆ ಖರ್ಚು ಮಾಡಿಕೊಂಡ್ರೆ ಏನು ತಪ್ಪಿಲ್ಲ ಬಿಡು!"

"ಊರಿಗೆ ಹೋದಮೇಲೆ, ಮಾದೇವಿಗೆ ಹೇಳಬೇಕು. ಮಗ ಸೊಸೆಯರಿಗೆ ಶೋಕಿ ಮಾಡಿಕೊಂಡು ತಿರುಗೊಕ್ಕೆ ಕೊಡೋ ದುಡ್ಡಲ್ಲಿ ಒಂದು ಕಿತಾ ಈ ಯಾತ್ರೆ ಮಾಡಿ ನಿನ್ನ ಮೇಲೆ ಖರ್ಚು ಮಾಡಿಕೋ. ಪುಣ್ಯ ಬರುತ್ತೆ ಅಂತ"

"ಏ_, ಈಗಲೇ ನಮ್ಮ ಜೊತೆ ಬಾ ಅಂದೆ. ಅವಳು ಬಂದಾಳಾ?"

"ಹಣೆಬರಹ ಅನ್ನೋದು ಇದಿಕ್ಕೆ. ಊರಿಗೆ ಹೋದ ಮೇಲೆ ನೀನೂ ಹೇಳು, ನಾನೂ ಹೇಳ್ತೇನಿ..."

ಸ್ವಲ್ಪ ವಯಸ್ಸಾದ ಹೆಂಗಸರ ಕತ್ತಿನಲ್ಲಿ ನಮ್ಮ ಐಟಿ ಹೈಕಳುಗಳು ತಗಲಿ ಹಾಕಿಕೊಂಡಿರುವಂತೆ ಒಂದು ಐಡಿ ಕಾರ್ಡ್ ಇತ್ತು. ಅದರಲ್ಲಿ ಈ ಯಾತ್ರೆಯನ್ನು ಏರ್ಪಡಿಸಿದ್ದ ಸಂಸ್ಥೆಯ ಮುದ್ರಿತ ಹೆಸರಿನ ಕೆಳಗೆ ಪ್ರಯಾಣಿಕರ ಹೆಸರು, ವಿಳಾಸ ಹಾಗೂ ಸಂಪರ್ಕಕ್ಕೆ ಎರಡು ಮೊಬೈಲ್ ಸಂಖ್ಯೆಗಳು ಇದ್ದವು. ದಟ್ಟಿ ಪಂಚೆಯನ್ನು ಉಟ್ಟಿದ ಹಲವು ಗಂಡಸರ ಶರ್ಟಿನ ಜೇಬಿನಲ್ಲಿ ಐಡಿ ಕಾರ್ಡ್ ಇಟ್ಟುಕೊಂಡಿರುವುದು ಕತ್ತಿನ ಸುತ್ತ ಇದ್ದ ಪಟ್ಟಿಯಿಂದ ಸ್ಪಷ್ಟವಾಗುತ್ತಿತ್ತು.

ನಾನು ಹಿಂದೆ ವಿಮಾನ ನಿಲ್ದಾಣಗಳಲ್ಲಿ ಇದುವರೆಗೆ ಎಂದೂ ಕಂಡಿರದಿದ್ದ ಹಲವು ದೃಶ್ಯಗಳು ಈ ಬಾರಿ ನನ್ನ ಕಣ್ಣಿಗೆ ಬಿದ್ದವು. ಸ್ವಲ್ಪ ಸಮಯದ ಅನಂತರ ಅವರೆಲ್ಲರೂ ತಮ್ಮ ಕೈಚೀಲಗಳಿಂದ ಅಲ್ಯೂಮಿನಿಯಮ್ ರೇಕಿನ ಪೊಟ್ಟಣಗಳಲ್ಲಿ ರಬ್ಬರ್ ಬ್ಯಾಂಡ್‌ನಿಂದ ಕಟ್ಟಿಕೊಟ್ಟಿದ್ದ ಚಿತ್ರಾನ್ನ, ಮೊಸರನ್ನಗಳನ್ನು ಹೊರಗೆ ತೆಗೆದು ಕುಳಿತಲ್ಲೇ ತಿಂದರು. ವಿಮಾನ ನಿಲ್ದಾಣಗಳಲ್ಲಿ ಸಿಕ್ಕುವ ತಮಗೆ ಒಗ್ಗದ, ಆಗಸದಷ್ಟು ಎತ್ತರದ ಬೆಲೆಯ ಆಹಾರದ ಬದಲು ತಮಗೆ ಹಿತವಾದ ಆಹಾರವನ್ನು ಅವರು ಸೇವಿಸಿದ್ದರಲ್ಲಿ ಏನೇನು ತಪ್ಪಿಲ್ಲ. ನಾವೇ ಹಲವು ಬಾರಿ ವಿಮಾನ ಪ್ರಯಾಣ ಮಾಡುವಾಗ ಮನೆಯಿಂದ ಚಪಾತಿ ಪಲ್ಯವನ್ನು ತೆಗೆದುಕೊಂಡು ಹೋಗುವುದಿಲ್ಲವೇ?

ಹಲವು ಗಂಡಸರು ತಮ್ಮ ಪಂಚೆಯನ್ನು ಮಂಡಿಯವರೆಗೆ ಎತ್ತಿ, ಮಡಚಿ ಓಡಾಡುತ್ತಿದ್ದರು. ಅರ್ಧ ಪ್ಯಾಂಟಿನ ಚಡ್ಡಿ ಧರಿಸಿ ಓಡಾಡುತ್ತಿದ್ದ ವಿದೇಶದಿಂದ ಬಂದ ದೇಶಿಯನೊಬ್ಬ ಅವರನ್ನು ಅಗಲಿದ ಕಣ್ಣುಗಳಿಂದ ನೋಡುತ್ತಿದ್ದ. ನನ್ನ ಕಡೆ ನೋಡಿ, 'ಇವರು ಏನು ಮಾಡ್ತಿದ್ದಾರೆ? ಇದು ಸರಿ ಇಲ್ಲ!' ಎನ್ನುವವನಂತೆ ತಲೆ ಆಡಿಸಿದ. ನಾನು ಅವನ ಚಡ್ಡಿಯ ಕಡೆ ದೃಷ್ಟಿ ಹರಿಸಿ, 'ನೀನು ಹಾಕಿಕೊಂಡಿರುವುದೇನು?' ಎನ್ನುವಂತೆ ಕಣ್ಣಲ್ಲೇ ಆ ಚಡ್ಡಿಚಿಕ್ಕನನ್ನು ಕೇಳಿದೆ. ಅವನು ತನ್ನ ಮಂಡಿಯ ಕೆಳಗೆ ಬೆತ್ತಲಾಗಿರುವ ಕಾಲುಗಳನ್ನು ನೋಡಿಕೊಂಡು, ಅಲ್ಲಿಂದ ತಕ್ಷಣ ಜಾಗ ಖಾಲಿ ಮಾಡಿದ. ಇವರಿಬ್ಬರ ಮಧ್ಯೆ ನನಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ. ಒಂದು ಅಪ್ಪಟ ದೇಶೀಯ ಸಂಸ್ಕೃತಿಯ ಉಡುಪು; ಮತ್ತೊಂದು ಆಮದು ಮಾಡಿಕೊಂಡ ವಿದೇಶಿ ಉಡುಪು. ಅಷ್ಟೇ.

ರೈಲು, ಬಸ್ ನಿಲ್ದಾಣಗಳಲ್ಲಿ, ಭುಜದ ಅಥವಾ ತಲೆಯ ಮೇಲೆ ಹಿಡಿಕೆ ಕಿತ್ತ ಕೈಚೀಲವನ್ನು ಹೊತ್ತು ನಡೆಯುವ ಜನರು ಸಾಮಾನ್ಯವಾಗಿ ಕಾಣಸಿಗುತ್ತಾರೆ. ಇಲ್ಲೂ ವಿಮಾನದ ಒಳಗೆ ಹೋಗುವಾಗ ಅಂಥವರು ಕಂಡುಬಂದರು. ಇದು ಅವರ ತಪ್ಪಲ್ಲ. ಕೈಚೀಲವನ್ನು ಉತ್ಪಾದನೆ ಮಾಡುವ ಸಂಸ್ಥೆಯು ಉತ್ತಮ ಗುಣಮಟ್ಟದ ಉತ್ಪನ್ನವನ್ನು ನೀಡಿದರೆ ಈ ಸಮಸ್ಯೆ ತಾನಾಗಿಯೇ ಪರಿಹಾರವಾಗುತ್ತದೆ. ಆ ಚೀಲವು ಭರಿಸಬಹುದಾದಷ್ಟು ಭಾರವನ್ನು ಎತ್ತಲು ಆದರೆ ಹಿಡಿಕೆಗೆ ಬೇಕಾದದ್ದು ಅದರ ಕೊನೆಗೆ ಒಂದು ಪಟ್ಟಿ ಇಟ್ಟು ಮಧ್ಯದಲ್ಲಿ X ಆಕಾರದ ಹೊಲಿಗೆ, ಅದರ ಸುತ್ತಲು ಒಂದು ಗಟ್ಟಿಯಾದ ಹೊಲಿಗೆ ಹಾಕಿದರೆ ಅವರ ಉತ್ಪನ್ನದ, ಮೇಕ್ ಇನ್ ಇಂಡಿಯಾ ಉತ್ಪನ್ನದ ಗುಣಮಟ್ಟ ಶ್ರೇಷ್ಠವಾಗುವುದರಲ್ಲಿ ಸಂಶಯವೇ ಇಲ್ಲ.

ಇನ್ನು ವಿಮಾನವು ಇಳಿದು ರನ್‌ವೇಯಲ್ಲಿ ನಿಗದಿತ ಸ್ಥಳದಲ್ಲಿ ನಿಲ್ಲಿಸಲು ಕಾಯುತ್ತಿರುವಾಗ ಅವರಲ್ಲಿ ಹಲವರು ಕೆಳಗಿಳಿಯಲು ತಮ್ಮ ಆಸನದಿಂದ ಎದ್ದು ಬಾಗಿಲ ಕಡೆ ಹೊರಟುಬಿಟ್ಟರು. ಪ್ರಯಾಣಿಕರು ಇಳಿಯುವ ಸೂಚನೆ

ಬರುವವರೆಗೂ ಅವರು ಕುರ್ಚಿಯಲ್ಲೇ ಕುಳಿತಿರಬೇಕು ಎಂಬ ಅರಿವು ಅವರಿಗೆ ಇರಲಿಲ್ಲ. ಏಕೆಂದರೆ ವಿಮಾನದೊಳಗಿನ ಘೋಷಣೆಗಳು ಅವರಿಗೆ ತಿಳಿಯುವ ಕನ್ನಡದಲ್ಲಿ ಇರಲಿಲ್ಲ. ಅವು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿದ್ದವು. ಬೆಂಗಳೂರಿನಿಂದ ವಾರಣಾಸಿಗೆ ದಿನಕ್ಕೆ ಐದು ವಿಮಾನಗಳು ತೆರಳುತ್ತವೆ. ಅಲ್ಲಿಂದ ಐದು ವಿಮಾನಗಳು ಹಿಂದಿರುಗುತ್ತವೆ. ಇದರಲ್ಲಿ ಪ್ರಯಾಣ ಮಾಡುವ ರೈತಾಪಿ ಜನರ ಅನುಕೂಲಕ್ಕೆ ಕನ್ನಡದಲ್ಲಿ ಘೋಷಣೆ ಮಾಡುವುದು ಅತ್ಯವಶ್ಯಕ. ವಿಮಾನಯಾನ ಸಂಸ್ಥೆಗಳು ಇದರತ್ತ ತಕ್ಷಣ ಗಮನ ಹರಿಸಬೇಕು.

ಆ ಗ್ರಾಮೀಣ ಪ್ರದೇಶದ ಜನರನ್ನು ವಾರಣಾಸಿ, ಅಯೋಧ್ಯೆಯ ದೇವಾಲಯ ದರ್ಶನಕ್ಕೆ ವಿಮಾನದಲ್ಲಿ ಕರೆದುಕೊಂಡು ಹೋಗುವ ಯೋಜನೆ ಮಾಡಿದ ಸಂಸ್ಥೆಯನ್ನು ನಾವು ಮೆಚ್ಚಲೇಬೇಕು. ಇದುವರೆಗೆ ಯಾರೂ ಯೋಚಿಸಿರದ ಇಂಥ ಒಂದು ಪ್ರಯಾಣಿಕರ ಅಸ್ತಿತ್ವವನ್ನು ಗುರುತಿಸಿ, ಅದನ್ನು ಸಂಭಾವ್ಯ ವ್ಯವಹಾರದ ಮಾದರಿಯನ್ನಾಗಿಸಿಕೊಂಡ ಅವರ ವ್ಯವಹಾರಶೀಲತೆ ನಿಜಕ್ಕೂ ಶ್ಲಾಘನೀಯ; ಅನುಕರಣೀಯ. ಎರಡು ಮೂರು ತಿಂಗಳುಗಳ ಮೊದಲೇ ವಿಮಾನದಲ್ಲಿ ಸ್ಥಳವನ್ನು ಕಾದಿರಿಸುವುದರಿಂದ ಅತ್ಯಂತ ಕಡಿಮೆ ಬೆಲೆಗೆ ವಿಮಾನದ ಟಿಕೆಟ್‌ಗಳು ಲಭ್ಯವಾಗುತ್ತವೆ. ಅದರ ಉಪಯೋಗವನ್ನು ಪಡೆದುಕೊಂಡು, ಜೊತೆಗೆ ಗುಂಪಿನಲ್ಲಿ ವಿಮಾನದ ಸ್ಥಳಗಳನ್ನು ಕಾದಿರಿಸುವ ಸಂಖ್ಯೆಗೆ ಅನುಗುಣವಾಗಿ ಅವರು ಮತ್ತಷ್ಟು ರಿಯಾಯಿತಿಯನ್ನು ಪಡೆಯಬಹುದು. ಜನರು ಕೂಡ ವಿಮಾನ ಪ್ರಯಾಣವು ತಮ್ಮ ಆರ್ಥಿಕ ಸ್ಥಿತಿಗೆ ಎಟುಕುತ್ತಿದೆ ಎಂಬುದನ್ನು ಮನಗಾಣುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ. ಇಂಥ ಜನರಿಗೆ, ಹೀಗೆ ಪ್ರವಾಸವನ್ನು ಏರ್ಪಾಡು ಮಾಡಿ ಸರ್ಕಾರದ ವತಿಯಿಂದ ದೊರಕುವ ಸಹಾಯ ಧನವನ್ನೂ ಕೊಡಿಸಿ, ತಾವು ಒಂದು ಲಾಭದಾಯಕ ಉದ್ಯಮವನ್ನು ನಡೆಸಬಹುದು ಎನ್ನುವ ವ್ಯವಹಾರಶೀಲತೆ ದೇಶದ ಆರ್ಥಿಕತೆಯ ದಿಕ್ಸೂಚಿಯಲ್ಲವೇ? ಗ್ರಾಮೀಣ ಪ್ರದೇಶದ ಜನರು ತಮ್ಮ ಪ್ರವಾಸ ಸುಖಕರವಾಗಿದ್ದು, ನೋಡಬೇಕಾದ ಸ್ಥಳಗಳನ್ನೆಲ್ಲ ನೋಡಿ ಸಂತೋಷಪಟ್ಟರೆ, ಅವರು ಇತರರಿಗೆ ಹೇಳುತ್ತಾರೆ. ಅದು ಒಂದು ಒಳ್ಳೆಯ ಜಾಹೀರಾತಾಗುತ್ತದೆ.

ಇದೊಂದು ಅತ್ಯುತ್ತಮ ಬೆಳವಣಿಗೆ. ಇದರ ಫಲಶ್ರುತಿ ಏನೆಂದರೆ:

1. ದೇವಾಲಯ ಪ್ರವಾಸೋದ್ಯಮವು ದೇಶದಲ್ಲಿ ಹೊಸ ಸಾಧ್ಯತೆಗಳಿಗೆ ಅನುವು ಮಾಡಿಕೊಟ್ಟಿದೆ.
2. ಗ್ರಾಮೀಣ ಪ್ರದೇಶದಲ್ಲಿ ದೇವಾಲಯ ಪ್ರವಾಸೋದ್ಯಮವು ಹೊಸ ವ್ಯಾಪಾರ ವ್ಯವಹಾರಗಳನ್ನು ಸಾಧ್ಯಮಾಡಿದೆ.
3. ಗ್ರಾಮೀಣಪ್ರದೇಶದ ಜನರು ದೇವಾಲಯ ಪ್ರವಾಸೋದ್ಯಮದ ಭಾಗವಾಗುತ್ತಿದ್ದಾರೆ. .
4. ಈ ಜನರು ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಅಂತರರಾಷ್ಟ್ರಿಯ ಪ್ರವಾಸೋದ್ಯಮವು ಆಕರ್ಷಿತವಾಗುತ್ತದೆ.
5. ಇದಕ್ಕೆ ನಮ್ಮ ರಾಜ್ಯವು ಸೂಕ್ತ ಕ್ರಮಗಳನ್ನು ಕೈಗೊಂಡರೆ, ನಮ್ಮ ರಾಜ್ಯದಲ್ಲೂ ಹೊರರಾಜ್ಯಗಳ ಹಾಗೂ ಅಂತರರಾಷ್ಟ್ರಿಯ ಪ್ರವಾಸಿಗರಿಗಾಗಿ ಅನೇಕ ಸ್ಥಳಗಳನ್ನು ಮೇಲ್ಮಟ್ಟಕ್ಕೆ ಏರಿಸಬಹುದು. ಆಗ ನಮ್ಮಲ್ಲೂ ದೇವಾಲಯ ಪ್ರವಾಸೋದ್ಯಮವು ಆರ್ಥಿಕತೆಗೆ ತನ್ನ ಕೊಡುಗೆಯನ್ನು ನೀಡುತ್ತದೆ.

***

ಹದಿನೆಂಟನೇ ಲೋಕ

– ಜಿ.ವಿ.ನಿರ್ಮಲ

‘ಒಂದು, ಎರಡು ಉಂ,.. .. ಹತ್ತು, ಉಂ,.. ಹದಿನೇಳು, ಅಬ್ಬಬ್ಬಾ! ಹದಿನೇಳು ಲೋಕಗಳನ್ನು ಕಂಡಿದ್ದೀವಲ್ವಾ. ನಿಜಕ್ಕೂ ನಾವೇ ಅದೃಷ್ಟವಂತ್ರು’ ಎಂದು ಹನ್ನೆರಡು ಜ್ಯೋತಿರ್ಲಿಂಗಗಳನ್ನೂ ಒಟ್ಟಿಗೆ ನೋಡಿ ಧನ್ಯಳಾದಂತೆ ಉಸಿರೆಳೆದುಕೊಂಡಳು ಸ್ವರ್ಣಗೌರಿ.

ಅಷ್ಟರಲ್ಲಿ ಬಂದ ಪತಿ ಪರಮಶಿವ ‘ಏನು ಮಾತೇ ಸ್ವರ್ಣ? ಕೈಲಾಸವಾಸಿ ಪರಮೇಶ್ವರನೇ ಹದಿನಾಲ್ಕು ಲೋಕಗಳನ್ನ ಕಂಡ ಅಂತ ಸ್ವಾಮಿಗಳು ಕಥೇಲಿ ಹೇಳಿದ್ರು. ನೀನು ನೋಡಿದ್ರೆ ಹದಿನೇಳು ಲೋಕಗಳನ್ನು ಸುತ್ತಿ ಬಂದ್ಹಂಗೆ ಉಸಿರು ಎಳ್ಕೋತಾ ಇದೀಯಾ? ಅದ್ಹೇಗೇ ಸಾಧ್ಯ? ನೀನು ಹದಿನೇಳು ಲೋಕಗಳನ್ನ ಖಂಡಿತ ನೋಡಿದೀಯಾ? ನಂಗೂ ಸ್ವಲ್ಪ ಅರ್ಥ ಮಾಡ್ಸು ತಾಯಿ’.

‘ಅಬ್ಬಬ್ಬಾ! ನಿಮ್ಗೆ ಸದಾಕಾಲ ಸ್ವಾಮಿಗಳದ್ದೇ ಸ್ಮರಣೆ. ಅವರು ಹೇಳಿದ್ದೇ ಸತ್ಯ, ವೇದವಾಕ್ಯ. ನಾವು ಅಂದ್ರೆ ಮಹಿಳೆಯರು ಏನೇನೋ ಯೋಚ್ನೆ ಮಾಡ್ತೀವಿ ಗೊತ್ತಾ?. ‘ಹೆಣ್ಮಕ್ಕೇ ಸ್ಟಾಂಗು ಗುರು’ ಅನ್ನೋ ಮಾತು ಕೇಳಿಲ್ವಾ? ಭಾರತದ ‘ರೋವರ್’ ಚಂದ್ರನ ಮಡಿಲು ಸೇರಕ್ಕೂ ಹೆಣ್ಮಕ್ಳು ಹಿಂದೆ ನಿಂತು ನೂಕಿದ್ದೇ ಕಾರಣ ಅಂತ ಹೇಳ್ತಾರೆ ಗೊತ್ತಾ? ನಾನು ಹೇಳಿದ್ದು.. ಈಗ ಹದಿನೆಂಟನೆಯ ಲೋಕಸಭೆಗೆ ಚುನಾವಣೆ ಆಗ್ತಾ ಇದೆ. ಅಂದ್ರೆ ಭಾರತೀಯರು ಸ್ವಾತಂತ್ರ್ಯ ಬಂದಾಗ್ಲಿಂದ ಹದಿನೇಳು ಲೋಕಗಳನ್ನು ಅಂದ್ರೆ ಹದಿನೇಳು ಲೋಕಸಭೆಗಳನ್ನು ಕಂಡಿದ್ದಾರೆ ಅಂತ. ಸರಿ ತಾನೇ?’

‘ಓ ಹಾಗಾ? ನಿಜವಾದ ಮಾತು, ಒಪ್ಕೋಬೇಕಾದ ವಿಷ್ಯವೇ. ಲೋಕ ಸಮರ, ಲೋಕ ಸಮರದಲ್ಲಿ ಯಾವ ಪಕ್ಷಕ್ಕೆ ಜಯ. ಹಾಗೆ, ಹೀಗೆ ಅಂತ ಸುದ್ದಿಗಳಲ್ಲಿ ಹೇಳ್ತಾನೇ ಇರ್ತಾರೆ. ಆದ್ರೆ ಇಷ್ಟರಮಟ್ಟಿಗೆ ನೀನು ಅದ್ರಲ್ಲಿ ಮುಳುಗ್ಹೋಗಿರ್ತಿ ಅಂತ ನನ್ನ ಚುರುಕು ಬುದ್ಧಿಗೂ ಹೊಳೀಲಿಲ್ವಲ್ಲೆ ಸ್ವರ್ಣ!’

‘ಹೌದೌದು? ನಂಗೂ ಮತ ಚಲಾಯ್ಸೋ ಹಕ್ಕಿದೆ. ಅದಕ್ಕೇ ಇವೆಲ್ಲಾ ನಾನೂ ತಿಳ್ಕೊಳ್ತಾ ಇದೀನಿ. ಗೊತ್ತಾ_?’ ಎಂದು ಭೈರವಿ ರಾಗದಲ್ಲಿ ಜಬರ್ದಸ್ತ್ ಸಂಗತಿಯನ್ನೇ ಹಾಡಿದಳು ಸ್ವರ್ಣ.

‘ಓಟು ನಮ್ಮೆಲ್ಲರ ಹಕ್ಕು. ಖಂಡಿತ ಓಟು ಕೊಡು ತಾಯಿ. ಆದ್ರೆ, ನಿನ್ನ ಓಟು ಯಾರಿಗೆ? 'ಶಾಂತಂ ಪಾಪಂ' ಅದು ಗುಪ್ತ್, ಗುಪ್ತ್ ಅಲ್ವಾ? ನಾನು ಕೇಳ್ಲೂ ಬಾರ್ದು; ನೀನು ಹೇಳೋಹಾಂಗೂ ಇಲ್ಲ. ಆದ್ರೆ, ನಿನ್ನ ಓಟು ಸೈಕಲ್ಲಿಗೋ? ಟ್ರಾಕ್ಟರ್‌ಗೋ? ಸೀರೆಗೋ? ಕುಕ್ಕರ್‌ಗೋ? ಟೀವಿಗೋ? ಮತ್ತ್ಯಾವುದಕ್ಕೋ ಎಂದು ಕೇಳ್ಬಹುದು ಅಲ್ವಾ?’

‘ಆಹಾ, ನಿಮ್ಮ ಜಾಣ್ತನವೇ? ನಾನು ಹಾಗೆಲ್ಲಾ ಓಟು ಹಾಕಲ್ಲಪ್ಪ. ‘ಮತ ಪವಿತ್ರ’ ಅಂತ ಬೀದಿ ದಾಸಯ್ಯಾನೂ ಹೇಳ್ತಾನೆ. ನಿಮ್ಮ ಕಥೆ ಸ್ವಾಮಿಗ್ಳೇ ಆಗ್ಬೇಕಿಲ್ಲ. ನಾನು ಅವೆಲ್ಲಾ ತೊಗೊಳೋ ಜಾತೀನೇ? ನಿಮ್ಗೆ ನನ್ನ ಬಗ್ಗೆ ಅಷ್ಟೂ ಗೊತ್ತಿಲ್ವಾ?’

‘ರಾಮ, ರಾಮ. ನಾನು ಕೇಳಿದ್ದೂ ಹಾಗಲ್ವೇ ಅಲ್ಲ ಮಾರಾಯ್ತಿ. ಯಾವ ಗುರುತಿಗೆ ನಿನ್ನ ಮತ ಅಂತ ಕೇಳ್ದೆ ಅಷ್ಟೆ. ನೀನು ತಪ್ಪು ತಿಳ್ಕೊಂಡ್ರೆ ಅದು ನಿನ್ನ ತಪ್ಪು. ಅಂದ್ಹಾಗೆ ನೀನೇ ಸ್ವರ್ಣ ಅಲ್ವಾ? ನಿಂಗ್ಯಾಕೆ ಮತ್ತೊಬ್ಬರ ಹಂಗು?

'ನೀನ್ಯಾಕೋ ನಿನ್ನ ಹಂಗ್ಯಾಕೋ. ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ಇಷ್ಟ ದೇವರ ನಾಮ ಜಪಿಸಿ ಸಾಕು ಅಂತ ಸ್ವಾಮಿಗ್ಳು ಕಥೇಲಿ ಹೇಳಿದ್ದು ನಂಗೆ ಚೆನ್ನಾಗಿ ನೆನಪಿದೆ.'

'ನಿಮ್ಗೆ ಯಾವಾಗ್ಲೂ ಆ ಸ್ವಾಮಿಗಳ ಮಾತೇ ಕಿವೀಲಿ ಮೊಳಗ್ತಾ ಇರತ್ತೆ. ಹೋಗ್ಲಿ ಆ ನಿಮ್ಮ ಸ್ವಾಮಿಗ್ಳು ಹದಿನಾಲ್ಕು ಲೋಕಗಳ ಹೆಸರನ್ನಾದ್ರೂ ಹೇಳಿದ್ದು ನೆನಪಿದ್ಯಾ ನಿಮ್ಗೆ? ಹೇಳಿ ನೋಡೋಣ?' ಎಂದು ಸವಾಲೆಸೆದಳು.

'ಆಂ.., ಹಾಗೆಲ್ಲಾ ಎಣಿಸ್ಕೊಂಡು, 'ಬೈ ಹಾರ್ಟ್' ಮಾಡಿ, ನಾನೇನು ಪರೀಕ್ಷೆ ಪ್ಯಾಸ್ ಮಾಡ್ಬೇಕಾ? ಏನೋ, ಆರು ಲೋಕಗಳು ಮೇಲೆ, ಕೆಳಗಿರೋದು ಏಳು ಪಾತಾಳ ಲೋಕಗಳು ಅಂತ ಕೇಳಿದ ನೆನಪು. ಸರೀನಾ?'

'ಅಯ್ಯೋ, ನಿಮ್ಮ ಲೆಕ್ಕದಂತೆ ಮೇಲೆ ಆರು ಲೋಕಗಳು ಪ್ಲಸ್ ಕೆಳಗೆ ಏಳು. ಒಟ್ಟು ಹದಿಮೂರೇ ಆಯ್ತಲ್ಲಾರೀ? ಮತ್ತೊಂದು ಲೋಕ ಎಲ್ಹೋಯ್ತು?'

'ಆಂ_, ಹೌದಲ್ವಾ ಇನ್ನೊಂದು ಲೋಕ ಎಲ್ಹೋಯ್ತು? ಅದು ಯಾವ್ದು? ಎಲ್ಲಿಗ್ಹೋಯ್ತು? ದೊಡ್ಡದಾ, ಚಿಕ್ಕದಾ?' ಎಂದು ಕಕ್ಕಾಬಿಕ್ಕಿಯಾದ ಪರಮ.

'ಅಯ್ಯೋ ಬಿಡಿ. ಹಾಗ್ಯಾಕೆ ಪೇಚಾಡ್ತಿದೀರ? ಅದು ಈಗ ನಾವಿರೋ ಭೂಲೋಕವೇ ಅಲ್ವಾ?' ಎಂದು ತನಗೆ ತಿಳಿಯದ್ದೇನಿದೆ ಎನ್ನುವಂತೆ ನಕ್ಕಳು ಸ್ವರ್ಣ ಹೆಮ್ಮೆಯಿಂದ.

'ಅಂತೂ ಲೋಕಗಳೆಲ್ಲಾ ಇದ್ದಲ್ಲೇ ಇರತ್ವೆ. ನಮ್ಮ ಲೆಕ್ಕ ತಪ್ಪಿತ್ತು. ಸಧ್ಯ! ಅದಿರ್ಲಿ ಬಿಡು. ಈಗ ನಾವು ಮೇಲಕ್ಕೂ ಹೋಗ್ದೆ, ಪಾತಾಳ ಲೋಕಕ್ಕೂ ಹೋಗ್ದೆ ಇಬ್ಬಂದೀಲಿ ಭೂಮಿ ಮೇಲೆ ಇರೋ ಹಾಗೆ, ನಮ್ಮ ಪವಿತ್ರ ಮತ ಕೂಡ ಯಾರಿಗೆ ಹಾಕ್ಬೇಕು ಅಂತ ಇಬ್ಬಂದಿ ಆಗ್ತಾ ಇದ್ಯಲ್ಲಾ ಮಾರಾಯ್ತಿ? ಚುನಾವಣೆ ದಿನ ಬೇರೆ ಹತ್ರ ಬರ್ತಾ ಇದೆ. ಯಾರಿಗೆ ಓಟು ಹಾಕೋದು ಅಂತ ಡಿಸೈಡ್ ಮಾಡೋಕ್ಕೆ ಆಗ್ತಾ ಇಲ್ವಲ್ಲಾ?' ಮತ್ತೆ ಪೇಚಾಡಿದ ಪರಮ.

'ನೀವೊಬ್ರೇ ಏನ್ರೀ? ನಿಮ್ಮಂತೆ ಎಷ್ಟೋ ಜನ ಅಡಕತ್ರೀಲಿ ಸಿಕ್ಹಾಕೊಂಡಿದ್ದಾರೆ. ಹಾಡೇ ಬರ್ತಾ ಇದ್ಯಲ್ಲಾ?
ಯಾವನಿಗ್ ವೋಟ್ಹಾಕೋದೋ ಗೊತ್ತಾಗ್ತಾ ಇಲ್ಲ
ಹಂಗಂತ ಸುಮ್ನೆ ಕೂತ್ರೆ ತಪ್ಪಾಗ್ತದಲ್ಲ_
ಅಂತ ಕೇಳಿಲ್ವಾ?'

'ಓ, ನಮ್ಮ ಭಟ್ರ ಹಾಡು. ಮಾರಾಯ ಸಖತ್ತಾಗೇ ಬರ್ದೀದಾರೆ. ಸತ್ಯವಾದ ಮಾತೇ.'

'ಓ, ಇಂಥ ಹೊತ್ನಲ್ಲಿ, ಕವಿಗಳು, ವ್ಯಂಗ್ಯ ಚಿತ್ರಕಾರರು, ಸುದ್ದಿ ಮಾಧ್ಯಮದವ್ರು. ಅವ್ರು, ಇವ್ರು ಎಲ್ಲಾರ ಕಣ್ಣೂ ಚುನಾವಣೆ ಮೇಲೆ ಇರತ್ತಲ್ವಾ? ಮತ್ಯಾರೋ ಅದೇ ನಮ್ಮ ಪ್ರಾಣೇಶು ಹೇಳಿದ್ದಾರಲ್ರೀ 'ಹೆಲ್ಮೆಟ್ ಹಾಕದಿದ್ರೆ ತಲೆ ಉರುಳತ್ತೆ. ಸರಿಯಾದ ವ್ಯಕ್ತಿಗೆ ಓಟು ಹಾಕದಿದ್ರೆ ದೇಶಾನೇ ಉರುಳತ್ತೆ' ಅಂತ ಸ್ವರ್ಣನ ಮತ್ತೊಂದು ವರಸೆ.
'ಏನೇನೋ ಹೇಳಿ ನನ್ನ ತಲೆ ಕೆಡಿಸಿ, ಹುಳ ಬಿಟ್ಬಿಟ್ಟಿ ಸ್ವರ್ಣ. ಈಗ್ಲಾದ್ರೂ ಹೇಳು. ನಿನ್ನ ಮತದ ವಿಚಾರ ಬೇಡ, ನನ್ನ ಮತ ಯಾರಿಗೆ ಹಾಕ್ಲಿ?'

'ಒಂದು ಕೆಲ್ಸ ಮಾಡಿ. ಮತಗಟ್ಟೆಗೆ ಹೋಗಿ, ಓಟಿಂಗ್ ಮೆಶೀನ್ ಮುಂದೆ ಹೋಗಿ ಕಣ್ಣು ಮುಚ್ಕೊಂಡು ನಿಂತ್ಕೊಳ್ಳಿ. ಕಥೆ ಸ್ವಾಮಿಗಳ್ನ ನೆನಪು ಮಾಡ್ಕೊಂಡು, 'ನೀನ್ಯಾಕೋ, ನಿನ್ನ ಹಂಗ್ಯಾಕೋ...' ಎಂದು ಗುಣುಗುಟ್ಟುತ್ತಾ, ಕೈಯ್ಯಾಡಿಸುತ್ತಾ ಯಾವ್ದೋ ಒಂದು ಗುಂಡಿ ಒತ್ತಿ ಬಿಡಿ. ಒಂದ್ವೇಳೆ ಕಥೆ ಸ್ವಾಮಿಗಳೇ ನಿಮ್ಮ ಕೈಹಿಡ್ದು ಒತ್ತಿಸಿದ್ರೂ ಒತ್ತಿಸ್ಬಹ್ದು".

'ಓ, ನಿನ್ನ ಪ್ರಕಾರ ಯಾವ ಗುಂಡಿ ಬೇಕಾದ್ರೂ ಒತ್ತಿ. ಬೀಳೋದು ಗುಂಡೀಗೆ ಅಂತಾನಾ? ನಿಜಾನೇ, ನಿಜಾನೇ. ಗುಂಡಿಗೆ ಇದ್ದೋರು ಉಮೇದುವಾರರಾಗಿ ನಿಲ್ತಾರೆ. ನಮ್ಮಂತ ಅಮಾಯಕರು ನೆಟ್ಟಗಾಗದಿದ್ರೆ ತಲೆಕೆಳಗಾದ್ರೂ ಯಾವ್ದಾರ ಗುಂಡೀಗೆ ಬಿದ್ದೇ ಬೀಳ್ತೀವಿ. ಬೆಂಗ್ಳೂರಲ್ಲಿ ನೀರಿಗೆ ಬರವಾದ್ರೂ ಗುಂಡಿಗಳಿಗೆ ಬರವೇ? ಹಾಗೇ ಮಾಡ್ತೀನಿ ಬಿಡು'

'ನೋಡಿದ್ರಾ ಕಥೆ ಸ್ವಾಮಿಗಳಿಂದ ಎಷ್ಟೊಂದು ಉಪಕಾರ ಆಗತ್ತೆ' ಎಂದ ಸ್ವರ್ಣ ಹದಿನೆಂಟನೆಯ ಲೋಕ ಸಮರವನ್ನು ಗೆದ್ದಂತೆಯೇ ಬೀಗಿದಳು.

***

ಆಹಾರ ಸಮಸ್ಯೆ

– ಮಹಾಬಲ

ಇದು ದೇಶದ ಆಹಾರ ಸಮಸ್ಯೆ ಬಗ್ಗೆ ಅಲ್ಲ

ಇತ್ತೀಚೆಗೆ ನಾವು ಜಪಾನ್ ಪ್ರವಾಸ ಕೈಗೊಂಡಿದ್ದೆವು. ಕಳೆದ ಒಂದೂವರೆ ವರ್ಷದಲ್ಲಿ ಇದು ನಮ್ಮ ನಾಲ್ಕನೆಯ ವಿದೇಶ ಪ್ರವಾಸ. 2022ರ ನವೆಂಬರಿನಲ್ಲಿ ದುಬೈ, ಅಬುದಾಬಿ ಇತ್ಯಾದಿ ಸ್ಥಳಗಳು, 2023ರ ಏಪ್ರಿಲ್‌ನಲ್ಲಿ ಯೂರೋಪ್ ಪ್ರವಾಸ, ಅದೇ ವರ್ಷ ನವೆಂಬರಿನಲ್ಲಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಪ್ರವಾಸ ಮತ್ತು ಈಗ ಜಪಾನ್. ಮುಂದಿನ ಹೆಜ್ಜೆ ಯಾವ ದೇಶದತ್ತ? ಎಂದು ಕೇಳುವವರು ಈಗ ಹೆಚ್ಚಾಗಿದ್ದಾರೆ.

ಆದರೆ ಈ ಲೇಖನದ ವಿಷಯ ಅದಲ್ಲ. ಪ್ರತಿ ಬಾರಿ ಪ್ರವಾಸದ ವ್ಯವಸ್ಥಾಪಕರುಗಳೂ "ನೀವು ವಿದೇಶಗಳಲ್ಲಿ ಆಹಾರದ ವಿಷಯದಲ್ಲಿ ನಿಮ್ಮ ಮಡದಿ ಕೈರುಚಿಯ ಅಡುಗೆಯನ್ನೋ, ವಿದ್ಯಾರ್ಥಿ ಭವನ, ತಾಜಾ ತಿಂಡಿ, ಐಟಿಆರ್ ಇಂಥ ಹೋಟೆಲುಗಳ ಸಿಗ್ನೇಚರ್ ಡಿಶ್‌ಗಳನ್ನೋ ನೆನಪಿಸಿಕೊಂಡು ಪ್ರಲಾಪಿಸಿ ನಿರಾಶರಾಗಬೇಡಿ. ನಾವು ಆದಷ್ಟೂ ವಿದೇಶಗಳಲ್ಲಿ ಭಾರತೀಯ ಹೋಟೆಲುಗಳಿಗೆ ಕರೆದುಕೊಂಡು ಹೋಗುತ್ತೇವೆ. ಸಾಮಾನ್ಯವಾಗಿ ಅವರು ಪಂಜಾಬಿಗಳೋ, ನೇಪಾಳಿಗಳೋ ಆಗಿರುತ್ತಾರೆ. ಅಲ್ಲೊಂದು ಇಲ್ಲೊಂದು ಕಡೆ ತಮಿಳುನಾಡು ಮೂಲದವರ ಹೋಟೆಲು ಸಿಕ್ಕೀತು. ನಾವೇ ಅಲ್ಲಿನ ಕೆಲವು ಹೋಟೆಲಿನವರಿಗೆ ಚನ್ನಮಸಾಲ, ದಾಲ್ ಅಂಥವನ್ನು ಯೂಟ್ಯೂಬ್ ಮೂಲಕ ಕಲಿಸಿಕೊಡಲು ಪ್ರಯತ್ನಿಸಿದ್ದೇವೆ. ಊಟಕ್ಕಿಂತ ನೋಟ ಮುಖ್ಯ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬನ್ನಿ. ಉಳಿದ ವಿಚಾರಗಳಲ್ಲಿ ನಿಮಗೆ ಯಾವುದೇ ಅನಾನುಕೂಲ ಆಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ" ಎಂದು ಒಂದು ಬಗೆಯ ನಿರೀಕ್ಷಣಾ ಜಾಮೀನು ತೆಗೆದುಕೊಂಡುಬಿಡುತ್ತಿದ್ದರು.

ನಾವೂ ಈ ಸಂಭಾವ್ಯ ಕೊರತೆಯನ್ನು ಗಮನದಲ್ಲಿ ಇರಿಸಿಕೊಂಡೇ ಪ್ರವಾಸದ ಸಿದ್ಧತೆ ಆರಂಭಿಸುತ್ತಿದ್ದೆವು. ನಾನಂತೂ ಪ್ರತಿಬಾರಿ ವಿಮಾನ ನಿಲ್ದಾಣಕ್ಕೆ ಹೋಗುವಾಗ ಜಕ್ಕೂರಿನ ಹತ್ತಿರವಿದ್ದ ಕೃಷ್ಣ ಸಾಗರ್ ಹೋಟೆಲಿಗೆ ನುಗ್ಗಿ ಇಡ್ಲಿ ರವೆದೋಸೆ ಇತ್ಯಾದಿಗಳನ್ನು ನಾಳೆಯಿಂದ ಇವು ಸಿಗುವುದೇ ಇಲ್ಲವೆನ್ನುವಂತೆ ಕಬಳಿಸಿ, ಕಾಫಿ ಹೀರಿಯೇ ಮುಂದುವರೆಯುತ್ತಿದ್ದೆ. ಮನೆರುಚಿಯನ್ನು ಜ್ಞಾಪಿಸುವಂತೆ ಅಡುಕಲೆಯಿಂದ ಕೊಂಡು ತಂದ ಗೊಜ್ಜವಲಕ್ಕಿ, ಮದ್ದೂರುವಡೆ ಇತ್ಯಾದಿಗಳ ಪೊಟ್ಟಣಗಳೂ ನಮ್ಮ ಸಾಥಿಯಾಗಿರುತ್ತಿದ್ದವು.

ವಾಸ್ತವ್ಯದ ಹೋಟೆಲುಗಳಲ್ಲಿ ಬೆಳಗಿನ ಉಪಾಹಾರವೇನೋ ಭರ್ಜರಿಯಾಗಿರುತ್ತಿತ್ತು. ಆದರೆ ಶುದ್ಧ ಶಾಖಾಹಾರಿಗಳಿಗೆ ಅಲ್ಲಿ ಲಭ್ಯವಾಗುತ್ತಿದ್ದುದು ಬ್ರೆಡ್, ಹಣ್ಣಿನ ರಸ, ಹಣ್ಣಿನ ಚೂರುಗಳು, ಜ್ಯಾಮ್, ಕಾರ್ನ್‌ಫ್ಲೇಕ್ಸ್, ಓಟ್ಸ್ ಕಾಪಿ ಇಂತವಷ್ಟೆ.

ಪ್ರವಾಸದ ವ್ಯವಸ್ಥಾಪಕರು ಈ ಮೊದಲೇ ಹೇಳಿದ್ದಂತೆ ಮಧ್ಯಾಹ್ನ ಮತ್ತು ರಾತ್ರಿಯ ಭೋಜನಕ್ಕೆ ದೊರಕುತ್ತಿದ್ದುದು "ಹಗಲೂ ಇರುಳು ಒಂದೇ ಗೋಳು" ಎನ್ನುವಂತೆ, ಹತ್ತು ಬೆರಳುಗಳೂ ಮುರಿಯಲಾಗದ, ಅಗಿಯಲು ಮೂವತ್ತೆರಡು ಹಲ್ಲುಗಳೂ ಸಾಲದ ಮೈದಾ ಹಿಟ್ಟಿನ ನಾನ್, ನಮಗೆ ಅಭ್ಯಾಸವಿಲ್ಲದ ಬಾಸ್ಮತಿ ಅಕ್ಕಿಯ ಅನ್ನ, ಬೇಯಿಸಿದ್ದೋ, ಕರಿದಿದ್ದೋ ಅಂತೂ ಯಾವುದೋ ರೂಪದ ಆಲೂಗಡ್ಡೆ ಖಾದ್ಯ, ಚನ್ನಮಸಾಲ, ದಾಲ್ ಇಂಥವೇ ನಮ್ಮ ತಟ್ಟೆಗೆ ಬೀಳುತ್ತಿದ್ದುದು.

ಇಂಥ ಏಕತಾನತೆಯ ಕಗ್ಗತ್ತಲಿನಲ್ಲಿ ಕೋಲ್‌ಮಿಂಚಿನಂತೆ ಕಂಡದ್ದು ನೆದರ್‌ಲೆಂಡ್ಸ್ ದೇಶದ ಐಂಡ್ ಹೋವನ್ನಲ್ಲಿ ಉದ್ಯೋಗದಲ್ಲಿದ್ದ ನನ್ನ ತಂಗಿಯ ಮಗ ಗಿರಿಧರ ನಮ್ಮ ವಾಸ್ತವ್ಯದ ಹೋಟೆಲಿನಿಂದ ತನ್ನ ಮನೆಗೆ ಕರೆದುಕೊಂಡು ಹೋಗಿ ರಾತ್ರಿ ಭೋಜನದ ವ್ಯವಸ್ಥೆ ಮಾಡಿದ್ದು. ಅವನ ಹೆಂಡತಿ ಸುಶ್ಮಾ ತಯಾರಿಸಿದ ಹೀರೇಕಾಯಿ ಹುಳಿ, ಸಾರು, ಕ್ಯಾರೆಟ್ ಪಲ್ಯ, ಪಾಯಸ ನಮ್ಮ ನಾಲಗೆಯನ್ನು ತಣಿಸಿದ್ದೇ ಅಲ್ಲದೆ ಹಿಂದಿನ ಸ್ಥಿತಿಗೆ ಸ್ವಲ್ಪಮಟ್ಟಿಗೆ ತರಲು ಸಾಧ್ಯಮಾಡಿತು.

ಒಂದೆರಡು ದಿನ ಪ್ರವಾಸದ ಊಟಕ್ಕೆ ಚಕ್ಕರ್ ಹಾಕಿ ಅಡುಕಲೆಯ ಗೊಜ್ಜುವಲಕ್ಕಿಯ ಸಮಾರಾಧನೆಯನ್ನೂ ನಡೆಸಿದೆವು. ಭೋಜನದ ನಂತರದ ಚರ್ಚೆಯಲ್ಲಿ ಬಹುಪಾಲು ಸಹಪ್ರವಾಸಿಗರದು ಮನೆಯೂಟದ ಮತ್ತು ಬೆಂಗಳೂರು, ಮೈಸೂರು ಹೋಟೆಲುಗಳ ಇಡ್ಲಿ ದೋಸೆಗಳ ರುಚಿಗಳ ಕನವರಿಕೆಯೇ. ಪ್ರವಾಸ ವ್ಯವಸ್ಥಾಪಕರುಗಳಂತೂ ಇಂಥ ಕಡೆಯೆಲ್ಲ ಇಷ್ಟೇ ಸಾಧ್ಯ. ಇದನ್ನೂ ಬಹಳ ಕಷ್ಟಪಟ್ಟು ಹೊಟೆಲಿನವರಿಗೆ ಮೊದಲೇ ಹಣ ಕಳುಹಿಸಿ, ಟೇಬಲ್ ರಿಸರ್ವ್ ಮಾಡಿಸಿ ವ್ಯವಸ್ಥೆ ಮಾಡಬೇಕು. ನಿಮಗೆ ಸೇರಿದಷ್ಟು ತಿನ್ನಿ. ಊಟಕ್ಕಿಂತ ನೋಟ ಮುಖ್ಯ. ನಾವು ಮೊದಲೇ ಹೇಳಿರಲಿಲ್ಲವೆ? ಎಂಬ ಅದೇ ರಾಗ ಅದೇ ಹಾಡು.

ಇದಕ್ಕಿಂತ ನಮಗೆ ನಿರಾಶಾದಾಯಕವಾಗುತ್ತಿದ್ದದ್ದು ನಮ್ಮಂಥವರ ಪ್ರಿಯಪೇಯವಾದ ಕಾಫಿಯ ವಿಷಯದಲ್ಲಿ. ನಮ್ಮ ಕಲ್ಪನೆಯ ಕಾಫಿಯೆಂದರೆ ಬೆಂಗಳೂರಿನ ಫ್ಲೇವರ್ ಕಾಪಿ ವರ್ಕ್ಸ್ ಅಥವಾ ಮೈಸೂರಿನ ಗಾಯತ್ರಿ ಕಾಫಿ ಡಿಪೊನಿಂದ ತಂದ ಶೇಕಡಾ 80 ಕಾಪಿ : 20 ಚಿಕೋರಿ ಮಿಶ್ರಣದ ಆಹ್ಲಾದಕರ ಕಾಫಿಪುಡಿ, ಡೈರಿಹಾಲು (ಹಿಂದೊಮ್ಮೆ ಕರೆದ ಹಾಲೂ ಲಭ್ಯವಿತ್ತು) ಬೆರತ ರುಚಿಕರ ಕಾಫಿ: ಬಲಗೈಯಲ್ಲಿ ಕಾಫಿ ಲೋಟ, ಎಡಗೈಯಲ್ಲಿ ಹಿಡಿದ ವೃತ್ತಪತ್ರಿಕೆ ಅಥವಾ ಮೊಬೈಲಿನ ಪಠಣ ; ಆಹಾ ಪದಗಳಲ್ಲಿ ಬಣ್ಣಿಸಲಾದೀತೆ ಆ ವೈಭವವನ್ನು?.

ಹೊಟೆಲಿನ ಕೊಠಡಿಯಲ್ಲಿ ಕೆಟಲ್, ಕಾಫಿಪುಡಿ, ಹಾಲಿನಪುಡಿ, ಸಕ್ಕರೆಪುಡಿ ಎಲ್ಲವೂ ಇರುತ್ತಿತ್ತು. ಅವು ಬೆಳಗಿನ ಕಾಫಿ ದಾಹವನ್ನು ಸ್ವಲ್ಪಮಟ್ಟಿಗೆ ತಣಿಸಬಹುದು ಎಂದೆನಿಸಿದರೂ ನಮ್ಮ ಕನವರಿಕೆಯ ಕಾಫಿ ಸಾಮ್ರಾಜ್ಯವನ್ನಲ್ಲ. ಉಪಾಹಾರದ ಸಮಯದಲ್ಲೂ ಅಷ್ಟೆ. ಮೂರು ನಾಲ್ಕು ಕಾಫಿ ಐಟಂಗಳು, ಯಾವುದರಲ್ಲಿ ನಮ್ಮ ನಿಜಕಾಫಿ ದೊರೆಯುವುದು ಎಂಬುದನ್ನು ಅವರಿವರನ್ನು ಗೋಗರೆದು, ನಿರಂತರ ಪ್ರಯೋಗಗಳ ಮೂಲಕ ಕಂಡುಕೊಳ್ಳಬೇಕಾದ ದುಸ್ಥಿತಿ.

ಒಮ್ಮೆ ದಾರಿಯಲ್ಲಿ ಬಸ್ಸು ಗ್ಯಾಸ್ ಸ್ಟೇಷನ್ ಬಳಿ ನಿಂತಾಗ ಅಲ್ಲಿದ್ದ ಕಾಫಿ ಕೌಂಟರ್ ಬಳಿ ಸಾಗಿ ಕಾಫಿ ಎಂದಾಗ ಕೆಫೆ, ಕ್ಯಾಪುಚಿನೋ, ಕೆಫೆ ಲಾತ್ತೆ ಎಂದು ಆಯ್ಕೆಗಳ ಮಳೆಯನ್ನೇ ಸುರಿಸಿ ಗೊಂದಲದಲ್ಲಿ ಕೆಡವುತ್ತಿದ್ದಳು ಅಲ್ಲಿದ್ದ ಬೆಡಗಿ. ನಮ್ಮಲ್ಲಾದರೆ ಬಲು ಸುಲಭ. ಕಾಫಿ ಎನ್ನುತ್ತ ಹದಿಮೂರು ರೂಪಾಯಿ ನೀಡಿದರೆ ಒಂದು ಟೋಕನ್ ಬಿಸಾಕುತ್ತಾರೆ. ಕಾಪಿ ಕೌಂಟರಿನ ಹುಡುಗನಿಗೆ ಕಾಫಿ, ಲೆಸ್ ಕಾಫಿ, ಮಿಕ್ಸ್ ಕಾಫಿ, ಲೈಟ್ ಕಾಫಿ, ಸ್ಟ್ರಾಂಗ್ ಕಾಫಿ ಎಂದು ನಾವೇ ಆಯ್ಕೆಗಳನ್ನು ನೀಡುವ ಸ್ವಾತಂತ್ರ್ಯವಿದೆ. ಸ್ವದೇಶಕ್ಕೆ ವಾಪಸು ಬರುವವರೆಗೆ ನಮ್ಮ ಕನಸಿನ ಕಾಫಿ ಕನಸಿನಲ್ಲೇ ಶಾಶ್ವತ ನೆಲೆಗೊಂಡಿರುತ್ತದೆ.

ಈ ಬಾರಿ ಸ್ವದೇಶಕ್ಕೆ ವಾಪಸಾದ ನಂತರ, ಮನೆಗೆ ಕಾರಿನಲ್ಲಿ ಸಾಗುವಾಗ ಚಾಲಕ ಬಾಲರಾಜು, "ಸರ್.. ಊಟ, ತಿಂಡಿ, ಕಾಫಿ ಎಲ್ಲ ಹೇಗಿತ್ತು?" ಎಂದು ಕೇಳಿದ. ಅವನು ಕೇಳೀದ್ದೇ ಸಾಕು ಎನ್ನುವಂತೆ ಸಂಪೂರ್ಣವಾಗಿ ಆ

ವಿಷಯದ ದುರಂತಾನುಭವವನ್ನು ವಿವರಿಸಿದೆ. ಅದಕ್ಕೆ ಅವನು "ಸಾರ್ ಆ ಉಡುಪಿ ರೆಸ್ಟೋರೆಂಟ್ ಹತ್ತಿರ ನಿಲ್ಲಿಸುತ್ತೇನೆ" ಎಂದು ಉತ್ತರಿಸಿ, ನನ್ನ ಸಮ್ಮತಿಗೂ ಕಾಯದೆ ಕಾರು ನಿಲ್ಲಿಸಿದ. ನಾನೇಕೆ ಪ್ರತಿಭಟಿಸಲಿ? ಅಲ್ಲಿ ಇಡ್ಲಿ ವಡೆ ಕಬಳಿಸಿ, ಕಾಫಿ ಆಸ್ವಾದಿಸಿ ಕಳೆದುಕೊಂಡದ್ದನ್ನು ಮರಳಿ ಪಡೆದ ಸಂತಸ, ಉತ್ಸಾಹದಿಂದ ಮನೆಯತ್ತ ತೆರಳಿದೆ. ಈ ವಿಷಯದಲ್ಲಿ ನಿಮ್ಮ ಅನುಭವವನ್ನೂ ತಿಳಿದುಕೊಳ್ಳುವ ಕುತೂಹಲ ನನ್ನದು.

***

ಭಗತ್ ಸಿಂಗ್ ಬರೆದ ಮುನ್ನುಡಿ

– ಬೆಂ.ಶ್ರೀ. ರವೀಂದ್ರ

ಭಗತ್ ಸಿಂಗ್ ಎಂದರೆ ಮೈ ನವಿರೇಳುತ್ತದೆ. ಕಣ್ಣಾಲಿಗಳು ತುಂಬುತ್ತವೆ. 23 ವರ್ಷದ ಚಿಗುರು ಮೀಸೆ ಹುಡುಗ 'ಇಂಕ್ವಿಲಾಬ್ ಜಿಂದಾಬಾದ್' ಎಂದು ಘೋಷಿಸಿ, ನೇಣಿಗೆ ಮುತ್ತಿಟ್ಟು, ತಲೆ ಎತ್ತಿ, ಜೀವತೆತ್ತ ಗಳಿಗೆ ನೆನಪಾಗುತ್ತದೆ. ಸುಮಾರು ಏಳು ಲಕ್ಷಕ್ಕೂ ಹೆಚ್ಚು ಕ್ರಾಂತಿಕಾರಿಗಳ ರಕ್ತತರ್ಪಣದಿಂದ ಭಾರತದ ಸ್ವಾತಂತ್ರ್ಯದ ಜ್ಯೋತಿಯು ತ್ಯಾಗಮಯವಾಗಿದೆ. ಭಗತ್ ಸಿಂಗ್ ಅವರೆಲ್ಲರ ಪ್ರತೀಕ. ನಮ್ಮೆದೆಯ ನಿರಂತರ ಬೆಳಕು.

ಅಷ್ಟು ಚಿಕ್ಕ ವಯಸ್ಸಿಗೆ ದೊಡ್ಡ ಕ್ರಾಂತಿಕಾರಿಯಾಗಿ ಬೆಳೆದ ಭಗತ್ ಸಿಂಗ್, ಸತತ ಅಧ್ಯಯನಶೀಲನಾಗಿದ್ದ. ಗಾಂಧಿ ಚಳುವಳಿಯಿಂದ ಆರಂಭಿಸಿ, ಸಮಾಜವಾದಿ ಸಿದ್ಧಾಂತದಲ್ಲಿ ನೆಲೆ ನಿಂತ. ಯಾವುದೇ ವಿಷಯವನ್ನು ಆಳವಾಗಿ ಯೋಚಿಸುವ, ಕಾರ್ಯ ಯೋಜನೆಯನ್ನು ರೂಪಿಸುವ, ತತ್‌ಕ್ಷಣದ ಆವೇಶಗಳಿಗೆ ಬಲಿಬೀಳದ ಹೊಳೆವ ನಕ್ಷತ್ರ ಅವನು.

ಭಗತ್, ಒಬ್ಬ ಅತ್ಯುತ್ತಮ ಲೇಖಕ. ತನ್ನ ಚಿಂತನೆಗಳನ್ನು ಬಹಳ ಸ್ಪಷ್ಟವಾದ ಮತ್ತು ಖಚಿತವಾದ ರೀತಿಯಲ್ಲಿ ಬರೆಯಬಲ್ಲವನಾಗಿದ್ದ. 'ನಾನೇಕೆ ನಾಸ್ತಿಕ' ಎಂಬ ಪುಟ್ಟ ಪುಸ್ತಿಕೆಯೇ ಈ ಮಾತಿಗೆ ಸಾಕ್ಷಿ. ಹೆಚ್ಚು ಸ್ವಾಧ್ಯಾಯವನ್ನು ಮಾಡುತ್ತಿದ್ದ. ನೇಣುಗಂಬವನ್ನು ಏರುವ ಹಿಂದಿನ ದಿನವೂ "ರೆವಲ್ಯೂಷನರಿ ಲೆನಿನ್" ಎಂಬ ಪುಸ್ತಕವನ್ನು ತರಿಸಿಕೊಂಡು ಓದಿದ್ದ. ಹೆಚ್ಚು ಬರವಣಿಗೆ ಮಾಡಲು, ಸತತ ಕ್ರಾಂತಿಕಾರ್ಯ ಮತ್ತು ದುಷ್ಟ ಸಾಮ್ರಾಜ್ಯಶಾಹಿ ಸರ್ಕಾರ ಅವಕಾಶ ಕೊಡಲಿಲ್ಲ.

ಭಗತ್ ಸಿಂಗ್, ಗೆಳೆಯ ಲಾಲ ರಾಮ್ ಶರಣ್ ದಾಸ್ ಅವರ "ಸ್ವಪ್ನ ಲೋಕ" (ದ ಡ್ರೀಮ್ ಲ್ಯಾಂಡ್) ಕಾವ್ಯಾತ್ಮಕ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ, ತನ್ನ ವಿಷಯ ಗ್ರಹಣ, ಭಾಷಾ ಪ್ರೌಢಿಮೆ ಮತ್ತು ಅಭಿವ್ಯಕ್ತಿಯ ಸಾಮರ್ಥ್ಯವನ್ನು ಮೆರೆದಿದ್ದಾನೆ.

ಈ ಮುನ್ನುಡಿಯನ್ನು ಬರೆದಿದ್ದು. 1931ರ ಜನವರಿ 15ರಂದು. ಉಸಿರು ಕಸಿದ ನೇಣುಕುಣಿಕೆಯ ಮೃತ್ಯನರ್ತನದ ಸಮಯದಲ್ಲಿ. ಗಲ್ಲುಶಿಕ್ಷೆಯಾಗಿದ್ದು 23 ಮಾರ್ಚ್ 1931ರಂದು. ಆದರೆ, ಈ ಲೇಖನದಲ್ಲಿ ಕಂಡು ಬರುವ ಮಾನಸಿಕ ಸ್ಥಿರತೆ, ಪರಿಪಕ್ವ ಚಿಂತನೆ, ತಾರ್ಕಿಕ ಅಭಿವ್ಯಕ್ತಿಯನ್ನು ಗಮನಿಸಿದರೆ, ಇಂತಹ ಕಠಿಣ ಸಂದರ್ಭದಲ್ಲಿಯೂ ಈ ಮನೋದಾರ್ಢ್ಯ ಸಾಧ್ಯವೇ ಅನ್ನಿಸುತ್ತದೆ.

ಲಾಲಾ ರಾಮ್ ಶರಣ್ ದಾಸ್ ಅವರು ಬಹಳ ದೊಡ್ಡ ಕ್ರಾಂತಿಕಾರಿ (1888–1963). 1905ರಲ್ಲಿ ಬಂಗಾಳದ ವಿಭಜನೆ ವಿರುದ್ಧ ಹೋರಾಡಿದ ಕ್ರಾಂತಿಕಾರಿಯೊಬ್ಬರಿಂದ ಸ್ಫೂರ್ತಿಯನ್ನೂ ಪಡೆದು ವಿಪ್ಲವಕ್ಕೆ ಧುಮುಕಿದವರು. 1907ರಲ್ಲಿ ಪಂಜಾಬಿನಲ್ಲಿ ಗುಪ್ತ ಕ್ರಾಂತಿದಳವನ್ನು ಕಟ್ಟಿದವರು. ಘದ್ದರ್ ಪಕ್ಷದ ನೀತಿಗಳಿಗೆ ಒಲಿದಿದ್ದವರು. 1915ರಲ್ಲಿ ವಿಫಲವಾದ ಘದ್ದರ್ ಹೋರಾಟವನ್ನು ಬ್ರಿಟೀಶರು 'ಮೊದಲನೆಯ ಲಾಹೋರ್ ಪಿತೂರಿ ಪ್ರಕರಣ'ವೆಂದು ದಾಖಲಿಸಿದರು. ಪಿತೂರಿಯ ಹಿಂದಿನ ಕೈವಾಡ ರಾಮ್ ಶರಣ್ ಎಂದು ತೀರ್ಮಾನಿಸಿ, ನೇಣಿನ ಶಿಕ್ಷೆಯನ್ನು ವಿಧಿಸಿದರು. ತದನಂತರ ಆ ಶಿಕ್ಷೆಯನ್ನು ಜೀವಾವಧಿಗೆ ಇಳಿಸಲಾಯಿತು. ಅಂಡಮಾನಿನ ಸೆಲ್ಯುಲರ್ ತುರಂಗದಲ್ಲಿ ಆರು ವರ್ಷ, ತಮಿಳುನಾಡಿನ ಸೇಲಂನಲ್ಲಿ ಆರು ವರ್ಷ ಶಿಕ್ಷೆಯನ್ನು ಅವರು ಅನುಭವಿಸಿದರು. 1927ರಲ್ಲಿ ಸರ್ಕಾರವು

ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿತು. ಸೇಲಂ ಜೈಲಿನಲ್ಲಿದ್ದ ಸಂದರ್ಭದಲ್ಲಿ ರಾಮ್ ಶರಣ್ ಕವಿತೆಗಳನ್ನು ಬರೆದಿದ್ದು.

ಜೈಲಿನಲ್ಲಿದ್ದ ಅನೇಕ ಮಿತ್ರರು ತಪ್ಪೊಪ್ಪಿಗೆ ಬರೆದು ಬಿಡುಗಡೆ ಪಡೆದಿದ್ದರು. ರಾಮ್ ಶರಣ್‌ಗೆ ಮದುವೆಯಾಗಿತ್ತು. ಮಕ್ಕಳೂ ಇದ್ದರು. ತಾನು ಆ ರೀತಿ ಬಿಡುಗಡೆಯಾಗಬಹುದೇ ಎಂಬ ಡೋಲಾಯ ಮನಸ್ಥಿತಿಯಲ್ಲಿ ತೊಳಲಾಡಿದ್ದರು. ಇಂತಹ ಮನಸ್ಥಿತಿ, ಘದ್ಧರ್ ಪಕ್ಷದ ಧ್ಯೇಯೋದ್ದೇಶಗಳು ಹಾಗೂ ಕ್ರಾಂತಿಕಾರಿಗಳ ಆದರ್ಶಗಳು ಅವರ ಕವನಗಳ ವಸ್ತುಗಳಾಯಿತು. ಬಿಡುಗಡೆಯಾದ ನಂತರ, ಭಗತ್‌ನ "ನೌ ಜವಾನ್ ಭಾರತ್ ಸಭಾ" ದ ಸದಸ್ಯರಾದರು. ತಾವು ಬರೆದ ಕೃತಿಯನ್ನು ಸೆರೆಯಲ್ಲಿದ್ದ ಭಗತ್‌ರಿಗೆ "ಮುನ್ನುಡಿ"ಗಾಗಿ ತಲುಪಿಸಿದರು.

ಈಗ ಭಗತ್ ಸಿಂಗ್ ಅವರ ಮುನ್ನಡಿಯನ್ನು ಗಮನಿಸೋಣ. ಆರಂಭದಲ್ಲಿ ಭಗತ್, "ನಾನು ಕವಿಯಲ್ಲ, ಸಾಹಿತಿಯಲ್ಲ, ಪತ್ರಕರ್ತನೂ ಅಲ್ಲ, ವಿಮರ್ಶಕನೂ ಅಲ್ಲ ಹಾಗಾಗಿ ಈ ಮಾನದಂಡಗಳಿಂದ ಕೃತಿಯು ಸಮರ್ಪಕವೇ ಎಂಬುದನ್ನು ಅರಿಯಲಾರೆ" ಎನ್ನುತ್ತಾರೆ. ಆದರೆ "ತಾನೊಬ್ಬ ರಾಜಕೀಯ ಕಾರ್ಯಕರ್ತ, ಆ ದೃಷ್ಟಿಯಿಂದ ಕೃತಿಯನ್ನು ವಿಮರ್ಶಿಸುತ್ತೇನೆ" ಎಂದು ಸಿದ್ದವಾಗುತ್ತಾರೆ.

ಸಾಮಾನ್ಯವಾಗಿ ಮುನ್ನುಡಿಕಾರರು, ಕೃತಿಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಒಂದು ರೀತಿಯ ಸಹಮತ, ಸಹೃದಯತೆಯನ್ನು ಹೊಂದಿರುತ್ತಾರೆ. ಆದರಿಲ್ಲಿ ಮುನ್ನುಡಿಕಾರರಿಗೂ ಕೃತಿಕಾರರಿಗೂ ಹಲವಾರು ಪ್ರಮುಖ ತಾತ್ವಿಕ ಭಿನ್ನಾಭಿಪ್ರಾಯಗಳಿವೆ. "ಆದ್ದರಿಂದ ಇದೊಂದು ಮುನ್ನುಡಿಯಾಗಲಾರದು, ಇದು ಒಂದು ವಿಮರ್ಶೆಯಾಗಬಹುದು ಮತ್ತು ಈ ಬರೆಹದ ಸ್ಥಾನ ಕೃತಿಯ ಕೊನೆಯಲ್ಲಿ ಹೊರತು ಆರಂಭದಲ್ಲಲ್ಲ" ಎನ್ನುತ್ತಾರೆ ಭಗತ್. ಭಿನ್ನಾಭಿಪ್ರಾಯಗಳನ್ನು ಸ್ಪಷ್ಟವಾಗಿ ಗುರುತಿಸಿದರೂ, ಸಹೃದಯತೆ ಈ ಲೇಖನದ ಉದ್ದಕ್ಕೂ ಕಂಡುಬರುತ್ತದೆ. ಲೇಖಕರ ಅಭಿಪ್ರಾಯಗಳನ್ನು ಯಾವುದೇ ರೀತಿಯಲ್ಲಿ ಕಳಪೆಯಾಗಿ ಭಗತ್ ನೋಡುವುದಿಲ್ಲ. ಬದಲಾಗಿ ಗೌರವಿಸುತ್ತಾರೆ ಮತ್ತು ಕೆಲವೊಮ್ಮೆ ಸಮರ್ಥಿಸುತ್ತಾರೆ ಕೂಡ.

ಅಂದಿನ ಕ್ರಾಂತಿಕಾರಿಗಳಾಗಲಿ, ರಾಜಕೀಯ ಹೋರಾಟಗಾರರಾಗಲಿ, ಸ್ವತಂತ್ರ ಭಾರತದ ಸರ್ಕಾರ/ಆಡಳಿತ ಯಾವ ರೀತಿ ಇರಬೇಕು ಎಂಬ ಸ್ಪಷ್ಟ ಕಲ್ಪನೆಯನ್ನು ಇಟ್ಟುಕೊಂಡಿರಲಿಲ್ಲ. ಆದರೆ ಘದ್ದರ್ ಪಕ್ಷದವರು ಮಾತ್ರಾ, ಅಮೆರಿಕನ್ ಮಾದರಿಯ ಆಳ್ವಿಕೆಯನ್ನು ತರಬೇಕು ಎಂಬ ಸ್ಪಷ್ಟ ಪ್ರಣಾಳಿಕೆಯನ್ನು ಹೊಂದಿದ್ದರು. ಈ ಅಂಶವನ್ನು ಕಾವ್ಯದುದ್ದಕ್ಕೂ ಕಾಣುವ ಭಗತ್, ರಾಮ್ ಶರಣರ ಕ್ರಾಂತಿಯ ಹೆಜ್ಜೆಗಳನ್ನು ಗುರುತಿಸುತ್ತಾರೆ.

ಮನಕಲಕುವ ಮಾತೊಂದು ಇಲ್ಲಿ ಬರುತ್ತದೆ. ಭಗತ್ ಹೇಳುತ್ತಾರೆ, "ರಾಮ್ ಶರಣ್ ದಾಸ್‌ಗೆ ಆದ ಗಲ್ಲು ಶಿಕ್ಷೆಯು ನಂತರ ಜೀವಾವಧಿ ಗಡಿಪಾರಿನ ಶಿಕ್ಷೆಯಾಗಿ ಪರಿವರ್ತನೆಗೊಂಡಿತು. ಇವತ್ತು ನಿಕೃಷ್ಟವಾದ ಕಾರಾಗೃಹ ವಾಸವು ಮರಣದಂಡನೆಗಿಂತ ಹೆಚ್ಚು ಕ್ಲಿಷ್ಟಕರವಾದುದೆಂದು ಅಧಿಕಾರಯುತವಾಗಿ ಓದುಗರಿಗೆ ನಾನು ಹೇಳಬಲ್ಲೆ' ಅಂತ. ಇವುಗಳನ್ನು ಓದಿದಾಗ ಎಂತಹ ಕಟು ಹೃದಯಿಗಳ ಕಣ್ಣಲ್ಲೂ ನೀರು ಹರಿಯುತ್ತದೆ. ಭಗತ್ ಸಿಂಗರ ಹೃದಯ ಎಷ್ಟು ಗಟ್ಟಿಯಾಗಿತ್ತು ಎಂಬುದಕ್ಕೆ ಈ ಮಾತುಗಳು ಸಾಕ್ಷಿಯಾಗಿದೆ. ಇಂತಹ ಸಂದರ್ಭದಲ್ಲೂ ಭಗತ್ ಸಿಂಗ್, ರಾಮ್ ಶರಣ್ ಕಾವ್ಯ ಬರೆದ ಸಮಯದ ಮನೋಭಾವ ಮತ್ತು ಮಾನಸಿಕ ಸಂಘರ್ಷಗಳನ್ನು ಶಾಂತಭಾವದದಿಂದ, ಅನುದ್ವಿಗ್ನವಾಗಿ ಗುರುತಿಸುತ್ತಾರೆ ಮತ್ತೂ ಹೇಳುತ್ತಾರೆ– "ಈ ಕಾರಣದಿಂದಲೇ ಕಾವ್ಯವು ಮತ್ತಷ್ಟು ಸುಂದರವಾಗಿ

ಹೃದಯಂಗಮವಾಗಿ ಬಂದಿದೆ". ರಾಮ ಶರಣರ ಮನಸ್ಥಿತಿಯ ಬಗ್ಗೆ ಕವನದ ಸಾಲುಗಳನ್ನು ಉದಹರಿಸಿದ್ದಾರೆ. "ಸುತ್ತುವರೆದಿಹರೆನ್ನನೀ ಸತಿ ಸುತರು ಸ್ನೇಹಿತರು, ಮುತ್ತಿಗೆಯನೆನಗೆ ಹಾಕಿರುವ ವಿಷ ಸರ್ಪಗಳು ಇವರು".

ರಾಮ್ ಶರಣ್ ಅವರಿಗೆ ದೇವರಲ್ಲಿ ನಂಬಿಕೆ ಇತ್ತು. ಕವನದಲ್ಲಿನ ತತ್ವಶಾಸ್ತ್ರದ ಚರ್ಚೆಗಳು, ಟಿಲಿಯಾಲಜಿ (ದೇವರ ಅಸ್ತಿತ್ವವನ್ನು ಸಮರ್ಥಿಸುವ ವಾದ) ಮತ್ತು ಆಧ್ಯಾತ್ಮಿಕತೆಗಳ ಮೇಲೆ ಆಧಾರಿತ. ಆದರೆ ಭಗತ್ ಸಿಂಗ್‌ರಾದರೋ ಭೌತವಾದಿ. ದೇವರನ್ನು ನಂಬದವರು. ಆದರೂ ಮುನ್ನುಡಿಯ ಈ ಮಾತುಗಳು ಭಗತ್‌ರ ಹೃದಯ ವೈಶಾಲ್ಯವನ್ನು ತೋರಿಸುತ್ತದೆ. "ಭೌತಿಕ ತತ್ವಶಾಸ್ತ್ರದಲ್ಲಿ ಇಂತಹ ಚಿಂತನೆಗೆ ಎಳ್ಳಷ್ಟೂ ಎಡೆಯಿಲ್ಲ. ಅದೇನೇ ಇದ್ದರೂ, ಲೇಖಕರ ಈ ಅನುಭಾವವನ್ನು ಯಾವ ಕಾರಣದಿಂದಲೂ ಕುತ್ಸಿತವಾಗಿಯಾಗಲಿ, ಅವಹೇಳನಕರವಾಗಲೀ ನೋಡಬೇಕಿಲ್ಲ. ಅದಕ್ಕೆ ತನ್ನದೇ ಆದ ಚೆಲುವಿದೆ. ಮೆರುಗಿದೆ. ಅದರ ಅಭಿಪ್ರಾಯಗಳು ಉತ್ಸಾಹದಾಯಕವಾಗಿದೆ." ಭಗತ್ ಎಷ್ಟು ದೊಡ್ಡ ಕ್ರಾಂತಿಕಾರಿ. ಆದರೆ ಭಿನ್ನಾಭಿಪ್ರಾಯವನ್ನು ಮನ್ನಿಸುವ ಈ ಮಹೋನ್ನತ ಚೆಲುವನ್ನು ನೋಡಿ.

ಕ್ರಾಂತಿಕಾರಿಗಳನ್ನು, ಅಂದಿನ ಕೆಲವು ಸ್ವಾತಂತ್ರ್ಯ ಹೋರಾಟಗಾರರು, ಹಿಂಸೆಯ ಪ್ರತಿಪಾದಕರೆಂದು ಹೇಳುತ್ತಿದ್ದರು. ಆದರೆ ದಾಸ್ ಅವರ ಪದ್ಯದ ಸಾಲುಗಳು ಬೇರೆಯದನ್ನೇ ಹೇಳುತ್ತವೆ.

"ಕ್ರೌರ್ಯದ ಮುಖವಾಡವಿರಲಿ ಅಗತ್ಯವಾದಾಗ,
ಹೂ ಹೃದಯ ಸರ್ವದ ನಿನ್ನದಾಗಿರಲಿ, ಬುಸುಗುಟ್ಟು, ಆದರೆ ಕಚ್ಚದಿರು
ಹೊರಗೆ ಹೋರಾಟವಿರೆ ಇರಲಿ ಹೃದಯದೊಳು ಪ್ರೀತಿ'

ಈ ಸಾಲುಗಳನ್ನು ಭಗತ್ ಉದಾಹರಿಸಿ ಹೇಳುತ್ತಾರೆ "ಕ್ರಾಂತಿಕಾರಿಗಳೆಂದರೆ ರಕ್ತಪಿಪಾಸುಗಳೆಂದು, ವಿನಾಶದಲ್ಲಿ ಆನಂದವನ್ನು ಕಂಡುಕೊಳ್ಳುವವರೆಂದು ಅರ್ಥವಲ್ಲ" ಎಂದು.

ರಾಮ್ ಶರಣ್, ಕೃತಿಯಲ್ಲಿ ಧರ್ಮಗಳ ನಂಬಿಕೆ ಕುರಿತ ಸಮಸ್ಯೆಯನ್ನು ಪ್ರಸ್ತಾಪಿಸಿ, ಅವುಗಳನ್ನು ಹೊಂದಾಣಿಕೆ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಭಗತ್ ಸಿಂಗ್ ಸ್ಪಷ್ಟವಾಗಿ ಹೇಳುತ್ತಾರೆ "ಧರ್ಮವು ಜನ ಸಮುದಾಯಗಳಿಗೆ ಅಫೀಮು ಇದ್ದಂತೆ ಎಂಬ ಒಂದೇ ವಾಕ್ಯದಲ್ಲಿ ಹೇಳಿ ಇಂತಹ ಸಮಸ್ಯೆಗಳನ್ನು ನಾನು ತಿರಸ್ಕರಿಸಿ ಬಿಡುತ್ತಿದ್ದೆ" ಎಂದು.

ರಾಮ್ ಶರಣ್, ಕೃತಿಯಲ್ಲಿ ಒಂದು ಸ್ವಪ್ನಲೋಕವನ್ನು ಸೃಷ್ಟಿಸಿದ್ದಾರೆ. ತಾವು ವೈಜ್ಞಾನಿಕವಾಗಿ ಬರೆದಿರುವೆ ಎಂದು ಎಲ್ಲೂ ತೋರ್ಪಡಿಸಿಕೊಂಡಿಲ್ಲ ಎಂಬುದನ್ನು ಮುನ್ನುಡಿಕಾರರು ಗುರುತಿಸಿದ್ದಾರೆ. ಆದರೆ ಚಳುವಳಿಗೆ ಅಗತ್ಯವಾದ ವೈಜ್ಞಾನಿಕ ದೃಷ್ಟಿಕೋನವನ್ನು ಒಳಗೊಂಡಿದ್ದರೆ ಕೃತಿ ಉಪಯುಕ್ತವಾಗುತ್ತಿತ್ತು ಎಂಬ ಅಭಿಪ್ರಾಯವನ್ನು ತಾಳುತ್ತಾರೆ. ಆದರೆ "ಲೇಖಕರ ಧೋರಣೆಯು ಪ್ರಸಕ್ತ (ಅಂದಿನ) ಸಮಾಜದ ಧೋರಣೆಗಳಿಂದ ಸಂಪೂರ್ಣವಾಗಿ ದೂರವಿದೆಯೆಂದು ಹೇಳಲಾರೆ" ಅನ್ನುತ್ತಾರೆ. ಮುಂದುವರೆದು ಕೃತಿಯಲ್ಲಿ ಅಭಿವ್ಯಕ್ತಿ ವಿಧಾನವು ಒರಟಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತಾ, "ಇಷ್ಟೆಲ್ಲಾ ನ್ಯೂನ್ಯತೆಗಳು ಇದ್ದರೂ ಒಟ್ಟು ಪ್ರಶ್ನೆಯನ್ನು ಕುರಿತು ಕವಿಯು ಸುಂದರವಾದ ಕಲ್ಪನೆಯನ್ನು ನಮ್ಮ ಮುಂದಿರಿಸಿದ್ದಾರೆ" ಎಂದು ಬೆನ್ನು ತಟ್ಟಿದ್ದಾರೆ.

ಮುಂದಿನ ಅಧ್ಯಾಯಗಳಲ್ಲಿ ಬರುವ ರಾಮ್ ಶರಣರ ಹಲವಾರು ಸಾಮಾಜಿಕ ರಾಜಕೀಯ ಒಲವು ನಿಲುವುಗಳ ಬಗ್ಗೆ ಭಗತ್ ಸಿಂಗ್ ಚರ್ಚಿಸುತ್ತಾರೆ. ತಮ್ಮ ನಿಖರ ಭಿನ್ನ ಅಭಿಪ್ರಾಯಗಳನ್ನು ಅಗತ್ಯವೆನಿಸಿದೆಡೆ ಮಂಡಿಸಿದ್ದಾರೆ.

ಉದಾಹರಣೆಗೆ ಕವಿಯು, "ಬೌದ್ಧಿಕ ಕೆಲಸಗಳನ್ನು ಮಾಡುವವರು ಕಡ್ಡಾಯವಾಗಿ ಪ್ರತಿ ದಿವಸ ನಾಲ್ಕು ಗಂಟೆಗಳ ಕಾಲ ದೈಹಿಕ ಶ್ರಮವನ್ನು ಮಾಡಬೇಕು" ಎನ್ನುತ್ತಾರೆ. ಆದರೆ ಭಗತ್ ಸಿಂಗ್ ದೈಹಿಕ ಶ್ರಮದಂತೆಯೇ ಬೌದ್ಧಿಕ ಶ್ರಮವು ಉತ್ಪಾದನಾ ಮೌಲ್ಯವನ್ನು ಹೊಂದಿದೆ ಎಂದು ಗುರುತಿಸುತ್ತಾರೆ. ಅಪರಾಧವನ್ನು ಕುರಿತು ಬರೆಯುವಾಗ ರಾಮ್ ಶರಣ್ ಅವರು ಸೆರೆಮನೆಗೆ ಸಂಬಂಧಪಟ್ಟ ಪರಿಭಾಷೆಗಳನ್ನು ಸಹಜವಾಗಿ ಅನುಭವದಿಂದ ಉಪಯೋಗಿಸುತ್ತಾರೆ. ಸೆರೆಮನೆಗಳು ಸುಧಾರಣಾ ಸ್ಥಳಗಳಾಗಬೇಕೆ ಹೊರತು ನರಕಗಳೆನಿಸಿಕೊಳ್ಳಬಾರದು ಎಂದೂ ಹೇಳುತ್ತಾರೆ. ಯುದ್ಧದ ಬಗ್ಗೆಯೂ ಚರ್ಚಿಸುತ್ತಾರೆ.

ಯುದ್ಧಗಳ ಬಗ್ಗೆ ಭಗತ್ ಸಿಂಗರ ಮಾತುಗಳನ್ನು ಕೇಳಿ. "ನನ್ನ ಸ್ವಂತ ಅಭಿಪ್ರಾಯದಲ್ಲಿ ಯುದ್ಧವೆನ್ನುವ ಸಾಧನವು ಭವಿಷ್ಯದಲ್ಲಿ ಕೇವಲ ವಿಶ್ವಕೋಶದ ಕೆಲವು ಪುಟಗಳನ್ನು ಆವರಿಸುವಂತಹದು ಮತ್ತು ಯುದ್ಧ ಸಾಮಗ್ರಿಗಳು, ವಸ್ತು ಸಂಗ್ರಹಾಲಯಗಳನ್ನು ಅಲಂಕರಿಸುವಂತಹವು. ಏಕೆಂದರೆ ಭವಿಷ್ಯದ ಸಮಾಜದಲ್ಲಿ ಯುದ್ಧಕ್ಕೆ ಕಾರಣವಾಗುವಂತಹ ವಿರೋಧಾತ್ಮಕ ಅಥವಾ ವಿಭಿನ್ನ ಆಸಕ್ತಿಗಳೇ ಇರುವುದಿಲ್ಲ".

ದುರಂತವೆಂದರೆ, ಈಗ ಭಗತ್ ಸಿಂಗರ ಕನಸು ನುಚ್ಚು ನೂರಾಗಿದೆ. ಅವರ ಸ್ವಪ್ನಲೋಕದ ಸೋವಿಯತ್ ಯೂನಿಯನ್, ಇವರಂತಹ ಆದರ್ಶವಾದಿಗಳ ಬಯಕೆಯಂತೆ ಬೆಳೆಯಲಿಲ್ಲ. ಸ್ವಾರ್ಥ, ಕುತ್ಸಿತ ರಾಜಕೀಯಗಳು, ದಮನಕಾರಿ ಆಡಳಿತ, ಸರ್ವಾಧಿಕಾರತ್ವ, ಆಂತರಿಕ ಕಲಹ, ವಿರೋಧಾಭಾಸಗಳು, ವಿರೋಧಗಳಿಂದ ಆತ್ಮಹತ್ಯೆ ಮಾಡಿಕೊಂಡಿತು. ಸತ್ತು ನೂರು ವರ್ಷಗಳ ನಂತರ ಭಗತ್ ಸಿಂಗ್ ಮರಳಿದರೆ "ಓ ನಮ್ಮ ಕನಸು ಹೀಗೆ ಹಾಳಾಯಿತು" ಎಂದು ಪರಿತಪಿಸುತ್ತಿದ್ದರೇನೋ.

ಭಗತ್ ಸಿಂಗರ ಮುನ್ನುಡಿಯ ಕೊನೆಯ ಎರಡು ಪ್ಯಾರಾಗಳನ್ನು ನಾನು ಹಾಗೆಯೇ ಹೇಳಬಯಸುತ್ತೇನೆ.
"ನಾನು ಈ ಪುಸ್ತಕವನ್ನು ಸುಧೀರ್ಘವಾಗಿ ಚರ್ಚಿಸಿದ್ದೇನೆ. ಚರ್ಚೆ ಎನ್ನುವುದಕ್ಕಿಂತ ಹೆಚ್ಚಾಗಿ ಟೀಕಿಸಿದ್ದೇನೆ. ಆದರೆ ಪುಸ್ತಕದಲ್ಲಿ ಯಾವ ಬದಲಾವಣೆಗಾಗಿಯೂ ನಾನು ಒತ್ತಾಯ ಮಾಡುವುದಿಲ್ಲ. ಏಕೆಂದರೆ ಇದಕ್ಕೆ ಚಾರಿತ್ರಿಕವಾದ ಒಂದು ಮೌಲ್ಯವಿದೆ. ಇದರಲ್ಲಿ 1914-15 ರ ಕಾಲದ ಕ್ರಾಂತಿಕಾರಿಗಳ ಅಭಿಪ್ರಾಯವನ್ನು ನಾವು ಕಾಣಬಹುದು".

"ಈ ಪುಸ್ತಕವನ್ನು ನಾನು ವಿಶೇಷವಾಗಿ ಯುವಕರಿಗೆ ಶಿಫಾರಸ್ಸು ಮಾಡುತ್ತೇನೆ. ಆದರೆ ಒಂದು ಎಚ್ಚರಿಕೆಯ ಮಾತಿದೆ. ಕುರುಡಾಗಿ ಅನುಸರಿಸುವ ಉದ್ದೇಶದಿಂದ ಇದನ್ನು ಓದಬೇಡಿ ಮತ್ತು ಇದರಲ್ಲಿ ಬರೆದಿರುವುದನ್ನೆಲ್ಲ ಪ್ರಶ್ನಾತೀತವೆಂದು ಹಾಗೆಯೆ ಸ್ವೀಕರಿಸಬೇಡಿ. ಇದನ್ನು ಓದಿರಿ ಹಾಗೂ ಚಿಂತಿಸಿರಿ ಅನಂತರ ಅದರ ನೆರವಿನಿಂದ ನಿಮ್ಮದೇ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಿ"

ನಮಸ್ಕಾರಗಳು ಸಂಗಾತಿ ಭಗತ್ ಸಿಂಗ್ ಅವರೆ. ಎಂತಹ ಅದ್ಭುತವಾದ ದಾರಿದೀಪವಾಗುವ ಚಿಂತನೆಯ ನುಡಿಗಳು. ಮನಮಿಡಿಯುವ ಮುನ್ನುಡಿ. ನೀವು ರಾಜಕೀಯ ಮುತ್ಸದ್ಧಿ. ತಾಯಿ ಹೃದಯದ ಕ್ರಾಂತಿಕಾರಿ, ನಿಸ್ವಾರ್ಥ ದೇಶಪ್ರೇಮಿ.

ಭಗತ್ ಸಿಂಗ್.. ಬದುಕಿ.. ಬಾಳಿದ್ದರೆ ನಮ್ಮ ನಾಡು ಹೇಗಿರುತ್ತಿತ್ತು... ಅಂತ ನಿಮಗೆ ಈಗ ಅನ್ನಿಸುವುದಿಲ್ಲವೇ. ಹೇಳಿ.

(ಕೃತಿಋಣ; ಭಗತ್ ಸಿಂಗರ "ನಾನೇಕೆ ನಾಸ್ತಿಕ" ಕೃತಿ, ಅನುವಾದ: ಎನ್ ಗಾಯತ್ರಿ, ಪ್ರಕಾಶಕರು; ನವ ಕರ್ನಾಟಕ ಪ್ರಕಾಶನ)

***

ಬಹುಮುಖ ಪ್ರತಿಭೆಯ ಉದಯ ಜಾದೂಗಾರ್

– ಎಂ.ಜಿ. ವೆಂಕಟೇಶ ಮೂರ್ತಿ

ಮೋಡಿ, ಕಣ್ಕಟ್ಟು, ಯಕ್ಷಿಣಿ, ಇಂದ್ರಜಾಲ - ಮುಂತಾಗಿ ಏನೇ ಕರೆದರೂ, ಇದೊಂದು ಕಲೆ. ಈ ಕಲೆಯಲ್ಲಿ ಪಳಗಿದವರಿಗೆ, ಮಾಟಗಾರ, ಮಾಂತ್ರಿಕ, ಗಾರುಡಿಗ, ಯಕ್ಷಿಣಿಗಾರ ಎಂದೆಲ್ಲಾ ಹೆಸರುಂಟು.. ಹೀಗೆ ಈ ಕಲೆಯಲ್ಲಿ ಪ್ರಸಿದ್ಧರೆನಿಸಿರುವವರು ಉದಯ ಜಾದೂಗಾರ್ ಎಂಬ ಅಪ್ಪಟ ಕನ್ನಡಿಗ.

ಉದಯ ಜಾದೂಗಾರ್ ಅವರು ಜನಿಸಿದುದು ೨೯-೯-೧೯೫೭ ರಂದು. ಎಸ್. ಎಸ್. ಎಲ್. ಸಿ ಓದುತ್ತಿದ್ದಾಗ ಶಾಲೆಯಲ್ಲಿ ಒಮ್ಮೆ ಜಾದೂ ಪ್ರದರ್ಶನ ವೀಕ್ಷಿಸಿದ್ದ ಉದಯ್ ಅವರು ಜಾದೂಕಲೆಯಲ್ಲಿ ಅತ್ಯಂತ ಆಸಕ್ತಿ ತಳೆದರು. ಜಾದುವನ್ನು ಹವ್ಯಾಸವನ್ನಾಗಿ ಮಾಡಿಕೊಂಡಿದ್ದ ತಮ್ಮ ತಂದೆಯವರಿಂದ ಸ್ವಲ್ಪ ಸ್ವಲ್ಪವಾಗಿ ಈ ಕಲೆಯನ್ನು ಕಲಿತರು. ಸತತ ಪ್ರಯತ್ನದಿಂದ ಈ ಕಲೆಯಲ್ಲಿ ಪರಿಣತಿ ಪಡೆದ ಉದಯ್ ಅವರು ಪ್ರದರ್ಶನ ನೀಡತೊಡಗಿದರು. ಇವರ ಜಾದೂ ಪ್ರದರ್ಶನ ಅಪಾರ ಜನಮನ್ನಣೆ ಗಳಿಸಿತು. ಮೊದಲನೆ ಬಿ.ಕಾಮ್ ವರೆಗೆ ಓದಿದ್ದು, ಓದಿನ ಅನಾಸಕ್ತಿಯಿಂದಾಗಿ ಮುಂದೆ ಓದಲು ಇಚ್ಛಿಸದೆ, ಜಾದೂಗಾರನಾಗಿ ಮುಂದುವರೆದರು. ಅಪಾರ ಸಾಧನೆ ಮಾಡಿದರು. ಹಿಡಿದ ಕೆಲಸವನ್ನು ಸಾಧಿಸಬೇಕೆಂಬ ಗುರಿಯಿಂದ, ಸಾಧಿಸುತ್ತೇನೆ ಎಂಬ ಛಲದಿಂದ ಯಕ್ಷಿಣಿ ವಿದ್ಯೆಯಲ್ಲಿ ಅಪಾರ ಯಶಸ್ಸು ಕಂಡವರು ಇವರು. ಬರಿಯ ಯಕ್ಷಿಣಿ ಮಾತ್ರವಲ್ಲದೆ, ಮಾತಾಡುವ ಬೊಂಬೆಯ ಮೂಲಕ ಮತ್ತೊಂದು ಕಲೆಯ ಹುಟ್ಟಿಗೆ ಕಾರಣರಾದರು. ಬಹುಮುಖ ಪ್ರತಿಭೆಯ ಕಲಾವಿದ ಎನಿಸಿರುವ ಉದಯ್ ಅವರು ಇದುವರೆಗೂ ೧೦,೦೦೦ ಕ್ಕೂ ಹೆಚ್ಚಿನ ಜಾದೂ_ಪ್ರದರ್ಶನವನ್ನು ದೇಶ-ವಿದೇಶಗಳಲ್ಲಿ ನೀಡಿದ್ದಾರೆ. ಇವರ ಕಾರ್ಯಕ್ರಮಗಳು ಪ್ರಪಂಚದಾದ್ಯಂತ ಎಲ್ಲ ವರ್ಗದ ಜನರ, ಎಲ್ಲ ಭಾಷಿಗರ ಹಾಗೂ ಎಲ್ಲ ಸಮುದಾಯದ ಜನರನ್ನು ಆಕರ್ಷಿಸಿದೆ. ಇವರ ಈ ಕಲೆಗೆ ದೇಶ-ವಿದೇಶಗಳಿಂದ ಪ್ರಶಂಸೆಗಳು, ಸನ್ಮಾನಗಳು ದೊರಕಿ ಇವರ ಕೀರ್ತಿಯನ್ನು ಹೆಚ್ಚಿಸಿವೆ. ಅನೇಕ ದೂರದರ್ಶನ ವಾಹಿನಿಗಳಲ್ಲಿ ಇವರ ಜಾದೂ ಪ್ರದರ್ಶನಗೊಂಡು ವಿಶ್ವ ವ್ಯಾಪಿ ಪ್ರೇಕ್ಷಕರನ್ನು ಚಕಿತಗೊಳಿಸಿದೆ ಬಾಲ್ಯದಿಂದಲೂ ಯಕ್ಷಿಣಿ ಕಲೆಗೆ. ಆಕರ್ಷಿತರಾಗಿದ್ದ ಉದಯ್ ಜಾದೂಗಾರ್ ಅವರು ವಿಶ್ವದ ಅನೇಕ ಹಿರಿಯ ಜಾದೂಗಾರರಿಂದ ಮ್ಯಾಜಿಕ್ ಕಲಿತಿರುವರಾದರೂ ತಾವು ನೀಡುತ್ತಿರುವ ಪ್ರದರ್ಶನಗಳಲ್ಲಿ ಯಾರೊಬ್ಬರನ್ನೂ ಅನುಕರಿಸದೆ ಎಚ್ಚರ ವಹಿಸಿದ್ದಾರೆ. ಹಲವಾರು ಪ್ರದರ್ಶನಗಳು ಇವರ ಸ್ವಂತಿಕೆಯನ್ನು ವ್ಯಕ್ತಪಡಿಸುತ್ತವೆ. ಮಾತಾಡುವ ಗೊಂಬೆಯಾಗಲೀ, ನೆರಳು-ಬೆಳಕಿನ ಪ್ರದರ್ಶನವಾಗಲೀ ಗೌಪ್ಯತೆಯಿಂದ ಮನರಂಜನೆಯನ್ನು ಒಳಗೊಂಡಿರುತ್ತದೆ

ಅಂತರಾಷ್ಟ್ರೀಯ ಖ್ಯಾತಿಯ ಉದಯ ಜಾದೂಗಾರ್ ಅವರದು ಬಹುಮುಖ ಪ್ರತಿಭೆ. ಇವುಗಳನ್ನು ಈ ಕೆಳಗಿನಂತೆ ಉದಹರಿಸಬಹುದು.

- ಉದಯ್ ಒಬ್ಬ ಜಾದೂಗರ
- ಅಪ್ರತಿಮಾ ಬರಹಗಾರ
- ಉತ್ತಮ ಛಾಯಾಗ್ರಾಹಕ
- ದೂರದರ್ಶನದ ಧಾರಾವಾಹಿಗಳಲ್ಲಿ ಪಾತ್ರಧಾರ
- ಉತ್ತಮ ಕಲಾವಿದ
- ಸಮಾಜ ಸೇವಕ
- ಕಥೆಗಾರ
- ನಿರ್ದೇಶಕ.

ಜನಪ್ರಿಯ ಧಾರಾವಾಹಿಯಾದ ಈಶ್ವರ ಅಲ್ಲಾ ನೀನೇ ಎಲ್ಲಾ ದಲ್ಲಿನ ಗುರು ಗೋವಿಂದ ಭಟ್ಟನ ಪಾತ್ರದಲ್ಲಿ ಉದಯ್ ಜಾದೂಗಾರ್ ಅವರ ಅಭಿನಯ ಕನ್ನಡ ಪ್ರೇಕ್ಷಕರ ಮನ ಗೆದ್ದಿದೆ .

ಮ್ಯಾಜಿಕ್ ಸಂಬಂಧದ ಅನೇಕ ವಸ್ತುಗಳ ತಯಾರಿಕೆಯ ಬಹು ದೊಡ್ಡ ತಯಾರಿಕಾ ಸಂಸ್ಥೆಯನ್ನು ಬೆಂಗಳೂರಿನ ಬ್ಯಾಟರಾಯನಪುರದಲ್ಲಿ ಸ್ಥಾಪಿಸಿರುವ ಉದಯ್ ಜಾದೂಗಾರ್ ಅನೇಕ ವಸ್ತುಗಳನ್ನು ತಯಾರಿಸಿ ಭಾರತ ಮತ್ತು ವಿದೇಶಗಳಿಗೆ ಸರಬರಾಜು ಮಾಡಿ ಖ್ಯಾತಿ ಗಳಿಸಿದ್ದಾರೆ. ಪುಣೆ ಮತ್ತು ನ್ಯೂಯಾರ್ಕ್ ಚಲನ ಚಿತ್ರಸಂಸ್ಥೆಗಳಲ್ಲಿ ತರಬೇತಿ ಪಡೆದು ಯುದ್ಧ ಮತ್ತು ಸ್ವಾತಂತ್ರ್ಯ ಚಿತ್ರ ನಿರ್ಮಿಸಿದ್ದಾರೆ. 'ದರೋಡೆ' ಎನ್ನುವ ವಾಣಿಜ್ಯ ಚಿತ್ರವನ್ನು ನಿರ್ದೇಶಿಸಿದ್ದಾರೆ.

.

ಬರಹಗಾರರಾಗಿಯೂ ಸಹ ಉದಯ್ ಅವರು ಖ್ಯಾತಿ ಗಳಿಸಿದ್ದಾರೆ. ಅವರು ಪ್ರಕಟಿಸಿರುವ ಪುಸ್ತಕಗಳೆಂದರೆ:

- ನನ್ನ ಮೆಚ್ಚಿನ ಜೋಕುಗಳು
- ಹಣ-ಋಣ-ಮನ
- ನೆಮ್ಮದಿಯ ಬದುಕಿಗೆ ದಾರಿ ದೀಪ
- ಮನಶ್ಶಾಂತಿ ಗಳಿಸುವುದು ಹೇಗೆ

ಇವುಗಳ ಜೊತೆಗೆ ಹಲವಾರು ಪತ್ರಿಕೆಗಳಲ್ಲಿ, ಅಂಕಣಕಾರರಾಗಿ, ಛಾಯಾ ಚಿತ್ರಕಾರರಾಗಿಯೂ ಸಹ ಜನಪ್ರಿಯತೆ ಗಳಿಸಿರುವ ಸಾಧಕ. ತಾವು ಬರೆದು ಪ್ರಕಟಿಸಿರುವ ಕೃತಿಗಳು ಕಡಿಮೆ ಬೆಲೆಯಲ್ಲಿ ಓದುಗರಿಗೆ ದೊರಕುವಂತೆ ಮಾಡಿರುವುದು ಶ್ಲಾಘನೀಯ. ಬಹುತೇಕ ಪುಸ್ತಕಗಳನ್ನು 'ನವಕರ್ನಾಟಕ ಪಬ್ಲಿಕೇಷನ್ಸ್' ಅವರು ಪ್ರಕಟಿಸಿರುವ ಪ್ರತಿ ಪುಸ್ತಕಗಳೂ ೫೦/- ರೂಪಾಯಿಗಳಿಗೂ ಕಡಿಮೆ ಬೆಲೆಯಲ್ಲಿ ಓದುಗರಿಗೆ ದೊರೆಯಹುತ್ತದೆ.

ವೃದ್ಧಾಶ್ರಮ ಅಂಗ ವಿಕಲರ ಸಂಸ್ಥೆ /ಮಾನಸಿಕ ಅಸ್ವಸ್ಥರಿಗಾಗಿ ಉದಯ ಜಾದೂಗಾರ್ ಅವರು ಉಚಿತ ಪ್ರದರ್ಶನ ನೀಡುವ ಮೂಲಕ ತಮಗಿರುವ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ತಾವು ಕಲಿತ ವಿದ್ಯೆಯನ್ನು ಕಲಿಯಲು ಆಸಕ್ತಿಯಿರುವ ಹಲವು ಮಂದಿಗಳೊಂದಿಗೆ ಹಂಚಿಕೊಳ್ಳುವ ಉದಾತ್ತ ಧ್ಯೇಯವನ್ನು ಅಭಿವ್ಯಕ್ತಿಸುವ ವ್ಯಕ್ತಿ ನಮ್ಮ ಹೆಮ್ಮೆಯ ಕನ್ನಡಿಗ ಉದಯ್ ಜಾದೂಗಾರ್. ಅವರಿಗೆ ಶುಭ ಕೋರೋಣ.

***

ಸಾಹಿತ್ಯ ದಾಸೋಹ 224
ಅಧ್ಯಕ್ಷೀಯ ನುಡಿಗಳು

– ಎಂ.ಜಿ. ವೆಂಕಟೇಶ ಮೂರ್ತಿ

ದಿನಾಂಕ 14.04.2024ರಂದು ನಡೆದ 224ನೇ ಸಾಹಿತ್ಯ ದಾಸೋಹದ ಅಧ್ಯಕ್ಷನಾಗಿ ನನ್ನನ್ನು ಆಯ್ಕೆ ಮಾಡಿದ ಸಂಚಾಲಕರಿಗೆ ವಂದನೆಗಳು. ಕಾರ್ಯಕ್ರಮದ ಶುಭಾರಂಭದಲ್ಲಿ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ. ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಿಂದ ಶುಭ ಕೋರಿದರು. ಸಂಚಾಲಕ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರನ್ನು ಸ್ವಾಗತಿಸಿದರು. ನಮ್ಮೆಲ್ಲರ ನೆಚ್ಚಿನ ಮಿತ್ರ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ನನ್ನ ಪರಿಚಯ ಮಾಡಿಕೊಡುತ್ತ ನನ್ನ ಬಗ್ಗೆ ನುಡಿದ ನಾಲ್ಕಾರು ಮಾತುಗಳಿಂದ ನಾನು ವಿಸ್ಮಯನಾಗಿದ್ದೇನೆ. ಅವರ ಅಭಿಮಾನದ ನುಡಿಗಳಿಗೆ ಕರ ಜೋಡಿಸುತ್ತೇನೆ.

ಇಂದಿನ ಸಾಹಿತ್ಯ ದಾಸೋಹದಲ್ಲಿ ಒಟ್ಟು 15 ಲೇಖಕರು ಭಾಗವಹಿಸಿ ಪ್ರಸ್ತುತಪಡಿಸಿದ ಒಟ್ಟು ಬರೆಹಗಳ ಸಂಖ್ಯೆ 16. ಇವುಗಳಲ್ಲಿ 1 ಕಥೆ, 2 ವಿಶೇಷ ಲೇಖನ, 3 ಲಲಿತ ಪ್ರಬಂಧ, 5 ಕವನ, 2 ಪ್ರವಾಸ ಕಥನ, 1 ವಿಭಿನ್ನ ಲೇಖನ, 1 ಪರಿಚಯ ಲೇಖನ ಸೇರಿವೆ. ಇವುಗಳ ಬಗ್ಗೆ ನನ್ನ ಅನಿಸಿಕೆಗಳು ಈ ಕೆಳಕಂಡಂತಿವೆ.

1. ಶ್ರೀ ಗಣಪತಿ ಹೆಗ್ಗಡೆ – 'ಅಂಶೀ ಛಂದಸ್ಸು'

ಶ್ರೀ ಗಣಪತಿ ಹೆಗ್ಗಡೆ ಅವರು. ಇಂದಿನ ಸಾಹಿತ್ಯ ದಾಸೋಹದಲ್ಲಿ ಗದ್ಯ-ಪದ್ಯ-ಕಾವ್ಯಗಳ ವೈವಿಧ್ಯತೆಗಳನ್ನು ಗುರುತಿಸಿದ್ದಾರೆ. ಪದ್ಯ ಅಥವಾ ಕಾವ್ಯ ರಚನೆಯಲ್ಲಿ ಛಂದಸ್ಸಿನ ಪ್ರಾಮುಖ್ಯತೆ, ಪ್ರಾಸ, ಯತಿ, ಗಣ ಎಂಬ ಮೂರು ವಿಧದ ಕ್ರಮ ಬದ್ಧತೆ – ಇವುಗಳ ಬಳಕೆಯ ವಿಧಾನ ಮತ್ತು ಅವಶ್ಯಕತೆ ಮೊದಲಾದ ವಿಷಯಗಳ ಬಗೆಗೆ ಬೆಳಕು ಚೆಲ್ಲಿರುತ್ತಾರೆ. ಕೆಲವೊಂದು ಉದಾಹರಣೆಗಳ ಸಹಿತ ತಮ್ಮ ಲೇಖನಕ್ಕೆ ಜೀವಕಳೆ ತುಂಬಿದ್ದಾರೆ.

2. ಶ್ರೀ ಹು.ವಾ.ಶ್ರೀಪ್ರಕಾಶ್ – 'ಸೋಮಾರಿತನವೆಂಬ ಶತೃ'

ನಮ್ಮ ವೇದಿಕೆಯ ಯಾವುದೇ ಕಾರ್ಯಕ್ರಮವಾಗಿರಲಿ, ಕ್ಷಣಮಾತ್ರದಲ್ಲಿ ವರದಿ ಮಾಡುವ ಪ್ರತಿಭಾವಂತ ಶ್ರೀ ಹು.ವಾ. ಶ್ರೀಪ್ರಕಾಶ್ ಅವರು. ಯಕ್ಷಗಾನ. ನಾಟಕ, ಕವಿತಾ ರಚನೆ, ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಅಪಾರ ಆಸಕ್ತಿ ಉಳ್ಳವರು. ಕೆಲವು ಬರೆಹಗಳ ಸಂಕಲನ ಮಾಡಿರುವ ಇವರು ಇಂದಿನ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿರುವ ತಮ್ಮ 'ನೆನಪಿನಂಗಳದಿಂದ' ಪುಸ್ತಕ ಪರಿಚಯ ಮಾಡಿಕೊಡುತ್ತ, ಆಯ್ದ ಕೆಲವು ಹಾಸ್ಯ ಪ್ರಸಂಗಗಳನ್ನು ಓದಿದರು. 'ಸೋಮಾರಿತನವೆ ಶತ್ರು' ಎಂಬ ಶೀರ್ಷಿಕೆಯ ಲೇಖನದಲ್ಲಿ, ಮಲೆನಾಡಿನಲ್ಲಿ ಬಾಲ್ಯವನ್ನು ಕಳೆದು, ಅವಿಭಕ್ತ ಕುಟುಂಬದಲ್ಲಿ ಬೆಳೆದ ಶ್ರೀಪ್ರಕಾಶ್ ಅವರು ತಮ್ಮ ಕುಟುಂಬದಲ್ಲೊಬ್ಬರಾದ ಚಿಕ್ಕಪ್ಪನವರನ್ನು ಕೇಂದ್ರೀಕರಿಸಿಕೊಂಡು, ಅವರ ಚಟುವಟಿಕೆಗಳನ್ನು, ನಡವಳಿಕೆಗಳನ್ನು ಕುಟುಂಬದ ಇತರರೊಂದಿಗೆ, ಮುಂದಿನ ತಲೆಮಾರಿನವರಿಗೆ, ಸ್ನೇಹಿತ ರೊಂದಿಗೆ ಹಂಚಿಕೊಳ್ಳುತ್ತಿರುವ ಪ್ರಕಾಶ್ ಅವರ ಈ ಲೇಖನ ಎಲ್ಲರಿಗೂ ಹಿತ-ಮಿತವಾಗಿದೆ ಎನ್ನುವುದು ನನ್ನ ಅನಿಸಿಕೆ.

3. ಶ್ರೀಮತಿ ರೇಣುಕಾ ದೇಸಾಯಿ – ವೆಂಕಿ ಅಂತಾಳ!!!

ಸಾಹಿತ್ಯಾಸಕ್ತಿ ಹೊಂದಿರುವ, ಉದಯೋನ್ಮುಖ ಲೇಖಕಿ ಎನಿಸಿರುವ ಶ್ರೀಮತಿ ರೇಣುಕಾ ದೇಸಾಯಿ ಅವರು ಮಂಡಿಸಿದ ಲೇಖನದ ಶೀರ್ಷಿಕೆ 'ವೆಂಕಿ ಅಂತಾಳ'. ಶೀರ್ಷಿಕೆಯೇ ಆಕರ್ಷಕವಾಗಿರುವಾಗ ಇಡೀ ಲೇಖನ ಹೇಗಿರುತ್ತದೆ ಎನ್ನುವುದೇ ಕುತೂಹಲ. ನೈಜ ಸನ್ನಿವೇಶವೊಂದನ್ನು

ಎಂ.ಜಿ. ವೆಂಕಟೇಶ ಮೂರ್ತಿ

ಬಹುಮುಖ ಪ್ರತಿಭೆಯ ಶ್ರೀ ಎಂ.ಜಿ.ವೆಂಕಟೇಶ ಮೂರ್ತಿಯವರು ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಅಧಿಕಾರಿ. ಇವರು ಬ್ಯಾಂಕಿನ ಅಧಿಕೃತ ಭಾಷಾ ಇಲಾಖೆಯಲ್ಲಿ ಕನ್ನಡ ಭಾಷಾಧಿಕಾರಿಯಾಗಿ 1993ರಿಂದ 2006ರ ತನಕ 14 ವರ್ಷ ಕಾಲ ನಡೆಸಿದ ಕನ್ನಡಪರ ಚಟುವಟಿಕೆಗಳು ಬ್ಯಾಂಕಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹವು. ಭಾಷಾ ಇಲಾಖೆಯಿಂದ ಬ್ಯಾಂಕಿನ ವಿವಿಧ ಸಿಬ್ಬಂದಿ ತರಬೇತಿ ಕೇಂದ್ರಗಳಲ್ಲಿ ಸುಮಾರು 32 ಕನ್ನಡ ಕಾರ್ಯಾತ್ಮಕ ಕಮ್ಮಟಗಳ ಏರ್ಪಾಟು, ಶಿವರಾಮ ಕಾರಂತ, ಕುವೆಂಪು, ಡಿವಿಜಿ, ಅನಕೃ, ಮಾಸ್ತಿ, ಗಂಗೂಬಾಯಿ ಹಾನಗಲ್ ಮುಂತಾದವರ ಬಗ್ಗೆ ಕಿರು ಹೊತ್ತಿಗೆಗಳ ಪ್ರಕಟಣೆ, ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ನಾಡಿನ ಹಿರಿಯರಿಗೆ ಸನ್ಮಾನ, ಸಿಬ್ಬಂದಿಗಳಿಗೆ ವಿವಿಧ ಸ್ಪರ್ಧೆಗಳು, ಪ್ರತಿಭಾ ಪುರಸ್ಕಾರ, ಕನ್ನಡ ಬಾರದವರಿಗೆ ಕನ್ನಡ ಕಲಿಕೆ ತರಗತಿಗಳ ಆಯೋಜನೆ – ಹೀಗೆ ಸದಾ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾ, ಬ್ಯಾಂಕಿನ ಅಧಿಕೃತ ಭಾಷಾ ಇಲಾಖೆಯಲ್ಲಿ ತಮ್ಮ ಛಾಪು ಮೂಡಿಸಿದವರು ಎಂಜಿವಿ.

ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿಗಳ ಸಂಘ (ಕರ್ನಾಟಕ)ದ ಪದಾಧಿಕಾರಿಯಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದ ಎಂ.ಜಿ.ವಿ.ಯವರು ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರಲ್ಲದೆ, ಸಂಘದ ಗೃಹ ಪತ್ರಿಕೆಯ ಸಂಪಾದಕರೂ ಆಗಿದ್ದರು.

ಈಗ ನಿವೃತ್ತಿಯ ನಂತರವೂ ಸದಾ ಸಕ್ರಿಯರಾಗಿರುವ ಇವರು ಪಿಂಚಣಿದಾರರ ಸಂಘದ ಪದಾಧಿಕಾರಿಯಾಗಿರುವರಲ್ಲದೆ, 'ಪೆನ್ಷನರ್ಸ್ ಮ್ಯೂಸಿಂಗ್ಸ್' ಎಂಬ ಆಂತರಿಕ ಮಾಸಪತ್ರಿಕೆಯ ಸಂಪಾದಕ ಮಂಡಳಿಯಲ್ಲಿಯೂ ಇದ್ದಾರೆ.

ಯಾವುದೇ ಸಂದರ್ಭವಿರಲಿ, ತಕ್ಷಣದಲ್ಲಿ ಕವನ ರಚಿಸಬಲ್ಲ ಎಂಜಿವಿ ಓರ್ವ ಆಶುಕವಿಯೂ ಹೌದು. 'ಲಲಿತವನ' ಎಂಬ ಲಲಿತ ಪ್ರಬಂಧ ಹಾಗೂ ಕವನ ಸಂಕಲನ, 'ಬ್ಯಾಂಕಿಂಗ್ ಲೋಕದ ಪ್ರತಿಭಾವಂತರು' ಕೃತಿಗಳನ್ನು ಹೊರತಂದಿರುವ ಇವರು ಸಮನ್ವಯ ಸಮಿತಿಯ ಚಟುವಟಿಕೆಗಳಲ್ಲಿ ತಪ್ಪದೇ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಾಹಿತ್ಯ ದಾಸೋಹಗಳಲ್ಲಿ ತಮ್ಮ ಪ್ರಬಂಧ, ಕವನಗಳನ್ನು ಮಂಡಿಸುತ್ತಾ ಬಂದಿರುವ ಇವರು, ವ್ಯಕ್ತಿಚಿತ್ರ ರಚನೆಯಲ್ಲಿ ಸಿದ್ಧಹಸ್ತರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ ಹೊರತಂದ 'ಸಾಹಿತ್ಯ ಸಿರಿ' ಕೃತಿಯ ಸಂಪಾದಕ ಮಂಡಳಿಯಲ್ಲೂ ಎಂ.ಜಿ.ವಿ. ಮೂರ್ತಿಯವರು ಒಬ್ಬರಾಗಿದ್ದಾರೆ. **

ಒಂದು ಲೇಖನವನ್ನಾಗಿಸಿ ಒಂದು ಕುಟುಂಬದ ಮಂದಿಯ ಸಂಸಾರದ ಚಿತ್ರಣ ಇಲ್ಲಿ ತೆರೆದಿಟ್ಟಿದ್ದಾರೆ. ಬೆಂಗಳೂರಿನಿಂದ ಹುಬ್ಬಳ್ಳಿಯಲ್ಲಿನ ಬಂಧುಗಳ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಅವರ ಮನೆಯಲ್ಲಿದ್ದ ಸ್ವಲ್ಪ ಸಮಯದಲ್ಲಿಯೇ ನಡೆದ ಅದೆಷ್ಟೋ ಮಾತುಕತೆಗಳು, ಅದರ ವಿವರಣೆ, ಅದರಲ್ಲಿಯೂ ಹುಬ್ಬಳ್ಳಿ-ಧಾರವಾಡ ಭ್ಯಾಷೆಯ ಪದ-ಪುಂಜಗಳು ಲೇಖನವನ್ನು ಆಕರ್ಷಕವಾಗಿರಿಸಿವೆ. ಹರಟೆಗೆ ಒದಗಿಸುವ ಅನೇಕ ವಿಷಯಗಳು ಈ ಲೇಖನದಲ್ಲಿ ಬಂದು ಹೋಗುತ್ತವೆ. ಲೇಖಕಿ ರೇಣುಕಾ ದೇಸಾಯಿಯವರ ಈ ಲೇಖನ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

4. ಶ್ರೀ ವಿಠ್ಠಲ ಇಜೇರಿ – 'ತುಟ್ಟಿಯ ತುಟಿಗಳು'

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆಯೇ ಪ್ರಥಮ ಸಾಹಿತ್ಯ ದಾಸೋಹವನ್ನು ತಮ್ಮ ಮನೆಯಲ್ಲಿಯೇ ಆಯೋಜಿಸಿ ನಾಂದಿ ಹಾಡಿದ್ದ ಶ್ರೀ ಇಜೇರಿಯವರು ಸಸಕಸ ವೇದಿಕೆಯ ಹಿರಿಯ ಸದಸ್ಯರು. ಅಂದಿನಿಂದಲೂ ತಪ್ಪದೆ ಪ್ರತಿ ದಾಸೋಹದಲ್ಲಿಯೂ ಭಾಗವಹಿಸುತ್ತ ಬಂದಿರುವ ಇಜೇರಿಯವರು ಎಲ್ಲರಿಗೂ ಚಿರಪರಿಚಿತರು. ಇಂದಿನ ದಾಸೋಹದಲ್ಲಿ ಕಥೆಗಳ ಮಹತ್ವವನ್ನು ಪರಿಚಯಿಸುತ್ತ, ಕಥೆಗಳು ಆಬಾಲವೃದ್ಧರಾದಿಯಾಗಿ ಎಲ್ಲ ವಯೋಮಾನ ದವರಿಗೂ ಎಷ್ಟೊಂದು ಪ್ರಿಯವಾಗಿರುತ್ತದೆ ಎಂಬುದನ್ನು ತಿಳಿಸುತ್ತ ಒಂದು ಸಣ್ಣ ಕಥೆ 'ತುಟ್ಟಿಯ ತುಟಿಗಳು' ಮೂಲಕ ಪ್ರೀತಿಗೆ ಬೆಲೆಯಿಲ್ಲ ಎಂಬುದನ್ನು ಸಂದೇಶ ರೂಪದಲ್ಲಿ ತಿಳಿಸಿದ್ದಾರೆ.

5. ಶ್ರೀಮತಿ ಎಲ್.ಗಿರಿಜಾ ರಾಜ್ – 'ಶುನಕಗಳ ಜಾಲದಲ್ಲಿ'

ಶ್ರೀಮತಿ ಎಲ್. ಗಿರಿಜಾ ರಾಜ್ ಅವರು ಪ್ರಸ್ತುತ ಪಡಿಸಿರುವ ನಗೆ ಲೇಖನದ ಶೀರ್ಷಿಕೆ 'ಶುನಕಗಳ ಜಾಲದಲ್ಲಿ'. ಇಲ್ಲಿ ಲೇಖಕಿ ತಾವು ವಾಸಿಸುವ ಮನೆಯ ಪರಿಸರ, ಬೆಳೆಸುವ ಹೂಗಳನ್ನು ಬೇರೆಯವರು ಕಿತ್ತೊಯ್ಯುವುದು, ಮನೆಯಲ್ಲಿ ಒಪ್ಪ-ಓರಣ ಮಾಡುವ ಪತಿಯೊಂದಿಗೆ ಮಲಗುವ ಸಮಯದಲ್ಲಿಯೇ ಎದುರಾಗುವ ಶುನಕಗಳ ಅಬ್ಬರದ ವಿಚಾರ, ಬೀದಿ ನಾಯಿಗಳನ್ನು ಪ್ರಾಣಿ ದಯಾಸಂಘದವರು ಕೊಂಡೊಯ್ದರಾದರೂ, ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ಸ್ವಸ್ಥಾನಕ್ಕೆ ಮರಳುವುದು, ಇವೆಲ್ಲದರೊಂದಿಗೆ ಮನೆಯಲ್ಲಿ ಆಗಾಗ್ಗೆ ನಡೆಯುವ ಪ್ರೇಮ ಕಲಹ, ಮುದ್ದಣ-ಮನೋರಮೆಯರ ಸರಸ-ಸಲ್ಲಾಪಗಳನ್ನು ನೆನಪಿಸುವ ವಿಧಾನ ಶ್ಲಾಘನೀಯ.

6. ಶ್ರೀಮತಿ ಶೀಲಾ ಅರಕಲಗೂಡು – 'ಆವರಣ' (ಕವಿತೆ)

ಉತ್ತಮ ಲೇಖಕಿಯಾಗಿ ಗುರುತಿಸಿಕೊಂಡಿರುವ ಶ್ರೀಮತಿ ಶೀಲಾ ಅರಕಲಗೂಡು ಅವರು ಪ್ರಸ್ತುತಪಡಿಸಿರುವ ಕವನದ ಶೀರ್ಷಿಕೆ 'ಆವರಣ'. ಜೀವನದ ಹಲವಾರು ಪರಿಯನ್ನು ಆವರಣ ಎಂಬ ಎಲ್ಲೆಕಟ್ಟಿನಲ್ಲಿರಿಸಿ ಭಾವ ತುಂಬಿದ ಕವಿತೆ ಇದಾಗಿದೆ. ಪ್ರತಿಯೊಬ್ಬರ ಜೀವನವನ್ನು ಹಸನುಗೊಳಿಸುವ ರೀತಿ, ಆವರಣದಲ್ಲಿ ಚಿತ್ರಿತವಾಗಿದೆ. ಪರಮಾತ್ಮ ಎಲ್ಲರಿಗೂ ಕೊಟ್ಟಿರುವ ಆನಂದವನ್ನು ಅನುಭವಿಸುತ್ತ, ತಾನೂ ಬೆಳೆಯುತ್ತ, ಇತರರನ್ನೂ ಬೆಳೆಸುವ ಸದ್ಭಾವನೆಯನ್ನು ಲೇಖಕಿ ತಮ್ಮ ಕವನದ ಆವರಣದೊಳಗೆ ಹಿಡಿದಿದ್ದಾರೆ.

7, ಶ್ರೀಮತಿ ಪೂರ್ಣಿಮ ಭಗವಾನ್ – 'ಎಚ್ಚರ ಮತದಾರ ಎಚ್ಚರ' (ಮುಕ್ತಕ)

ಡಾ. ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗದ ಮುಕ್ತಕಗಳನ್ನು ನೆನಪಿಸುವಂತಿರುವ ಶ್ರೀಮತ ಪೂರ್ಣಿಮ ಭಗವಾನ್ ಅವರು ರಚಿಸಿ ಪ್ರಸ್ತುತಪಡಿಸಿದ 'ಎಚ್ಚರ ಮತದಾರ ಎಚ್ಚರ' ಎಂಬ ಮುಕ್ತಕವು ಸಂದರ್ಭೋಚಿತವೂ, ಸಮಯೋಚಿತವೂ ಆಗಿದೆ. ಇನ್ನು ಕೆಲವೇ ದಿನಗಳಲ್ಲಿ ನಡೆಯುವ ಭಾರತದ ಲೋಕಸಭೆ ಚುನಾವಣೆಯಲ್ಲಿ ಅಬ್ಬರದ ಪ್ರಚಾರ, ಮತದಾರನಿಗೆ ಒಡ್ಡುವ ಆಮಿಷಗಳು – ಮೊದಲಾದವುಗಳಿಂದ ವಿಚಲಿತರಾಗದೆ ನಿರ್ಭಯದಿಂದ ನಿಮ್ಮ ಅತ್ಯಮೂಲ್ಯವಾದ ಮತದಾನದಲ್ಲಿ ಭಾಗವಹಿಸಿ ಎಂಬ ಸಂದೇಶ ಸಾರಿದ್ದಾರೆ

8. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ – 'ಮತ್ತೆ ಬಂತು ಯುಗಾದಿ' (ಕವನ)

'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎಂಬ ಡಾ. ದ.ರಾ.ಬೇಂದ್ರೆ ಅವರ ಕವನವನ್ನು ನೆನಪಿಸುವ ಮತ್ತೊಂದು ಕವಿತೆ ರಚಿಸಿರುವ ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ಅವರು ಚೈತ್ರ ಮಾಸದ, ವಸಂತ ಮಾಸದ, ಪ್ರಕೃತಿಯ ಸೌಂದರ್ಯ-ಸೊಬಗನ್ನು ಕಾವ್ಯಮಯವಾಗಿಸಿದ್ದಾರೆ. ಕಷ್ಟ-ಸುಖ, ನೋವು-ನಲಿವು, ಬೇವು-ಬೆಲ್ಲ ಇವೆಲ್ಲವುಗಳ ನಡುವೆ ಸಮರಸವೇ ಜೀವನ ಎಂಬ ಸಂದೇಶ ಸಾರಿದ್ದಾರೆ.

9. ಶ್ರೀ ಜಿ.ವಿ.ಅರುಣ– 'ದೇವಾಲಯ ಪ್ರವಾಸೋದ್ಯಮ – ದೇಶದ ಆರ್ಥಿಕತೆಗೆ ದಿಕ್ಸೂಚಿ'

ಸಸಕಸ ವೇದಿಕೆಯ ಹಿರಿಯ ಸದಸ್ಯರಲ್ಲೊಬ್ಬರಾದ ಶ್ರೀ ಜಿ.ವಿ.ಅರುಣ ಅವರು ಒಬ್ಬ ಪ್ರಬುದ್ಧ ಲೇಖಕರು. ಹಲವಾರು ಉತ್ತಮ ಲೇಖನಗಳಿಂದ ಇವರು ಬಹಳ ಪ್ರಸಿದ್ಧರಾಗಿದ್ದಾರೆ. ಇವರ ಬರಹಗಳು ಓದುಗನಿಗೆ ಬಹಳ ಪ್ರಿಯ ಹಾಗೂ ವಾಸ್ತವಿಕ ಎನಿಸುತ್ತದೆ. ಇಂದಿನ ಸಾಹಿತ್ಯ ದಾಸೋಹದಲ್ಲಿ ಶ್ರೀ ಅರುಣ ಅವರು ಒಂದು ವೈಚಾರಿಕ ಪ್ರಬಂಧವನ್ನು ಮಂಡಿಸಿದ್ದಾರೆ. 'ಪ್ರವಾಸೋದ್ಯಮವು ದೇಶದ ಆರ್ಥಿಕತೆಗೆ ಒಂದು ದಿಕ್ಸೂಚಿ' ಎಂಬ ಶೀರ್ಷಿಕೆಯೊಡನೆ, ಲೇಖಕರು ಹಲವಾರು ವಾಸ್ತವಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಅವಲೋಕನ ಮಾಡಿರುತ್ತಾರೆ. ವಿಮಾನಯಾನ ನಮಗಲ್ಲ ಎಂದು ಭಾವಿಸಿದ್ದ ಜನರಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಪ್ರಜೆಗಳಿಗೆ

ಹಲವಾರು ನಿದರ್ಶನಗಳ ಮೂಲಕ ಯಾವುದೂ ಅಸಾಧ್ಯವಲ್ಲ ಎಂಬುದನ್ನು ವಿವರಿಸಿದ್ದಾರೆ. ಪ್ರವಾಸದೊಂದಿಗೆ ದೇಶದ ಆರ್ಥಿಕತೆಯ ಅಭಿವೃದ್ಧಿಯು ಪರಿಣಾಮಕಾರಿ ಎಂದು ವಿಶ್ಲೇಷಿಸಿದ್ದಾರೆ. ಶ್ರೀ ಅರುಣ ಅವರು ಅಭಿನಂದನಾರ್ಹರು.

10. ಶ್ರೀಮತಿ ಮಾಲತಿ ಶ್ರೀನಿವಾಸನ್– 'ರೇ... ರಾಜ್ಯ' ಮತ್ತು 'ತಾಯ್ತನದ ಸವಿ' (ಎರಡು ಕವನಗಳು)

ನಿವೃತ್ತ ಪ್ರಾಧ್ಯಾಪಕಿ. ಪ್ರವೃತ್ತಿಯಲ್ಲಿ ಸಾಹಿತಿ, ಲೇಖಕಿ, ಸುಶ್ರಾವ್ಯ ಹಾಡುಗಾರ್ತಿ, ಸಸಕಸ ವೇದಿಕೆಯ ಹಿರಿಯ ಸದಸ್ಯೆ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರದು ಬಹುಮುಖ ಪ್ರತಿಭೆ. ಇವರ ಪ್ರಬಂಧಗಳಾಗಲೀ, ಕವನಗಳಾಗಲೀ, ಓದುಗರ ಮನಸೆಳೆಯುವುದರಲ್ಲಿ ಸಂಶಯವಿಲ್ಲ ಎಂದು ನಾನು ಭಾವಿಸಿದರೇ.... ನಡೆದು ಬಂದ ಹಾದಿಯನ್ನು ಹಿಂದಿರುಗಿ ನೋಡಲು ಸಾಧ್ಯವಾದ ರೇ... ಕಳೆದುಹೋದ ಕಷ್ಟ–ಸುಖ, ದುಃಖ–ದುಮ್ಮಾನಗಳನ್ನು ದೂರಾಗಿಸುವಂತಾದ ರೇ... ಇತರರಿಗೆ ತನ್ನಿಂದ ಆಗಿರಬಹುದಾದ ನೋವನ್ನು ಮರುಕಳಿಸ ದಂತಾಗಿಸಬೇಕಾದ ರೇ.. ಎಂಬ ಆಶಾಭಾವನೆಯಿಂದ ಸುಮಧುರ ಜೀವನ ನಡೆಸುವಂತಾದ ರೇ... ಎಂಬ 'ರೇ...' ರಾಜ್ಯದಲ್ಲಿ ವಿಹರಿಸುತ್ತಿರುವ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ ಮೊದಲನೇ ಕವಿತೆ ಮನಮುಟ್ಟುವಂತಿದೆ.

ಎರಡನೇ ಕವಿತೆ 'ತಾಯ್ತನದ ಸವಿ'. ಹೆತ್ತ ಒಡಲು ತನ್ನ ತಾಯ್ತನ ಅನುಭವದ ಸವಿಯನ್ನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ ಎಂಬುದನ್ನು ಪ್ರತಿಪಾದಿಸುವಂತೆ ರಚಿಸಿದ ಈ ಕವನ, ಕರುಳ ಬಳ್ಳಿಯ ಸಳೆತ,, ಹುಟ್ಟು–ಸಾವು ಎಂಬ ನಿರಂತರ ಚಲನೆ. ಇದು ಪ್ರಕೃತಿಯ ನಿಯಮ. ದೇವನಿತ್ತ ವರಪ್ರಸಾದ ಎಂದು ತಮ್ಮ ಕವನದ ಅಂತ್ಯ ಕಂಡಿದ್ದಾರೆ.

11. ಶ್ರೀಮತಿ ನಾಗರತ್ನ ಚಂದ್ರಶೇಖರ್ – 'ಹಿರೋಃಷಿ'

ಶ್ರೀಮತಿ ನಾಗರತ್ನ ಚಂದ್ರಶೇಖರ್ ಒಬ್ಬ ಹವ್ಯಾಸಿ ಪತ್ರಕರ್ತೆ, ಬರಹಗಾರ್ತಿ. ಲೇಖಕಿಯರ ಸಂಘದ ಮಾಜಿ ಕಾರ್ಯದರ್ಶಿ, ಪ್ರವಾಸ ಪ್ರಿಯೆ. ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ಅಪಾರ ಸಾಧನೆ ಮಾಡಿರುವ ಪ್ರತಿಭಾವಂತೆ. ಕಥೆ, ಪ್ರಬಂಧ, ಜೊತೆಗೆ ಸುಲಲಿತವಾದ, ಹಾಸ್ಯ ಪ್ರಧಾನವಾದ ಲಲಿತ ಪ್ರಬಂಧಗಳನ್ನು ಪ್ರಕಟಿಸಿರುತ್ತಾರೆ. ತಾವೇ ಸ್ವತಃ ಪ್ರಕಟಣೆ ಮಾಡಿದಾಗ ಕೊಂಡು ಓದುವ ಮಂದಿ ಕಡಿಮೆಯಿರುವ ಸಂದರ್ಭದಲ್ಲಿ ನಾನು ಏತಕ್ಕಾಗಿ ಬರೆಯಬೇಕು ಎನಿಸಿದರೂ ಬರೆಯುವುದನ್ನು ನಿಲ್ಲಿಸದ ಛಲಗಾರ್ತಿ.

ನಾಗರತ್ನ ಅವರು ಇಂದಿನ ತಮ್ಮ ಪ್ರಸ್ತುತಿಯಲ್ಲಿ, ತಾವು. ಇತ್ತೀಚಿಗೆ ಕೈಗೊಂಡಿದ್ದ ಜಪಾನ್ ಪ್ರವಾಸ ಕುರಿತು ಬೆಳಕು ಚೆಲ್ಲಿದ್ದಾರೆ. ಪ್ರವಾಸಿ ಸಂಸ್ಥೆಯ ಮ್ಯಾನೇಜರ್ ಹಾಗೂ ಗೈಡ್ ಆಗಿದ್ದ 'ಹಿರೋಷಿ' ಎಂಬ ವ್ಯಕ್ತಿಯನ್ನು ಕುರಿತು ವಿವರವಾಗಿ ಬರೆದಿದ್ದಾರೆ ಸಮಯಾಭಾವದಿಂದ ಪ್ರವಾಸದ ವಿವರವನ್ನು ನಾನು ನೀಡಲು ಹೋಗುವುದಿಲ್ಲ. ಆದರೆ ನನಗೆ ಪ್ರಿಯವಾದುದೆಂದರೆ ಪ್ರವಾಸಿ ಸಂಸ್ಥೆಯ ಗೈಡ್ ಬಗೆಗೆ. ಆತನು ನೀಡುತ್ತಿದ್ದ ವಿವರಣೆಗಳು ಜಪಾನ್ ದೇಶ, ಅಲ್ಲಿಯ ನಾಗರೀಕತೆ ಮೊದಲಾದವುಗಳನ್ನು ಕೂಡಿದ್ದಿತು, ಪ್ರವಾಸದುದ್ದಕ್ಕೂ ಆತ ಎಲ್ಲ ಪ್ರವಾಸೀ ಬಂಧುಗಳ ಮನಸ್ಸನ್ನು ಗೆದ್ದಿದ್ದ. ಶ್ರೀಮತಿ ನಾಗರತ್ನ ಅವರ ಲೇಖನ ನಮ್ಮೆಲ್ಲರನ್ನು ಪ್ರವಾಸ ಹೋಗಿಬರಲು ಪ್ರೇರೇಪಿಸುತ್ತಿದೆ.

12. ಶ್ರೀ ಕೆ.ಎನ್.ಮಹಾಬಲ – 'ಆಹಾರ ಸಮಸ್ಯೆ'

ತಮ್ಮ ಪ್ರಬುದ್ಧ ಲೇಖನಗಳಿಂದ ಜನಪ್ರಿಯತೆ ಗಳಿಸಿರುವ ಸಸಕಸ ವೇದಿಕೆಯ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲ ಅವರು ಲಲಿತ ಪ್ರಬಂಧ, ಕವನ, ವಿಮರ್ಶೆ – ಮೊದಲಾದ ಪ್ರಾಕಾರಗಳಿಗೂ ತಮ್ಮ ಛಾಪು ಒತ್ತಿರುವವರು. ಇವರ ಲಲಿತ ಪ್ರಬಂಧಗಳ ರಚನೆ ಅನೇಕ ವೈವಿಧ್ಯತೆಗಳಿಂದ ಕೂಡಿರುತ್ತವೆ ಎಂಬುವುದರಲ್ಲಿ ಅನುಮಾನವಿಲ್ಲ. ತಮ್ಮ ಲಲಿತ ಪ್ರಬಂಧಗಳು ಹಾಸ್ಯ, ವೈಚಾರಿಕತೆ ಮತ್ತು ಚಿಂತನಾ ಲಹರಿಯಿಂದ ಕೂಡಿ ಪ್ರತಿ ಓದುಗನಿಗೂ ಮುದ ನೀಡುತ್ತದೆ.

ಈ ಬಾರಿ ಅವರು ಪ್ರಸ್ತುತಿಪಡಿಸಿರುವ ಲಲಿತ ಪ್ರಬಂಧದ ಶೀರ್ಷಿಕೆ 'ಆಹಾರ ಸಮಸ್ಯೆ'. ಲೇಖಕರು ವಿದೇಶ ಪ್ರವಾಸಕ್ಕೆ ತೆರಳಿದಾಗ ಉಂಟಾಗುವ ಆಹಾರ ಸಮಸ್ಯೆಯನ್ನು ಲಘು ಹಾಸ್ಯವಾಗಿ, ಸ್ವಾನುಭವದಿಂದಾದ ಸಂಗತಿಗಳ ವಿವರಣೆಯೊಂದಿಗೆ ವಿಶ್ಲೇಶಿಸಿದ್ದಾರೆ. ದಕ್ಷಿಣ ಭಾರತದ ಊಟ ತಿಂಡಿಯ ರುಚಿಯಿಂದ ವಂಚಿತರಾದಾಗ ನೆದರ್‌ಲ್ಯಾಂಡಿನಲ್ಲಿದ್ದ ತಮ್ಮ ತಂಗಿಯ ಮನೆಯಲ್ಲಿನ ಊಟೋಪಚಾರದ ಸವಿಯನ್ನು ನೆನಪಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಮೈಸೂರು ಕಾಫಿಗೆ ವಿದೇಶದಲ್ಲಿ ಪಡುವ ಪಾಡಿಗೆ ಬೇಸರಗೊಂಡು ಬೆಂಗಳೂರಿಗೆ ಬಂದು ಮನೆಗೆ ವಾಪಸಾಗುವಾಗ ದಾರಿ ಮಧ್ಯೆ ಸಿಕ್ಕಿದ ಉಡುಪಿ ರೆಸ್ಟೋರೆಂಟಿಗೆ ನುಗ್ಗಿ ಇಡ್ಲಿ ವಡೆ, ಕಾಫಿಯೊಂದಿಗೆ, ಕಳೆದ ಹೋದ ವೈಭವವನ್ನು ಮರಳಿ ಪಡೆದುದನ್ನು ಉತ್ಸಾಹದಿಂದ ವಿವರಿಸಿದ್ದಾರೆ. ಈ ಲಲಿತ ಪ್ರಬಂಧ ಎಲ್ಲ ಓದುಗರ ಮೆಚ್ಚುಗೆ ಪಡೆಯುವುದದಲ್ಲಿ ಸಂಶಯವಿಲ್ಲ

13. ಶ್ರೀ ಬೆಂ.ಶ್ರೀ. ರವೀಂದ್ರ – 'ಭಗತ್ ಸಿಂಗ್ ಬರೆದ ಮುನ್ನುಡಿ'

ಕನ್ನಡ ಸಾಹಿತ್ಯ ಪ್ರಿಯರು, ಲೇಖಕರು, ಕವಿಗಳು, ಸಸಕಸ ವೇದಿಕೆಯ ಪ್ರಧಾನ ಸಂಚಾಲಕರೂ ಆಗಿರುವ ಬೆಂ.ಶ್ರೀ.ರವೀಂದ್ರ ಅವರು, ಹೆಚ್ಚಾಗಿ ಕವನಗಳನ್ನು ರಚಿಸುವುದರ ಜೊತೆಗೆ, ಪ್ರಬಂಧ ಹಾಗೂ ವೈಚಾರಿಕ ಲೇಖನಗಳನ್ನೂ ಸಹ ಬರೆಯುತ್ತಾರೆ. ಅಲ್ಲದೆ ಇತರ ಬರಹಗಾರರನ್ನೂ ಸಹ ಪ್ರೋತ್ಸಾಹಿಸುತ್ತಾರೆ.

ರವೀಂದ್ರ ಅವರು ಪ್ರಸ್ತುತ ಮಂಡಿಸಿರುವ ಲೇಖನ ವೈಚಾರಿಕತೆಯಿಂದ ಕೂಡಿದೆ. ಇವರು ಆಯ್ದುಕೊಂಡಿರುವ ವಿಷಯವೂ ಆಕರ್ಷಣೀಯವಾಗಿದೆ. ಪ್ರಾಯಶಃ ಎಲ್ಲ ಬರಹಗಾರರೂ ತಮ್ಮ ಪುಸ್ತಕಕ್ಕೆ ಮುನ್ನುಡಿ ಬರೆಸುತ್ತಾರೆ. ಇಲ್ಲಿ ರವೀಂದ್ರ ಅವರು ಮುನ್ನುಡಿಗಾರರನ್ನೇ ಕುರಿತು ಬರೆದಿರುವುದು ಉಲ್ಲೇಖನಾರ್ಹ. ಬಹಳ ಅಪೂರ್ವವಾದ ಸಂಗತಿಗಳತ್ತ ತಮ್ಮ ದೃಷ್ಟಿ ಹಾಯಿಸಿದಾರೆ. 'ಭಗತ್ ಸಿಂಗ್' ಎಂಬ ದೇಶಪ್ರೇಮಿಯ ದಿಟ್ಟ ಹೋರಾಟ, ಆತ ನಡೆದು ಬಂದ ದಾರಿ, ದೇಶಕ್ಕೆ ಅವರು ನೀಡಿದ ಕೊಡುಗೆ ಮೊದಲಾದವುಗಳನ್ನು ಮೆಚ್ಚಿರುವ ರವೀಂದ್ರ ಅವರು, ಭಗತ್ ಸಿಂಗರು ಪುಸ್ತಕವೊಂದಕ್ಕೆ ಬರೆದಿರುವ ಮುನ್ನುಡಿಯಿಂದ ಹೆಮ್ಮೆ ಪಡುತ್ತಾರೆ.

ಹೌದು, ಭಗತ್ ಸಿಂಗರು, ತಮ್ಮ ಗೆಳೆಯ 'ಲಾಲ ರಾಮ ಶರಣ್ ದಾಸ್' ಅವರ 'ಸ್ವಪ್ನ ಲೋಕ' (The Dream Land) ಎಂಬ ಕಾವ್ಯಾತ್ಮಕ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ, ತನ್ನ ವಿಷಯ ಗ್ರಹಣ, ಭಾಷಾ ಪ್ರೌಢಿಮೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಮೆರೆದಿದ್ದಾರೆ. ಸಮಯಾಭಾವದಿಂದ ಇಲ್ಲಿ ಹೆಚ್ಚು ವಿಶ್ಲೇಷಣೆ ಮಾಡಲಾಗದಿದ್ದರೂ, ರವೀಂದ್ರರ ಬರಹ ನಮ್ಮೆಲ್ಲರನ್ನೂ ಭಗತ್ ಸಿಂಗರ ಮತ್ತು ಲಾಲ ರಾಮ್ ಶರಣ್ ದಾಸರ ಬರಹಗಳನ್ನು ಓದಲು ಪ್ರೇರೇಪಿಸುತ್ತದೆ. ಅಪರೂಪದಲ್ಲಿ ಅಪರೂಪ ಎನ್ನುವಂತೆ ರವೀಂದ್ರ ಅವರು ಪ್ರಸ್ತುತಪಡಿಸಿರುವ ಈ ವಿಭಿನ್ನ ಲೇಖನ ಎಲ್ಲರ ಗಮನ ಸೆಳೆಯುವುದರಲ್ಲಿ ಯಾವುದೇ ಅನುಮಾನವಿಲ್ಲ.

14. ಶ್ರೀಮತಿ ಜಿ.ವಿ.ನಿರ್ಮಲ – 'ಹದಿನೆಂಟನೇ ಲೋಕ'

ಶ್ರೀಮತಿ ಜ.ವಿ.ನಿರ್ಮಲ ಅವರು ಲಲಿತ ಪ್ರಬಂಧವೊಂದನ್ನು ಪ್ರಸ್ತುತಪಡಿಸಿದ್ದಾರೆ. ಇವರು ಆಯ್ದುಕೊಂಡಿರುವ ವಿಷಯ ಪ್ರಸಕ್ತ ಪ್ರಚಲಿತದಲ್ಲಿರುವ ಸಂಗತಿ, ಲೋಕಸಭಾ ಚುನಾವಣೆ. ವಿಷಯ ಚುನಾವಣೆಗೆ ಸಂಬಂಧಿಸಿರುವುದಾದರೂ ಹಲವಾರು ಸಂಗತಿಗಳ ಕಡೆ ಇವರು ಗಮನ ಹರಿಸಿದ್ದಾರೆ. ಮತ ಎಂಬುವುದು ಪವಿತ್ರವೇ ಆದರೂ ಜಾತಿ-ಪಂಗಡಗಳೇ ಪ್ರಧಾನವಾಗಿರುವ ಈ ಚುನಾವಣೆಯಲ್ಲಿ ಯಾರಿಗೆ ಮತ ಹಾಕಬೇಕು ಎನ್ನುವುದು ಮತದಾರನ ಗೊಂದಲದ ಪರಿಸ್ಥಿತಿ. ಮತ ಪೆಟ್ಟಿಗೆಯಲ್ಲಿನ ಗುಂಡಿಯನ್ನು ಸರಿಯಾದ ವ್ಯಕ್ತಿಗೆ ಒತ್ತಬೇಕು, ಬೆಂಗಳೂರಿನ ರಸ್ತೆಗಳ ಗುಂಡಿಗಳಿಗೆ ಬೀಳದಿರುವಂತೆ ಎಚ್ಚರ ವಹಿಸುವಂತೆ ಬಲು ಎಚ್ಚರಿಕೆಯಿಂದ ಮತ ಚಲಾಯಿಸಿ ಎಂಬ ಧ್ಯೇಯ ವಾಕ್ಯದೊಂದಿಗೆ ಲಲಿತ ಪ್ರಬಂಧ ಮುಕ್ತಾಯಗೊಂಡಿದೆ.

15. ಶ್ರೀ ಎಂ.ಜಿ. ವೆಂಕಟೇಶ ಮೂರ್ತಿ – 'ಬಹುಮುಖ ಪತಿಭೆಯ ಉದಯ ಜಾದೂಗಾರ್'

ಇಂದಿನ ಸಾಹಿತ್ಯ ದಾಸೋಹದಲ್ಲಿ ನನ್ನದೇ ಲೇಖನಿಯಲ್ಲಿ ಮೂಡಿಬಂದ ನಾಡಿನ ಜನಪ್ರಿಯ ಜಾದುಗಾರರೂ, ಬರಹಗಾರರೂ, ಛಾಯಾಗ್ರಾಹಕರು, ಕಿರುತೆರೆ ನಟರೂ ಆದ ಶ್ರೀ ಉದಯ ಜಾದೂಗಾರ್ ಅವರ ಬಗೆಗಿನ ಪರಿಚಯ ಲೇಖನವನ್ನು ನಾನು ಪ್ರಸ್ತುತಪಡಿಸಿದ್ದೇನೆ.

ಎಲ್ಲರಿಗೂ ಧನ್ಯವಾದಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 224 ನಡೆದ ದಿನಾಂಕ: 14 ಏಪ್ರಿಲ್ 2024

ಸಂಚಿಕೆಯ ಬಿಡುಗಡೆ ದಿನಾಂಕ: 11 ಮೇ 2024 – ಶನಿವಾರ